ಮಾನವಿಕ ಕರ್ಣಾಟಕ

ಸಂಪುಟ ೧೨ ಸಂಚಿಕೆ ೧

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೧

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ' ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೨ ಸಂಚಿಕೆ ೧

೪೫

ನವಂಬರ್ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೧

MANAVIKA KARNATAKA, Kannada quarterly of the University of Mysore. Volume 12, Number 1, November 1981. Edited by Dr. B. R. Gopal and Dr. C. M. Muniramappa.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಸಿ. ಎಂ. ಮುನಿರಾಮಪ್ಪ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮುದ್ರಕರು

ಶ್ರೀಲಕ್ಷ್ಮೀ ಮುದ್ರಣಾಲಯ, ರವೆ ಬೀದಿ, 2 ನೇ ಕ್ರಾಸ್, ಮೈಸೂರು - 1

ವಿಷಯ ಸೂಚಿ

		ಪುಟ
೧ ಪ್ರಾಚೀನ ಪಾಶ್ಚಾತ್ಯ ತಾತ್ತ್ವಿಕ ಚಿಂತನೆ	ವಿ. ಎನ್. ಶೇಷಗಿರಿರಾವ್	೧
೨ ಭಾಷಾಂತರದಲ್ಲಿ ಪರ್ಯಾಯ ಪದಗಳು	ಎಚ್. ಎಸ್. ಹರಿಶಂಕರ್	೨೭
೩. ಕಲಾವಿದ ಹರ್ತಿಕೋಟೆ ಸುಬ್ಬಣ್ಣ	ಪಿ. ಆರ್. ತಿಪ್ಪೇಸ್ವಾಮಿ	೩೩
೪ ಶಿಕ್ಷಣ ಮತ್ತು ಜೀವನ	ಬಿ. ಕೃಷ್ಣ	೩೯
೫ ದ್ವೈತ ಸಿದ್ಧಾಂತ	ಮೂಲ : ಎಸ್. ಎಸ್. ರಾಘವಾಚಾರ್ ಅನುವಾದ : ಸಿ. ಸೇತೂಬಾಯಿ	೪೯

ಈ ಸಂಚಿಕೆಯ ಲೇಖಕರು

೧.	ವಿ. ಎನ್. ಶೇಷಗಿರಿ ರಾವ್	ಅಧ್ಯಾಪಕ, ತತ್ವಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೫೭೦ ೦೦೬
೨.	ಎಚ್. ಎಸ್. ಹರಿಶಂಕರ್	ಅಧ್ಯಾಪಕ, ಭಾಷಾಂತರ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೩.	ಪಿ. ಆರ್. ತಿಪ್ಪೇಸ್ವಾಮಿ	ಕ್ಯೂರೇಟರ್, ಜಾನಪದ ವಸ್ತು ಸಂಗ್ರಹಾಲಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
೪.	ಬಿ. ಕೃಷ್ಣ	ಅಧ್ಯಾಪಕ, ತತ್ವಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು-೫೭೦ ೦೦೫
೫.	ಸಿ. ಸೀತೂಬಾಯಿ	೩೩, ೬ನೆಯ ಮುಖ್ಯರಸ್ತೆ, ಎಂ. ಎಚ್. ಬ್ಲಾಕ್, ಜಯಲಕ್ಷ್ಮೀಪುರಂ, ಮೈಸೂರು-೫೭೦ ೦೧೨

ಡಾ॥ ವಿ. ಎನ್. ಶೇಷಗಿರಿರಾವ್

ಪ್ರಾಚೀನ ಪಾಶ್ಚಾತ್ಯ ತಾತ್ವಿಕ ಚಿಂತನೆ—ಒಂದು ಸ್ಥೂಲ ವಿವೇಚನೆ

೧

ಪಾಶ್ಚಾತ್ಯ ತತ್ವಶಾಸ್ತ್ರವನ್ನು ಕಾಲದ ದೃಷ್ಟಿಯಿಂದಲೂ, ವ್ಯಾಸಂಗದ ಅನುಕೂಲ ದೃಷ್ಟಿಯಿಂದಲೂ ನಾಲ್ಕು ಭಾಗಗಳನ್ನಾಗಿ ಮಾಡಬಹುದು.

i) ಪ್ರಾಚೀನ ತತ್ವಶಾಸ್ತ್ರ (Ancient Philosophy)
ii) ಮಧ್ಯಕಾಲೀನ ತತ್ವಶಾಸ್ತ್ರ (Medieval Philosophy)
iii) ಆಧುನಿಕ ತತ್ವಶಾಸ್ತ್ರ (Modern Philosophy)
iv) ಸಮಕಾಲೀನ ತತ್ವಶಾಸ್ತ್ರ (Contemporary Philosophy)

ಪ್ರಾಚೀನ ಪಾಶ್ಚಾತ್ಯ ತತ್ವಶಾಸ್ತ್ರ ಪ್ರಧಾನತಃ ಗ್ರೀಕ್ ತತ್ವಶಾಸ್ತ್ರವಾಗಿದೆ. ಗ್ರೀಸ್, ತತ್ವಶಾಸ್ತ್ರದ ತವರುಮನೆಯಾಗಿದೆ. ಸುಮಾರು ಕ್ರಿ. ಪೂ. 7ನೆಯ ಶತಮಾನದಲ್ಲಿ ಗ್ರೀಕ್ ಚಿಂತಕ ಥಾಲಿಸ್‌ನಿಂದ ಪ್ರಾರಂಭವಾದುದು ಪ್ರಾಚೀನ ತತ್ವಶಾಸ್ತ್ರ. ಇದು ವಿಶ್ವದ ರಹಸ್ಯದ ಬಗ್ಗೆ ಆಸಕ್ತಿಯನ್ನು ತಳೆದಿತ್ತು. ಈ ಚಿಂತನೆ ಅನಾಕ್ಸಿಮಾಂಡರ್, ಅನಾಕ್ಸಿಮಿನಸ್, ಪೈಥಾಗೊರಾಸ್, ಪಾರ್ಮಿನೈಡಿಸ್, ಹೆರಾಕ್ಲೈಟಸ್ ಎಂಪೆಡೋಕ್ಲಸ್, ಅಣುವಾದಿಗಳಾದ ಲೂಸಿಪ್ಪಸ್ ಮತ್ತು ಡೆಮಾಕ್ರೈಟಸ್, ಅನಾಕ್ಸಗೊರಾಸ್ ಮುಂತಾದವರ ಮೂಲಕ ಹಾಯ್ದು, ಸಾಕ್ರಟೀಸ್, ಪ್ಲೇಟೋ ಮುಂತಾದ ಚಿಂತಕರ ಕೈಯಲ್ಲಿ ವಿಸ್ತಾರಗೊಂಡು ಅರಿಸ್ಟಾಟಲನಲ್ಲಿ ಪರಮೋತ್ಕೃಷ್ಟತೆಯನ್ನು ಹೊಂದಿತು. ಅರಿಸ್ಟಾಟಲನ ಅನಂತರದ ತತ್ವಶಾಸ್ತ್ರ (post-Aristotelian Philosophy) ಗ್ರೀಕ್ ತಾತ್ವಿಕ ಚಿಂತನೆಗೆ ಹೊಸದೇನನ್ನೂ ಕೊಡದೆ ಕುಂಠಿತವಾಯಿತು.

ಮಧ್ಯಕಾಲೀನ ತತ್ವಶಾಸ್ತ್ರವೆಂದು ಕರೆಸಿಕೊಳ್ಳುವ ಚಿಂತನೆಯು ಸುಮಾರು ಕ್ರಿ.ಶ. ಎರಡನೆಯ ಶತಮಾನದಿಂದ ಹದಿನೈದನೆಯ ಶತಮಾನದವರೆಗೂ ಪಸರಿಸಿತ್ತೆಂದು ಹೇಳಬಹುದು. ಈ ಕಾಲದಲ್ಲಿ ಮಹಮ್ಮದೀಯ, ಯಹೂದಿ ಹಾಗೂ ಕ್ರೈಸ್ತ ಚಿಂತನೆಗಳು ಬೆಳೆದು ಪ್ರವರ್ಧಮಾನಕ್ಕೆ ಬಂದವು. ಮತಧರ್ಮ, ಅದರಲ್ಲೂ ಕ್ರೈಸ್ತಧರ್ಮವೇ ಮಧ್ಯಕಾಲೀನ ಚಿಂತನೆಯ ಕೇಂದ್ರ ಬಿಂದು.

ಆಧುನಿಕ ಪಾಶ್ಚಾತ್ಯ ತತ್ವಶಾಸ್ತ್ರ ಕ್ರಿ. ಶ. 16ನೆಯ ಶತಮಾನದಲ್ಲಿ ಪ್ರಾರಂಭವಾಯಿತು. ಪ್ರಸಿದ್ಧ ಫ್ರೆಂಚ್ ತತ್ವಜ್ಞಾನಿ, ವಿಜ್ಞಾನಿ ಹಾಗೂ ಗಣಿತಜ್ಞನಾದ ರೇನೆ ಡೇಕಾರ್ಟ್ ಅದರ ಜನಕ. ಆಧುನಿಕ ಚಿಂತನೆಯನ್ನು ಎಲ್ಲ ವಿಧವಾದ ಅವೈಚಾರಿಕ ಅಧಿಕಾರ (dogmatic authoritarianism) ದಿಂದ ಬಿಡುಗಡೆ ಮಾಡಿದ್ದೇ ಅವನ ಮಹತ್ಕಾರ್ಯ. ಮಾನವನೇ ಈ ಕಾಲದ ತಾತ್ವಿಕ ಚಿಂತನೆಯ ಕೇಂದ್ರಬಿಂದು; ಅವನ ಮೂಲಭೂತ ಸಮಸ್ಯೆಗಳ ವಿಶ್ಲೇಷಣೆ ಹಾಗೂ ಪರಿಹಾರ ಸಾಧ್ಯತೆಗಳೇ ಅದರ ಮುಖ್ಯ ವಿಷಯ. ಹೀಗೆ ಡೇಕಾರ್ಟನಿಂದ ಸ್ಫೂರ್ತಿಯನ್ನು ಪಡೆದ ಆಧುನಿಕ ಪಾಶ್ಚಾತ್ಯ ಚಿಂತನೆ ಹಂತಹಂತವಾಗಿ ಸ್ಪಿನೋಜ, ಲೈಬ್ನಿಸ್, ಲಾಕ್, ಬರ್ಕ್ಲಿ, ಹ್ಯೂಮ್, ಕಾಂಟ್, ಫೀಕೊ, ಮುಂತಾದ ಚಿಂತಾಕರ ಮೂಲಕ ಹಾಯ್ದು ತನ್ನ ಪರಾಕಾಷ್ಠತೆಯನ್ನು ಜರ್ಮನ್ ಚಿಂತಕನಾದ ಹೆಗಲ್‌ನಲ್ಲಿ ಮುಟ್ಟುತ್ತದೆ.

ತದನಂತರವೇ ಸಮಕಾಲೀನ ಪಾಶ್ಚಾತ್ಯ ಚಿಂತನೆ ಪ್ರಾರಂಭವಾಗುವುದು. ಬ್ರಾಡ್ಲೆ ಬೊಸಾಂಕೆ, ಗ್ರೀನ್, ಲೋಟ್ಸೆ, ರಾಯ್ಸ್, ಬೌನೆ, ಬ್ರೈಟ್‌ಮನ್, ವಿಲಿಯಂ ಜೇಮ್ಸ್, ಡ್ಯೂಯಿ, ಅಸ್ತಿತ್ವವಾದಿಗಳಾದ ಕಿರ್ಕ್‌ಗಾರ್ಡ್, ಮಾರ್ಸೆಲ್, ಎಸ್‌ಪರ್ಸ್, ಸಾರ್ತ್, ಹೆಡಗರ್, ಪರಿಣಾಮವಾದಿಗಳಾದ ಮಾರ್ಗನ್, ಅಲೆಕ್ಸಾಂಡರ್, ಬರ್ಗ್‌ಸನ್, 'ತಾತ್ವಿಕ ವಿಶ್ಲೇಷಕ'ರಾದ ರಸಲ್, ವಿಜ್ಜೆನ್‌ಸ್ಟೈನ್ ಏಯರ್, ವಿಜ್ಞಾನಿ ತಾತ್ವಿಕನಾದ ವೈಟ್‌ಹೆಡ್ ಮುಂತಾದ ಚಿಂತಕರ ಕೈಯಲ್ಲಿ ಪುಷ್ಟಿಗೊಂಡು ವಿಚಾರ ಪ್ರಚೋದಕವೂ ವಿಮರ್ಶಾತ್ಮಕವೂ ಮೌಲ್ಯಪ್ರಧಾನವೂ ಆಗಿ ಮುಂದುವರಿಯುತ್ತಿದೆ.

೨

ಪುರಾತನ ಗ್ರೀಕ್ ತತ್ವಶಾಸ್ತ್ರವನ್ನು ಪುನಃ ನಾಲ್ಕು ಉಪ ಭಾಗಗಳನ್ನಾಗಿ ಮಾಡಬಹುದು :

(i) ಸೋಫಿಸ್ಟರಿಗಿಂತ ಮೊದಲು ಇದ್ದ ಗ್ರೀಕ್ ತಾತ್ವಿಕ ಚಿಂತನೆ
(pre-Sophistic Philosophy)
(ಸುಮಾರು ಕ್ರಿ. ಪೂ. 585 ರಿಂದ ಕ್ರಿ. ಪೂ. 500 ರವರೆಗೆ)

(ii) ಸೋಫಿಸ್ಟರ ಕಾಲದ ತಾತ್ವಿಕ ಚಿಂತನೆ
(Sophistic Philosophy)
(ಸುಮಾರು ಕ್ರಿ. ಪೂ. 500 ರಿಂದ 430 ರವರೆಗೆ)

(iii) ಸಾಕ್ರಟೀಸನಿಂದ ಪ್ರಾರಂಭವಾಗಿ ಅರಿಸ್ಟಾಟಲನವರೆಗೂ ಮುಂದುವರಿದ ಗ್ರೀಕ್ ತಾತ್ವಿಕ ಚಿಂತನೆ (Socratic Philosophy)
(ಸುಮಾರು ಕ್ರಿ. ಪೂ. 430 ರಿಂದ ಕ್ರಿ. ಪೂ. 320 ರವರೆಗೆ) ಮತ್ತು

(iv) ಅರಿಸ್ಟಾಟಲನ ಅನಂತರದ ಗ್ರೀಕ್ ತಾತ್ವಿಕ ಚಿಂತನೆ.
(post-Aristotelian Philosophy)
(ಸುಮಾರು ಕ್ರಿ. ಪೂ. 320 ರಿಂದ ಕ್ರಿ. ಶ. 529 ರವರೆಗೆ)

i) ಈ ಮೊದಲೇ ತಿಳಿಸಿದಂತೆ ಸೋಫಿಸ್ಟರಿಗಿಂತ ಮೊದಲು ಇದ್ದ ಗ್ರೀಕ್ ತಾತ್ವಿಕ ಚಿಂತನೆ ಪ್ರಧಾನತಃ ವಿಶ್ವವನ್ನು ಕುರಿತದ್ದು. ನಮ್ಮ ಸುತ್ತಲೂ ಆವರಿಸಿರುವ ನಿಗೂಢ ವಿಶ್ವ, ಅದರ ಮೂಲ, ಆ ಮೂಲದಿಂದ ಅದು ಹೊರಬರುವ ಕ್ರಮ, ಅದರ ಸ್ವರೂಪ ಮುಂತಾದವುಗಳನ್ನು ತಿಳಿಯುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಇಲ್ಲಿ ಅಂತರ್ಯಕ್ಕಿಂತ ಬಾಹ್ಯವಿಶ್ವದ ಕಡೆಗೆ ಹೆಚ್ಚು ಗಮನ. ಈ ಚಿಂತನೆ ಅಯೋನಿಯಾ, ದಕ್ಷಿಣ ಇಟಲಿ, ಸಿಸಿಲಿ ಮುಂತಾದ ಪ್ರದೇಶಗಳಲ್ಲಿ ಜನ್ಮತಾಳಿ ಅಭಿವೃದ್ಧಿ ಹೊಂದಿತು.

ii) ಸೋಫಿಸ್ಟರ ಕಾಲದ ತಾತ್ವಿಕ ಚಿಂತನೆ ಪ್ರಧಾನತಃ ಮಾನವ ಸಂಬಂಧ ವಾದುದು. ಇಲ್ಲಿ ಅಂತರ್ಮುಖತೆ ತಲೆಯೆತ್ತುತ್ತದೆ. ಮಾನವನ ಶಕ್ತಿಸಾಮರ್ಥ್ಯ ಗಳೇನು ? ಜ್ಞಾನವೆಂದರೇನು ? ಅದು ಹುಟ್ಟುವ ಬಗೆ ಹೇಗೆ ? ಅದರ ಮೂಲಗಳಾವುವು ? ಮುಂತಾದ ಮಾನವ ಸಂಬಂಧವಾದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿಯುವ ಪ್ರಯತ್ನವಿದೆ ಇಲ್ಲಿ.

iii) ಸಾಕ್ರಟೀಸ್‌ನಿಂದ ಪ್ರಾರಂಭವಾದ ಗ್ರೀಕ್ ಚಿಂತನೆಯ ಕಾಲವನ್ನು ಪುನರ್ವ್ಯವಸ್ಥೆಯ ಕಾಲ ಎನ್ನಬಹುದು. ಇಲ್ಲಿಯೂ ಜ್ಞಾನ, ನೀತಿ, ಶೀಲ ಮುಂತಾದ ಮಾನವ ಸಂಬಂಧವನ್ನು ಕುರಿತ ಪ್ರಶ್ನೆಗಳಿಗೆ ನ್ಯಾಯ–ತರ್ಕಗಳನ್ನು ಸರಿಯಾದ ರೀತಿಯಲ್ಲಿ ಅನ್ವಯಿಸುವ ಮೂಲಕ ಉತ್ತರಗಳನ್ನು ಕಂಡುಹಿಡಿಯುವ ಪ್ರಯತ್ನವನ್ನು ನಿಷ್ಠೆಯಿಂದ ಮುಂದುವರಿಸಲಾಗಿದೆ.

iv) ಅರಿಸ್ಟಾಟಲನ ಅನಂತರದ ತಾತ್ವಿಕ ಚಿಂತನೆಯ ಬೆಳವಣಿಗೆ ಕ್ರಮಕ್ರಮೇಣ ಕ್ಷೀಣಗೊಳ್ಳುತ್ತದೆ. ಹೊಸದಾದ ಯಾವ ತಾತ್ವಿಕ ಸಿದ್ಧಾಂತವನ್ನೂ ಅದು ಬೆಳಕಿಗೆ ತರಲಿಲ್ಲ. ಇದರ ಕಾರ್ಯಕ್ಷೇತ್ರ ಅಥೆನ್ಸ್, ಅಲೆಕ್ಸಾಂಡ್ರಿಯ ಮತ್ತು ರೋಮ್. ಈ ಅವಧಿಯಲ್ಲಿ ಪುನಃ ಮೂರು ಉಪವಿಭಾಗಗಳನ್ನು ಮಾಡಬಹುದು.

(i) ಜೀನೋ ಸ್ಥಾಪಿಸಿದ ವಿರಕ್ತಮತ (Stoicism)

(ii) ಎಪಿಕ್ಯೂರಿಯನ್ನರ ಸುಖಾಂಕ್ಷಿ ಮತ (Hedonism) ಮತ್ತು

(iii) ನವೀನ ಪ್ಲೇಟೋ ಸಿದ್ಧಾಂತ (neo-Platonism)

೩

ಈಗ ಸೋಫಿಸ್ಟರಿಗಿಂತ ಮೊದಲಿದ್ದ ಗ್ರೀಕ್ ತಾತ್ವಿಕ ಚಿಂತನೆಯನ್ನು ಸ್ಥೂಲವಾಗಿ ವಿಶದಪಡಿಸಬಹುದು. ಸೋಫಿಸ್ಟರಿಗೆ ಪೂರ್ವದಲ್ಲಿದ್ದ ತಾತ್ವಿಕ ಚಿಂತನೆಯ ವೈಶಿಷ್ಟ್ಯವೇನೆಂದರೆ ಕಲ್ಪನಾ ವ್ಯಕ್ತಿಗಳ ಸಹಾಯವಿಲ್ಲದೆ, ದೇವರ ಮೊರೆಹೋಗದೆ, ದಂತಕತೆ, ಪುರಾಣ ಕಲ್ಪನೆಗಳಿಂದ ವಿಮುಖವಾಗಿ, ಸಹಜ, ಸ್ವಾಭಾವಿಕ, ವೈಜ್ಞಾನಿಕ ಕಾರಣಗಳಿಂದಲೇ ವಿಶ್ವವನ್ನು, ಅದರ ವ್ಯಾಪಾರಗಳನ್ನು ವಿವರಿಸುವ ಶ್ಲಾಘ್ಯ ಪ್ರಯತ್ನವನ್ನು ಮಾಡಿರುವುದು.

ಥಾಲಿಸ್

ಸೋಫಿಷ್ಟರಿಗೆ ಪೂರ್ವದಲ್ಲಿದ್ದ ಚಿಂತೆಯ ಹಾಗೂ ಪುರಾತನ ಪಾಶ್ಚಾತ್ಯ ತಾತ್ವಿಕ ಚಿಂತನೆಯ ಜನಕನೆಂದು ಪ್ರಸಿದ್ಧನಾದವನು ಥಾಲಿಸ್ (ಕ್ರಿ. ಪೂ. 624 – ಕ್ರಿ. ಪೂ. 554). ಅವನು ಪ್ರಖ್ಯಾತ ಖಗೋಳ ಶಾಸ್ತ್ರಜ್ಞನೂ ಗಣಿತಜ್ಞನೂ ಆಗಿದ್ದನು. ಗ್ರೀಸ್ ದೇಶದ ಅಯೋನಿಯಾ ಪ್ರಾಂತ್ಯದ ಮೈಲೆಟಸ್ ಪಟ್ಟಣದಲ್ಲಿ ಈ ಚಿಂತನೆ ಮೊದಲು ರೂಪುಗೊಂಡು ಬೆಳವಣಿಗೆಯನ್ನು ಹೊಂದಿದ್ದರಿಂದ, ಈ ಚಿಂತನೆಯನ್ನು 'ಮೈಲೆಟಸ್ ಚಿಂತನೆ' ಅಥವಾ 'ಅಯಾನಿಕ್ ಚಿಂತನೆ' ಎಂದು ಕರೆಯಲಾಗಿದೆ. ಈ ಚಿಂತನೆಗೆ ಸಂಬಂಧಿಸಿದ ಇತರ ತಾತ್ವಿಕರೆಂದರೆ ಅನಾಕ್ಸಿಮಾಂಡರ್ ಮತ್ತು ಅನಾಕ್ಸಿಮೀನಸ್.

ಈ ಮೂರೂ ಚಿಂತಕರಿಗೆ ಸಮಾನವಾಗಿರುವ ಅಂಶಗಳನ್ನು ಹೇಳಿ ಅನಂತರ ಪ್ರತ್ಯೇಕವಾಗಿ ಪ್ರತಿಯೊಬ್ಬನ ತಾತ್ವಿಕ ಚಿಂತನೆ ಏನೆಂಬುದನ್ನು ವಿಶದಪಡಿಸಬಹುದು. ಯಾವ ದಂತಕಥೆಯನ್ನೂ ಆಧಾರವಾಗಿಟ್ಟುಕೊಳ್ಳದೆ, ಪ್ರಚಲಿತವಿದ್ದ ಯಾವ ಮತ ಧರ್ಮದ ಉಪದೇಶವನ್ನೂ ಅವಲಂಬಿಸದೆ ಕ್ರಾಂತಿಕಾರಿಯೂ ನವ್ಯವೂ ಆದ ಚಿಂತನೆಯನ್ನು ರೂಪಿಸಿದುದು ಮೈಲೆಟಸ್ ಚಿಂತನೆಯ ವೈಶಿಷ್ಟ್ಯ. ವಿಶ್ವದ ಮೂಲವನ್ನು ಕುರಿತು ವೈಜ್ಞಾನಿಕವಾಗಿ ವಿವರಿಸುವುದನ್ನು ಈ ಚಿಂತನೆ ಪ್ರಾರಂಭಿಸಿತು. ಆದುದರಿಂದಲೇ ಇವರನ್ನು ವಿಶ್ವದ ವೈಜ್ಞಾನಿಕ ಮನೋಭಾವವುಳ್ಳ ಮೊದಲ ತಾತ್ವಿಕರೆಂದು ಕರೆಯುವುದು ಸಮಂಜಸವಾಗಿದೆ.

ಮೈಲೇಷಿಯನ್ ಚಿಂತನೆಯ ಪ್ರಕಾರ ಇಡೀ ವಿಶ್ವವೆಲ್ಲವೂ ಚೈತನ್ಯಮಯವಾಗಿರುವುದು, ಕ್ರಿಯಾತ್ಮಕವಾಗಿರುವುದು, ಜೀವಕಳೆಯಿಂದ ತುಂಬಿ ತುಳುಕುತ್ತಿರುವುದು. ಅದು ಸತ್ವಹೀನವಾದುದಲ್ಲ. ಇದನ್ನು ಪಾರಿಭಾಷಿಕವಾಗಿ ಸರ್ವ ಚೇತನವಾದ (Hylozoism) ಎಂದು ಕರೆಯುತ್ತಾರೆ. ಹಾಗೆಯೇ ಈ ಚಿಂತನೆ ಏಕವಾದವೂ ಹೌದು. ಏಕೆಂದರೆ ಯಾವುದೋ ಒಂದು ಮೂಲತತ್ವ ಇಡೀ ವಿಶ್ವಕ್ಕೆ ಮೂಲಕಾರಣವೆಂದು ಇಲ್ಲಿ ಪ್ರತಿಪಾದಿಸಲಾಗಿದೆ.

ಥಾಲಿಸ್ ಯಾವುದೇ ಗ್ರಂಥವನ್ನು ಬರೆದಂತೆ ಕಾಣುವುದಿಲ್ಲ. ಅವನ ಅನಂತರ ಬಂದ ಅರಿಸ್ಟಾಟಲ್ ಮುಂತಾದ ತಾತ್ವಿಕರು ಅವನನ್ನು, ಅವನ ಬೋಧನೆಯನ್ನು ಕುರಿತು ಏನನ್ನು ಉಲ್ಲೇಖಿಸಿದ್ದಾರೋ ಅದೇ ಥಾಲಿಸ್ಸಿನ ತಾತ್ವಿಕ ಚಿಂತನೆಗೆ ಆಧಾರವಾಗಿದೆ.

ಥಾಲಿಸ್‌ನ ಪ್ರಕಾರ ವಿಶ್ವಕ್ಕೆಲ್ಲಾ ಒಂದು ಮೂಲವಿದೆ. ಅದು ಭೌತಿಕವಾದುದು ಅದೇ ನೀರು (ಅಪ್). ನೀರಿನಿಂದ ಈ ವಿಶ್ವ ಹೊರಬಂದಿದೆ, ಅಂತ್ಯದಲ್ಲಿ ನೀರಿಗೇ ಅದು ಹಿಂದಿರುಗುತ್ತದೆ. ಈ ಭೂಮಿ ನೀರಿನಮೇಲೆ ತೇಲುತ್ತಿರುವ ಒಂದು ಚಪ್ಪಟೆಯಾಕಾರದ ವಸ್ತು. ಈ ವಿಶ್ವದಲ್ಲಿ ಪ್ರತಿಯೊಂದು ವಸ್ತುವಿನಲ್ಲಿಯೂ ಚೇತನ ತತ್ವ ಅವ್ಯಕ್ತವಾಗಿ ಅಡಗಿದೆ.

ವಿಶ್ವದ ಬಹುಪಾಲು ನೀರೇ ಆಗಿರುವುದರಿಂದಲೂ, ಮಾನವ ದೇಹದ ಮುಕ್ಕಾಲು ಭಾಗವೆಲ್ಲಾ ನೀರಿನಿಂದಲೇ ರೂಪಿತವಾಗಿರುವುದರಿಂದಲೂ, ಪ್ರಾಣರಕ್ಷಣೆಗೆ ಅವಶ್ಯಕವಾದ ಆಹಾರ, ಬೀಜಗಳಲ್ಲಿ ತೇವವಿರುವುದರಿಂದಲೂ ನೀರೇ ಜೀವೋತ್ಪತ್ತಿ ಹಾಗೂ ವಿಶ್ವದ ಮೂಲವೆಂದು ಥಾಲಿಸ್ ಊಹಿಸಿರಬಹುದು. ಆದರೆ ನೀರಿನಿಂದ ಸಮಸ್ತವೂ ಹೇಗೆ ಉತ್ಪತ್ತಿಯಾಗುತ್ತವೆ ಎಂಬುದನ್ನು ಅವನು ತಿಳಿಸಲಿಲ್ಲ.

ಅನಾಕ್ಸಿಮಾಂಡರ್ (ಕ್ರಿ. ಪೂ. 611–ಕ್ರಿ. ಪೂ. 546)

ಅನಾಕ್ಸಿಮಾಂಡರ್ ಥಾಲಿಸ್‌ನ ಶಿಷ್ಯ, ಸ್ವತಂತ್ರ ಚಿಂತನಶೀಲ. 'ಪ್ರಕೃತಿವಿಮರ್ಶೆ' ಎಂಬುದು ಇವನು ಬರೆದ ತಾತ್ತ್ವಿಕ ಗ್ರಂಥ. ಇದರಲ್ಲಿ ಕೆಲವು ಭಾಗಗಳು ಮಾತ್ರ ದೊರಕಿವೆ.

ಅನಾಕ್ಸಿಮಾಂಡರ್ ವಿಶ್ವದ ಮೂಲ, ಭೌತಿಕವಾದುದೆಂದು ಥಾಲಿಸ್‌ನಂತೆಯೇ ಭಾವಿಸುತ್ತಾನೆ. ಆದರೆ ಆ ಮೂಲ ನಿರ್ದಿಷ್ಟವಾದ ಯಾವ ವಸ್ತುವೂ ಅಲ್ಲ; ಅಂತರವೂ, ಅನಿರ್ದಿಷ್ಟವೂ, ನಿರಾಕಾರವೂ ಅವ್ಯಯವೂ ಆದ ತತ್ತ್ವ. ಅದನ್ನು ಅವನು 'ಅಪೈರಾನ್' (apeiron) ಎಂದು ಕರೆದಿದ್ದಾನೆ. ವಿಶ್ವದ ಮೂಲ ನಿರ್ದಿಷ್ಟವಾದ ನೀರು ಎಂದು ಥಾಲಿಸ್ಸನೊಡನೆ ಒಪ್ಪಿದ ಪಕ್ಷದಲ್ಲಿ, ನೀರು ಮೊದಲು ಹೇಗೆ ಉತ್ಪತ್ತಿಯಾಯಿತು ಎಂಬ ಪ್ರಶ್ನೆ ಬರುವುದು. ಇದಕ್ಕೆ ಉತ್ತರವಾಗಿ ಇನ್ನೊಂದು ತತ್ತ್ವವನ್ನು ಪ್ರತಿಪಾದಿಸಬೇಕಾಗಿಬರುವುದು. ಪುನಃ ಈ ಎರಡನೆಯ ತತ್ತ್ವದ ಮೂಲವೆಂದು ಮೂರನೆಯ ತತ್ತ್ವವೊಂದನ್ನು ಪ್ರತಿಪಾದಿಸಬೇಕಾಗಿ ಬರಬಹುದು. ಹೀಗೆ ಅನಾವಸ್ಥಾ ದೋಷ ಉಂಟಾಗುವುದು. ಆದ್ದರಿಂದ ಅನಿರ್ದಿಷ್ಟವೂ ಅನಂತವೂ ಆದ ಅವ್ಯಕ್ತ ತತ್ತ್ವವೊಂದು ಈ ವಿಶ್ವಕ್ಕೆ ಮೂಲವೆಂದು ಹೇಳಿದಾಗಲೇ ಅದು ಸಮಂಜಸವಾಗುವುದೆಂದು ಅನಾಕ್ಸಿಮಾಂಡರ್ ಅಭಿಪ್ರಾಯ ಪಡುತ್ತಾನೆ.

ಅನಾಕ್ಸಿಮಾಂಡರನ ಪ್ರಕಾರ ಅಪೈರಾನ್ ಪರಸ್ಪರ ವಿರುದ್ಧವೆನಿಸಿದ ಶಾಖ ಮತ್ತು ಶೀತ, ಖುಷ್ಕ (ಒರಡು–dry) ಮತ್ತು ತೇವಗಳನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಂಡಿರುತ್ತವೆ. ಶಾಖ ಮಂಡಲಾಕಾರವಾದ ಜ್ವಾಲೆಯಾಗಿ ಶೀತವನ್ನು, ತೇವವನ್ನು ಸುತ್ತಲೂ ಆವರಿಸಿಕೊಂಡು ವಾಯುವಾಗಿ ರೂಪಾಂತರ ಹೊಂದುತ್ತದೆ. ಹೀಗೆ ಕ್ರಮಕ್ರಮೇಣ ಗ್ರಹಗಳು ನಕ್ಷತ್ರಗಳು ಸಕಲ ಜಗತ್ತೂ ಹೊರಬರುತ್ತವೆ. ಹೀಗೆ ಮೂಲದಿಂದ ವಿಶ್ವ ಹೇಗೆ ಸೋಪಾನ ಕ್ರಮದಲ್ಲಿ ಹೊರಬರುತ್ತವೆ ಎಂಬುದನ್ನು ಅನಾಕ್ಸಿಮಾಂಡರ್ ವಿವರಿಸಿದ್ದಾನೆ. ಈ ಅರ್ಥದಲ್ಲಿ ಅವನ ಚಿಂತನೆ ಥಾಲಿಸ್‌ನ ಚಿಂತನೆಗಿಂತ ಉತ್ಕೃಷ್ಟವಾದುದಾಗಿದೆ.

ಅನಾಕ್ಸಿಮಿನಸ್ (ಸುಮಾರು ಕ್ರಿ.ಪೂ. 588–ಕ್ರಿ ಪೂ. 524)

ಅನಾಕ್ಸಿಮಿನಸ್‌ನು ಅನಾಕ್ಸಿಮಾಂಡರನ ಶಿಷ್ಯ, ಇವನ ಪ್ರಕಾರ ವಾಯು ಈ ವಿಶ್ವದ ಮೂಲ. ವಾಯುವಿನಿಂದ ವಿಶ್ವದ ಸಕಲ ವಸ್ತುಗಳೂ ವಿರಳನ ಮತ್ತು ಘನೀಭವನ (rarefaction and condensation) ರೂಪಾಂತರಗಳಿಂದ ಉತ್ಪತ್ತಿ

ಯಾಗುತ್ತವೆ. ಒಂದು ವಸ್ತು ಹೆಚ್ಚು ಹೆಚ್ಚು ಶಾಖವನ್ನು ಹೊಂದುವಂತೆ ಮಾಡುವ ವಿಧಾನವೇ ವಿರಳನ. ಹಾಗೆಯೇ ಒಂದು ವಸ್ತು ಹೆಚ್ಚು ಹೆಚ್ಚು ತಂಪನ್ನು ಹೊಂದುವಂತೆ ಮಾಡುವುದೇ ಘನೀಭವನ. ವಾಯುವನ್ನು ವಿರಳನ ವಿಧಾನಕ್ಕೆ ಅನ್ವಯಿಸಿದಾಗ ಅಗ್ನಿಯಾಗುತ್ತದೆ. ಅದನ್ನು ಘನೀಭವನ ವಿಧಾನಕ್ಕೆ ಅನ್ವಯಿಸಿದಾಗ ಮೋಡ ನೀರು, ಮಣ್ಣು ಕಲ್ಲುಗಳಾಗಿ ರೂಪಾಂತರ ಹೊಂದುತ್ತವೆಂದು ಹೀಗೆ ಸಮಸ್ತ ವಿಶ್ವವೂ ವಾಯುವಿನಿಂದ ಹೊರಬರುತ್ತವೆಂದೂ ಅನಾಕ್ಸಿಮಿನಿಸ್ ವಿವರಿಸುತ್ತಾನೆ. ವಾಯು ಸರ್ವ ಪ್ರಾಣಿಗಳಿಗೂ ಮೂಲಾಧಾರವಾದುದರಿಂದಲೂ, ಸಮಸ್ತ ವಿಶ್ವವನ್ನು ಆವರಿಸಿಕೊಂಡಿರುವುದರಿಂದಲೂ, ಅವೇ ಇಡೀ ವಿಶ್ವದ ಮೂಲ ಎಂದು ಅವನು ಪ್ರತಿಪಾದಿಸಲು ಕಾರಣವಿರಬಹುದೆಂದು ಊಹಿಸಬಹುದು.

ಹೀಗೆ ಮೈಲೇಷಿಯನ್ ಚಿಂತನೆ ತನ್ನದೇ ಆದ ರೀತಿಯಲ್ಲಿ ವಿಶ್ವದ ರಹಸ್ಯವನ್ನು ಅರಿಯಲು ಪ್ರಯತ್ನಪಟ್ಟಿವೆ. ಇಲ್ಲಿ ನೈಜ ಅರ್ಥದಲ್ಲಿ ತಾತ್ವಿಕನೆನಿಸಿಕೊಳ್ಳುವವನು ಅನಾಕ್ಸಿಮಾಂಡರ್.

೪

ಪೈಥಾಗೊರಾಸ್ (ಸು. ಕ್ರಿಪೂ. 580–ಕ್ರಿ.ಪೂ. 500)

ಪೈಥಾಗೊರಾಸ್‌ನ ಬಗ್ಗೆ ನಮಗೆ ಹೆಚ್ಚಾಗಿ ಏನೂ ತಿಳಿದುಬಂದಿಲ್ಲ. ಅವನು 'ಪೈಥಾಗೋರಿಯನ್ ಸಮಾಜ'ದ ಸ್ಥಾಪಕ. ಈ ಸಮಾಜ ಒಂದು ತಾತ್ವಿಕ ಚಿಂತನೆಯ ಕೇಂದ್ರಬಿಂದು ಎನ್ನುವುದಕ್ಕಿಂತ ನೈತಿಕ ಮತ್ತು ಧಾರ್ಮಿಕ ಸಂಸ್ಥೆ ಎಂದೇ ಹೇಳಬೇಕು. ಸಮಾಜೋದ್ಧಾರವೇ ಅದರ ಏಕೈಕ ಗುರಿಯಾಗಿತ್ತು. ಕಲೆ, ಕುಶಲಕಲೆ, ಕುಸ್ತಿ, ಸಂಗೀತ, ವೈದ್ಯಕೀಯ ಹಾಗೂ ಗಣಿತ ಶಾಸ್ತ್ರಗಳಲ್ಲಿ ಸಾಕಷ್ಟು ಪರಿಣತಿಯನ್ನು ಈ ಸಮಾಜ ಪಡೆದಿತ್ತು.

ಪೈಥಾಗೊರಿಯನ್ ಸಮಾಜದ ನೈತಿಕ ಮೌಲ್ಯಗಳು, ನಿಯಮಗಳು ಬಹಳ ಕಟ್ಟುನಿಟ್ಟಾದವುಗಳಾಗಿದ್ದವು. ಅವು ಸೂಕ್ಷ್ಮವೂ ತೀಕ್ಷ್ಣವೂ ಆಗಿದ್ದವು. ಪೈಥಾಗೊರಿಯನ್ ಸಮಾಜ ಶೀಲಸ್ವಭಾವವನ್ನು ರೂಪಿಸುವ ನೈತಿಕ ಶಿಕ್ಷಣವನ್ನು ಅತ್ಯಂತ ಪ್ರಬಲವಾಗಿ ಸಮರ್ಥಿಸಿ ಪ್ರತಿಯೊಬ್ಬನೂ ಇಂಥ ಶಿಕ್ಷಣವನ್ನು ಹೊಂದಬೇಕೆಂದು ಸಾರುತ್ತದೆ. ಸ್ವೇಚ್ಛಾಚಾರ ಹಾಗೂ ಇಂದ್ರಿಯಗಳ ವ್ಯಾಪಾರವನ್ನು ದಮನ ಮಾಡುವುದರ ಮೂಲಕ ಆತ್ಮಶಾಂತಿಯನ್ನು ಹೊಂದುವುದೇ ಈ ಸಮಾಜದ ಗುರಿ. ಅದರ ಪ್ರಕಾರ ಮಾನವ ಶರೀರ ಆತ್ಮದ ಸೆರೆಮನೆ. ಹಿಂದೂ ದರ್ಶನಗಳಂತೆ ಅದೂ 'ಸಂಸಾರ ಚಕ್ರ' (ಪುನರಪಿ ಜನನಂ, ಪುನರಪಿ ಮರಣಂ ಎಂಬ ನಿರಂತರ ಚಕ್ರ)ದಲ್ಲಿ ನಂಬಿಕೆ ಇಟ್ಟಿದೆ. ಈ ಹುಟ್ಟು ಸಾವುಗಳ ನಿರಂತರ ಚಕ್ರದಿಂದ ಹೊರಬರುವುದೇ ಮೋಕ್ಷವೆನಿಸುವುದು.

ಪೈಥಾಗೊರಾಸ್ ತಾನೇ ಸ್ವತಃ ಬರೆದ ಗ್ರಂಥಗಳು ಯಾವುವೂ ಇಲ್ಲ. ಪೈಥಾಗೋರಿಯನ್ನರ ಪ್ರಕಾರ ಅಂಕಗಳೇ ಸಮಸ್ತ ವಸ್ತುಗಳ ಮೂಲಕಾರಣ. ಅಂಕ ಅಥವಾ

ಸಂಖ್ಯೆ ವಿಶ್ವದ ಮೂಲಭೂತ ಘಟಕ. ಸರ್ವಕ್ಕೂ ಆಧಾರ. ಎಲ್ಲಾ ವಸ್ತುಗಳೂ ಅಂಕಗಳೇ. ಎಲ್ಲಾ ವಸ್ತುಗಳನ್ನೂ ಅಂಕಗಳಲ್ಲಿ ಎಣಿಸಬಹುದು. ರೂಪ (ಬಣ್ಣ), ರಸ (ರುಚಿ), ಗಂಧ (ವಾಸನೆ) ಗಳಿಲ್ಲದ ವಿಶ್ವವನ್ನು ನಾವು ಊಹಿಸಿಕೊಳ್ಳಬಹುದು, ಆದರೆ ಸಂಖ್ಯೆರಹಿತವಾದ ವಿಶ್ವವೆಂಬುದಿಲ್ಲನೆಂದು ಅವರು ಉದ್ಘೋಷಿಸುತ್ತಾರೆ. ಹೀಗೆ ಅವರ ಪ್ರಕಾರ ಸಂಖ್ಯೆಗಳು ಇಡೀ ವಿಶ್ವದ ಮೂಲಾಧಾರ.

ಪೈಥಾಗೊರಿಯನ್ನರು ವಿಶ್ವದಲ್ಲಿ ಕಂಡುಬರುವ ಕ್ರಮ ವ್ಯವಸ್ಥೆ, ನಿಯಮ, ಲಯ, ಸಮಾನತೆ, ಪ್ರಮಾಣ (proportion), ಸಾಮರಸ್ಯ (harmony), ಸಂಬಂಧ (relation) ಭಾವಗಳಿಗೆ ವಿಶೇಷ ಮಹತ್ವವನ್ನು ಕೊಡುತ್ತಾರೆ. ಅವರ ಪ್ರಕಾರ ಇವೆಲ್ಲವೂ ಅಂಕಗಳ ಮೇಲೆ ಆಧಾರವಾಗಿವೆ. ಒಂದು ವಸ್ತು ಇನ್ನೊಂದು ವಸ್ತುವಿನಿಂದ ನಿರ್ದಿಷ್ಟ ದೂರದಲ್ಲಿರುವುದೇ ಕ್ರಮ, ವ್ಯವಸ್ಥೆಯೆನಿಸುವುದು. ನಿರ್ದಿಷ್ಟ ದೂರವನ್ನು ಅಂಕಿಯ ಮೂಲಕ ಅಳೆದು ವಿವರಿಸಬಹುದು. ಹಾಗೆಯೇ ಸಾಮರಸ್ಯಕ್ಕೆ ಹೆಸರಾಗಿರುವ ಸಂಗೀತ ನಿಂತಿರುವುದು ತಂತಿಯ ಉದ್ದಕ್ಕೂ ನಾದದ ಶ್ರುತಿಗೂ ಇರುವ ಸಂಬಂಧ (relation)ದಲ್ಲಿ, ಪರಿಮಾಣದಲ್ಲಿ (proportion). ಇದನ್ನು ಅಳೆಯಬಹುದು. ಹೀಗೆ ಅಂಕಗಳ ಸಹಾಯವಿಲ್ಲದಿದ್ದರೆ ವಿಶ್ವದಲ್ಲಿ ಪರಿಮಾಣ, ಕ್ರಮ, ವ್ಯವಸ್ಥೆ, ಸಮಾನತೆ, ಸಂಬಂಧ, ಸಾಮರಸ್ಯ ಮುಂತಾದ ಭಾವಗಳು ನಿಷ್ಪ್ರಯೋಜಕವಾಗುವುವು. ಆದುದರಿಂದ ಅಂಕಗಳೇ ವಿಶ್ವದ ಮೂಲ ದ್ರವ್ಯಗಳು, ಮೂಲಕಾರಣಗಳು ಎಂದು ಪೈಥಾಗೊರಿಯನ್ನರು ಪ್ರತಿಪಾದಿಸುತ್ತಾರೆ.

ಸಂಖ್ಯೆಯಲ್ಲಿ ವಿಷಮ, ಸಮ ಎಂದು ಎರಡು ವಿಧ. ವಿಷಮ ಸಂಖ್ಯೆ ಅವಿಭಾಜ್ಯ ; ಅದನ್ನು ಎರಡರಿಂದ ನಿಶ್ಶೇಷವಾಗಿ ಭಾಗಿಸಲಾಗುವುದಿಲ್ಲ. ಆದರೆ ಸಮಸಂಖ್ಯೆಯನ್ನು ಭಾಗಿಸಬಹುದು. ಆದುದರಿಂದಲೇ ಪೈಥಾಗೊರಿಯನ್ನರು ವಿಷಮ ಸಂಖ್ಯೆಗಳನ್ನು ಮೇರೆಯುಳ್ಳವುಗಳೆಂದೂ, ಸಮಸಂಖ್ಯೆಗಳನ್ನು ಅಮಿತವೆಂದೂ ಹೇಳುತ್ತಾರೆ. ಈ ಅರ್ಥದಲ್ಲಿಯೇ ವಿಶ್ವವೂ ಸಹ ವಿಷಮ–ಸಮಗಳ, ಮಿತ–ಅಮಿತಗಳ, ದ್ವಂದ್ವ ಭಾವಗಳ ಸಂಗಮವೆಂದು ಪ್ರತಿಪಾದಿಸುತ್ತಾರೆ. ಅವರು ಕೆಳಗಿನ ದಶವಿಧ ದ್ವಂದ್ವಗಳ ಪಟ್ಟಿಯನ್ನೇ ನೀಡಿದ್ದಾರೆ :

ಮಿತ × ಅಮಿತ
ವಿಷಮ × ಸಮ
ಏಕ × ಅನೇಕ
ಎಡ × ಬಲ
ಪುಂ × ಸ್ತ್ರೀ
ಸ್ಥಾವರ × ಜಂಗಮ
ಸರಳ × ಓರೆ
ಬೆಳಕು × ಕತ್ತಲೆ

ಶಿಷ್ಟ × ದುಷ್ಟ
ಚದರ × ಆಯತ

ಒಂದರಿಂದ ಹತ್ತರವರೆಗೆ ಪ್ರತಿಯೊಂದು ಸಂಖ್ಯೆಯೂ ಅಪ್ರತಿಮ ಅಪೂರ್ವ ಗುಣಗಳನ್ನು ಹೊಂದಿದೆಯೆಂದು ಅವರು ನಂಬುತ್ತಾರೆ.

ಪೈಥಾಗೊರಿಯನ್ನರು ಜ್ಯಾಮಿತಿಯನ್ನೂ ಉಪಯೋಗಿಸಿಕೊಂಡು ಅಂಕಗಳು ವಿಶ್ವದ ಆಧಾರವೆಂದು ಹೇಳಿದ್ದಾರೆ. ರೇಖೆಯೂ ಮೇಲ್ಮೈಯೂ (surface) ಇಲ್ಲದೆ ಯಾವ ಪದಾರ್ಥವೂ ಇರುವುದಕ್ಕಾಗುವುದಿಲ್ಲ. ಬಿಂದು ಏಕ; ರೇಖೆ ದ್ವಯ, ಆಕೃತಿ ತ್ರಯಿ, ಭೂಮಿ ಘನಾಕೃತಿ ಇತ್ಯಾದಿ. ಹೀಗೆವಸ್ತುಗಳ ಇರುವಿಕೆ ಇಲ್ಲದೆಯೇ ಈ ರೇಖೆಗಳ ಮತ್ತು ಮೇಲ್ಭಾಗಗಳ ಅರ್ಥವನ್ನು ಚಿಂತಿಸಬಹುದು, ಗ್ರಹಿಸಬಹುದು. ಅದುದರಿಂದಲೇ ರೇಖೆಗಳೂ ಮೇಲ್ಭಾಗಗಳೂ ಸ್ವತಂತ್ರವಾದ ಅಸ್ತಿತ್ವವನ್ನು ಪಡೆದಿವೆ. ರೇಖೆ ಇತ್ಯಾದಿಗಳನ್ನು ಹೇಗೆ ಅಂಕಗಳ ಮೂಲಕ ನಿರ್ದೇಶಿಸಬೇಕೆಂದು ಆಗಲೇ ವಿವರಿಸಿದೆ. ಮಾನಸಿಕ ಕಲ್ಪನೆಗಳಾದ ಪ್ರೇಮ, ಸ್ನೇಹ, ನ್ಯಾಯ, ಗುಣ, ಆರೋಗ್ಯ ಇತ್ಯಾದಿಗಳಿಗೂ ಅಂಕಗಳೇ ಆಧಾರ. ಇದಕ್ಕೆ ಉದಾಹರಣೆಯಾಗಿ ಅವರು ಸಂಖ್ಯೆ 8ನ್ನು ಹೆಸರಿಸುತ್ತಾರೆ. ಪ್ರೇಮ, ಸ್ನೇಹಗಳ ಕೇಂದ್ರ ಬಿಂದು, ಏಕ ಮತಿ,ಏಕಗ್ರೀವ.

ಹೀಗೆ ಅಂಕೆಗಳು ಮತ್ತು ದಶವಿಧ ದ್ವಂದ್ವಗಳು ಪೈಥಾಗೊರಿಯನ್ ಸಿದ್ಧಾಂತದ ಕೇಂದ್ರಬಿಂದುವಾಗಿವೆ. ಈ ಸಿದ್ಧಾಂತದಲ್ಲಿ ಗಣಿತ, ವಿಶ್ವ ಮತ್ತು ಧರ್ಮ ಹೇಗೋ ಒಂದುಗೂಡಿಸಲ್ಪಟ್ಟಿವೆ. ಇದನ್ನು ಒಂದು ರೀತಿಯ ಅಸ್ಪಷ್ಟ 'ಸಂಖ್ಯಾ ಅನುಭಾವ' ವೆನ್ನಬಹುದು. ಆದರೆ ಅದು ಪ್ರತಿಪಾದಿಸಿದ 'ಮಿತ', 'ಅಮಿತ' ಕಲ್ಪನೆಗಳು ಪ್ಲೇಟೋ ವಿನ ಮೇಲೆ ಅಗಾಧ ಪರಿಣಾಮವನ್ನುಂಟುಮಾಡಿದವು. ಇದರಿಂದ ಪ್ರಭಾವಿತನಾದ ಪ್ಲೇಟೋ ಆತ್ಯಂತಿಕ ಸತ್ಯವಾದ ಸಾಮಾನ್ಯ ಅಥವಾ ಸಾರ್ವತ್ರಿಕ (universals) ಗಳನ್ನು ಅಮಿತವೆಂದೂ, ಪ್ರಧಾನ ಅಥವಾ ದೃಶ್ಯ ಪ್ರಪಂಚವನ್ನು ಮಿತವೆಂದೂ ತನ್ನ ತಾತ್ವಿಕ ಚಿಂತನೆಯಲ್ಲಿ ಕರೆದಿದ್ದಾನೆ.

೫

ಇಲಿಯಾಟಿಕ್ ಚಿಂತನೆ

ಇಲಿಯಾಟಿಕ್ ಚಿಂತನೆಯ ಸ್ಥಾಪಕ ಕ್ಸೆನೊಫೇನಸ್ (ಕ್ರಿ. ಪೂ. 576). ಪಾರ್ಮೆನೈಡಿಸ್ ಈ ಚಿಂತನೆಯ ಮುಖ್ಯ ವ್ಯಕ್ತಿ. ಜೀನೋ ಮತ್ತು ಮೆಲಿಸಸ್ ಇವನ ಹಿಂಬಾಲಕರು. ಪಾರ್ಮೆನೈಡಿಸ್, ದಕ್ಷಿಣ ಇಟಲಿಯ ಇಲಿಯ ಎಂಬ ಪಟ್ಟಣದಿಂದ ಬಂದವನು. ಆದುದರಿಂದ ಈ ಚಿಂತನೆಯನ್ನು ಇಲಿಯಾಟಿಕ್ ಚಿಂತನೆ ಎಂದು ಕರೆಯ ಲಾಗಿದೆ.

ತತ್ವಶಾಸ್ತ್ರ ಬೇರೆ, ಮತ ಧರ್ಮ ಬೇರೆ ಎಂದು ಮೊದಲು ವಿಂಗಡಿಸಿದವನು ಕ್ಸೆನೊಫೇನಸ್, ಮತಧರ್ಮ (Religion) ಮುಖ್ಯತಃ ನಂಬಿಕೆಗೆ ಸಂಬಂಧಿಸಿದುದು.

ಆದರೆ ತತ್ವಶಾಸ್ತ್ರ, ತರ್ಕಬುದ್ಧಿಗೆ (reason) ಸಂಬಂಧಿಸಿದುದು. ತತ್ವಶಾಸ್ತ್ರದ ತೀರ್ಮಾನಗಳು, ತರ್ಕಬುದ್ಧಿಯ ಒರೆಗಲ್ಲಿನಿಂದ ಉಜ್ಜಿ ಹೊರತೆಗೆದ ಬೌದ್ಧಿಕ ತೀರ್ಮಾನಗಳು. ಆದರೆ ಮತಧರ್ಮದ ಸಂಗತಿಗಳು, ತರ್ಕಬುದ್ಧಿ ಅವುಗಳನ್ನು ಒಪ್ಪದಿದ್ದರೂ, ಅಂಧಶ್ರದ್ಧೆಯಿಂದ ಉಳಿಯುವಂಥವುಗಳು. ಹೀಗೆ ಮಾನವನ ಹರಿತವಾದ ಬುದ್ಧಿಯೇ ತತ್ವಶಾಸ್ತ್ರದ ಉಪಕರಣವಾದರೆ ಶ್ರದ್ಧೆಯೇ ಮತಾವಲಂಬಿಯ ಉಪಕರಣ. ಮತಧರ್ಮದ ಸಂಗತಿಗಳನ್ನು ತರ್ಕಬುದ್ಧಿಯ ವಿಮರ್ಶೆಗೆ ಒಳಪಡಿಸಿದಾಗ ಉದ್ಭವಿಸುವುದೇ 'ಮತಧರ್ಮ-ತತ್ವಶಾಸ್ತ್ರ' ಎಂದು ಕ್ಸೆನೊಫೇನಸ್ ಅಭಿಪ್ರಾಯಪಡುತ್ತಾನೆ.

ಮತಧರ್ಮದ ಮೂಲಗಳೆನಿಸಿದ ದಂತಕತೆಗಳು ಮುಂತಾದವು ತರ್ಕಬುದ್ಧಿಯ ಮುಂದೆ ನಿಲ್ಲಲಾರವು. ದೇವರನ್ನು ಮಾನವನ ರೂಪದಲ್ಲಿ ಅಂದರೆ ಅವನಿಗೆ ಮಾನವನಂತೆ, ಅವಯವಗಳಿವೆ, ಇಂದ್ರಿಯಗಳಿವೆ ಎಂದು ತಿಳಿದು ವಿಗ್ರಹಾರಾಧನೆಯನ್ನು ಮಾಡುವ ಮತಧರ್ಮದ ಶ್ರದ್ಧಾಳುವಿನ ನಂಬಿಕೆಯನ್ನು ಕ್ಸೆನೊಫೇನಸ್ ಖಾರವಾಗಿ ಖಂಡಿಸುತ್ತಾನೆ. ದೇವರಿಗೆ ಕಣ್ಣು, ಕಿವಿ, ಮೂಗು....ಮುಂತಾದ ಇಂದ್ರಿಯಗಳಿವೆ ಎನ್ನುವ ಬದಲು ದೇವರೇ ಎಲ್ಲಾ ಕಣ್ಣು (ನೋಟ), ಎಲ್ಲಾ ಕಿವಿ (ಶಬ್ದ), ಎಲ್ಲಾ ಗಂಧ, ಎಂದು ಹೇಳುವುದು ಸೂಕ್ತವೆಂದು ಕ್ಸೆನೊಫೇನಸ್ ವಾದಿಸುತ್ತಾನೆ. ಅವನು ಅನೇಕ ದೇವತಾವಾದವನ್ನು ಖಂಡಿಸುತ್ತಾನೆ. ಅವನ ಪ್ರಕಾರ ದೇವರು ಏಕ, ಅಕ್ಷರ ಹಾಗೂ ನಿರ್ವಿಕಾರ. ಅವನ ಚಿಂತನೆಯನ್ನು 'ತಾತ್ವಿಕ' ಎನ್ನುವುದಕ್ಕಿಂತ 'ಮತಧರ್ಮ-ಮೀಮಾಂಸೆ' ಎಂದರೆ ಹೆಚ್ಚು ಸೂಕ್ತವಾಗಿ ಕಾಣುತ್ತದೆ. ದೇವರೇ ಜಗತ್ತು ಎಂದು ಸಪ್ರಪಂಚಬ್ರಹ್ಮವಾದವನ್ನು (Pantheism) ಅವನು ಪ್ರತಿಪಾದಿಸುತ್ತಾನೆ.

ಪಾರ್ಮಿನೈಡಿಸ್ (ಸುಮಾರು ಕಿ.ಪೂ. 514)

ಇದುವರೆಗೂ ಹಸಿಹಸಿಯೂ ಅಪಕ್ವವೂ ಆಗಿದ್ದ ಚಿಂತನೆಗೆ ಒಂದು ಉತ್ಕೃಷ್ಟ ತಾತ್ವಿಕ ವೇದಿಕೆಯನ್ನು ದೊರಕಿಸಿಕೊಟ್ಟವನು ಪ್ರಭಾವೀ ತತ್ವಜ್ಞನಾದ ಪಾರ್ಮಿನೈಡಿಸ್. ಅವನೊಬ್ಬ ಶ್ರೇಷ್ಠ ಚಿಂತಕನಾಗಿದ್ದನು. ಪಾಶ್ಚಾತ್ಯ ತಾತ್ವಿಕ ಲೋಕದಲ್ಲಿ ಧ್ರುವತಾರೆಯಂತೆ ಬೆಳಗಿದ ಪ್ಲೇಟೋವಿನ ಮೇಲೆ ಇವನ ಪ್ರಭಾವ ಅಳಿಸಲಾರದ್ದು.

ಪಾರ್ಮಿನೈಡಿಸ್, ಅಂತಿಮ ಸತ್ಯ (Ultimate Reality) ವನ್ನು 'ಸತ್' ತತ್ವ (Being) ಎಂದು ಹೆಸರಿಸುತ್ತಾನೆ. ಅದು ಸದಾಕಾಲವೂ ಒಂದೇ ತೆರನಾಗಿರುತ್ತದೆ. ಅದು ತನ್ನ ಸ್ಥಿತಿಯನ್ನು ಬಿಟ್ಟು ಬೇರೆ ವಸ್ತುವಾಗಲಾರದು. ಅದು ಯಾವುದೇ ರೀತಿಯ ಬದಲಾವಣೆಯನ್ನಾಗಲೀ, ಪರಿಣಾಮವನ್ನಾಗಲೀ, ರೂಪಾಂತರವನ್ನಾಗಲೀ ಹೊಂದುವುದಿಲ್ಲ. ಹೀಗೆ ಸತ್ಯದ ನೈಜ ಲಕ್ಷಣ ಸ್ಥಿರತ್ವವೇ ಹೊರತು ಪರಿಣಾಮವಲ್ಲವೆಂದು ಪಾರ್ಮಿನೈಡಿಸ್ ಪ್ರತಿಪಾದಿಸುತ್ತಾನೆ.

ಪಾರ್ಮಿನೈಡಿಸ್‌ನ ಪ್ರಕಾರ ಸತ್ಯ ಸಜಾತೀಯ (Homogeneous) ವಾಗಿದೆ. ಅದು ಪರಿಶುದ್ಧ ತತ್ವ. ಅದು ತನ್ನನ್ನು ಬಿಟ್ಟು ಬೇರೆ ಏನನ್ನೂ ಒಳಗೊಂಡಿಲ್ಲ.

ಅದು ಭಾಗರಹಿತವಾದುದು (ಅಖಂಡ) ; ಎಲ್ಲಾ ವಿಧವಾದ ಚಲನೆ ಬದಲಾವಣೆಗಳಿಂದ ಮುಕ್ತವಾದುದು (ಅಚಲ) ; ಅದು ಎಲ್ಲ ವಿಕಾರ ರಹಿತವಾದುದು (ನಿರ್ವಿಕಾರ, ಅಪರಿಣಾಮ) ; ಅದು ನಿತ್ಯ ನಿರಂತರ ತತ್ವ ; ಅದು ಎಲ್ಲ ಕಾಲದಲ್ಲಿಯೂ —ಭೂತ, ವರ್ತಮಾನ, ಭವಿಷ್ಯತ್—ಅಸ್ತಿತ್ವವನ್ನು ಹೊಂದಿದೆ : ಅದು ಯಾವುದೇ ಕಾಲದಲ್ಲಿಯೂ ಇಲ್ಲವಾಗುವುದಿಲ್ಲ, ಅದು ಪರಿಪೂರ್ಣ ಸತ್ಯ ; ಅದು ಯಾವುದರ ಮೇಲೂ ಯಾವುದಕ್ಕೂ ಅವಲಂಬಿತವಾಗಿಲ್ಲ. ಅದಕ್ಕೆ ಅದನ್ನು ಬಿಟ್ಟು ಮತ್ತಾವ ಕಾರಣವೂ ಇಲ್ಲ. ಅದು ಯಾವಾಗಲೂ ತನ್ನ ಐಕ್ಯತೆಯನ್ನು ಕಾಪಾಡಿಕೊಳ್ಳುತ್ತದೆ ; ಅದು ಎಂದಿಗೂ ಇನ್ನೊಂದಾಗುವುದಿಲ್ಲ. ಭಾಗಗಳಿಂದ ಮಾಡಲ್ಪಟ್ಟಿರುವ ವಸ್ತು ಇನ್ನೊಂದು ವಸ್ತುವಾಗಿ ಬದಲಾವಣೆ ಹೊಂದಲು, ಪರಿಣಾಮ ಹೊಂದಲು ಸಾಧ್ಯವಿದೆ. ಆದರೆ 'ಸತ್' ತತ್ವ (Being) ಅಖಂಡವಾದುದರಿಂದ ಅದು ಇನ್ನೊಂದಾಗಲು ಸಾಧ್ಯವಿಲ್ಲ. ಅದು ಸಂಪೂರ್ಣ ಸತ್. ಅದು ಎಲ್ಲ ವಿಧದ ಅಸತ್‌ನಿಂದ ಭಿನ್ನವಾದುದು. ಅದು ಆದಿ ಅಂತ್ಯರಹಿತವಾದುದು ; ಅವಿನಾಶಿ, ಅವ್ಯಯ, ನಿರುತ್ಪನ್ನ, ಅವಿಚ್ಛಿನ್ನ, ಅನಿರ್ಮಿತ. ಅಸದೃಶ ಏಕ ತತ್ವ. ಅದನ್ನು 'ಇದು' ಎಂದಾಗಲೀ 'ಅದು' ಎಂದಾಗಲಿ, ಅಥವಾ 'ಅಲ್ಲಿದೆ' ಎಂದಾಗಲೀ 'ಇಲ್ಲಿದೆ' ಎಂದಾಗಲೀ ಬೊಟ್ಟುಮಾಡಿ ತೋರಿಸಲು ಸಾಧ್ಯವಿಲ್ಲ. ಅದು ಗೋಳಾಕಾರವಾಗಿದೆ ಎನ್ನಬಹುದು ; ಅದು ತನ್ನಷ್ಟಕ್ಕೆ ತಾನೇ ಇದೆ ಎಂದಷ್ಟೇ ಹೇಳಬಹುದು ; ಅದು ಬುದ್ಧಿಗೆ (Reason) ಮಾತ್ರ ಗೋಚರಿಸುವಂಥಾದ್ದು ; ಬುದ್ಧಿ ಮಾತ್ರದಿಂದ ಗ್ರಹಿಸಲ್ಪಡುವಂಥಾದ್ದು ; ಇಂದ್ರಿಯಗಳಿಂದಲ್ಲ ಎಂದು ಪಾರ್ಮಿನೈಡಿಸ್ ಪ್ರತಿಪಾದಿಸುತ್ತಾನೆ.

ಹೀಗೆ ಪಾರ್ಮಿನೈಡಿಸ್‌ನ ಸತ್ಯದ ಕಲ್ಪನೆ ತರ್ಕ ಬುದ್ಧಿಯ (Reason) ಅಡಿಗಲ್ಲಿನ ಮೇಲೆ ನಿಂತಿದೆ. ಬುದ್ಧಿ ತರ್ಕಕ್ಕೆ ಆಧಾರಗಳೆನಿಸಿದ 'ಐಕ್ಯ ನಿಯಮ' (Law of Identity), 'ವ್ಯಾಘಾತ ನಿಯಮ' (Law of Contradiction) ಮುಂತಾದವುಗಳಿಗನುಸಾರವಾಗಿದೆ ಅವನ ಸತ್ಯ ಕಲ್ಪನೆ. 'ಐಕ್ಯ ನಿಯಮ' ಒಂದು ವಸ್ತು, ಸದಾಕಾಲವೂ ಒಂದೇ ಆಗಿರುತ್ತದೆ, ಅದು ಅವಸ್ತುವಾಗಲಾರದು (If A is A, it is A, it cannot be Not A) ಎಂದು ಸಾರುತ್ತದೆ. ಈ ನಿಯಮವನ್ನು ಚಾಚೂತಪ್ಪದೆ ಪಾರ್ಮಿನೈಡಿಸ್ ತನ್ನ ಸತ್ಯದ ಕಲ್ಪನೆಗೆ ಅನ್ವಯಿಸುತ್ತಾನೆ. ಈ ಅರ್ಥದಲ್ಲಿಯೇ ಅವನು ಸತ್ಯ ಯಾವ ವಿಕಾರವನ್ನೂ, ಬದಲಾವಣೆಯನ್ನೂ ಹೊಂದದೆ ತನ್ನ ಐಕ್ಯವನ್ನು ಕಾಪಾಡುತ್ತದೆಂದು ಹೇಳುವುದು. ಹಾಗೆಯೇ 'ವ್ಯಾಘಾತ ನಿಯಮ' ಒಂದೇ ವಸ್ತು ಏಕಕಾಲದಲ್ಲಿಯೇ 'ಇರುವುದು' ಮತ್ತು 'ಇಲ್ಲದಿರುವುದು' ಸಾಧ್ಯವಿಲ್ಲವೆಂದು ಸಾರುತ್ತದೆ. (A thing cannot be A and Not A at the same time. If it is A it cannot be Not A, if it is Not A, it cannot be A). ಈ ನಿಯಮವನ್ನು ಪಾರ್ಮಿನೈಡಿಸ್ ಕಟ್ಟುನಿಟ್ಟಾಗಿ ಪಾಲಿಸುತ್ತಾನೆ. ಅಂತಿಮ ಸತ್ಯವಾದ 'Being' ಏಕಕಾಲದಲ್ಲಿಯೇ 'ಇರುವುದು' 'ಇಲ್ಲದಿರು

ವ್ಪದು' ಸಾಧ್ಯವಿಲ್ಲವೆಂದೂ, ಅದು ಎಂದೆಂದಿಗೂ 'ಇರುವುದೆಂದೂ' ಉದ್ಘೋಷಿಸುತ್ತಾನೆ.

ಪಾರ್ಮೆನೈಡಿಸ್‌ನ ಪ್ರಕಾರ ಪ್ರಪಂಚ ಅಂತಿಮ ಸತ್ಯವಾದ (Being)ಕ್ಕೆ ವಿರುದ್ಧವಾದ ತತ್ತ್ವ. ಅವನು ಸತ್ ಪ್ರಪಂಚವನ್ನು 'ಅಸತ್' (Non Being) ಎಂದು ಕರೆಯುತ್ತಾನೆ. ಅದು ಖಂಡಸಹಿತವಾದುದು. ಅದು ಸದಾ ಬದಲಾಯಿಸುತ್ತಿರುತ್ತದೆ, ಚಲನೆಯುಳ್ಳದ್ದಿರುತ್ತದೆ. ಚಲನೆ ಅದರ ಸ್ವಭಾವ. ಅದು ಇಂದ್ರಿಯಗಳಿಗೆ ಗೋಚರಿಸುವಂಥದು. ಅದು ಕೇವಲ ತೋರಿಕೆ ಎಂದು ಪಾರ್ಮೆನೈಡಿಸ್ ವಾದಿಸುತ್ತಾನೆ. ಆದರೆ ಇಂತಹ ಪ್ರಪಂಚ, ಅದರ ನಾನಾತ್ವ ಹೇಗೆ ಬಂತು, ಎಲ್ಲಿಂದ ಬಂತು, ಏಕೆ ಬಂತು ಎಂಬುದನ್ನು ವಿವರಿಸುವ ಗೋಜಿಗೆ ಅವನು ಹೋಗಿಲ್ಲ.

ಹೀಗೆ, ಪಾರ್ಮೆನೈಡಿಸ್ ಪಾಶ್ಚಾತ್ಯ ತಾತ್ತ್ವಿಕ ಚಿಂತನೆಯಲ್ಲಿ ಮೊಟ್ಟಮೊದಲಿಗೆ ಬುದ್ಧಿ (Reason) ಮತ್ತು ಇಂದ್ರಿಯ ಜ್ಞಾನ (Sense or Sensation) ಗಳ ನಡುವೆ ಗಡಿರೇಖೆಯನ್ನು ಎಳೆಯುತ್ತಾನೆ. ಯಾವುದು ಬುದ್ಧಿ (Reason) ಗೆ ಅನುಗುಣವಾಗಿರುತ್ತದೋ, ಬುದ್ಧಿಗೆ ಮಾತ್ರ ಸಿಗುತ್ತದೋ, ಯಾವುದನ್ನು ಇಂದ್ರಿಯಗಳು ಮುಟ್ಟಲಾರವೋ ಅದೇ ಅಂತಿಮ ಸತ್ಯ. ಹಾಗೆಯೇ ಯಾವುದು ಇಂದ್ರಿಯಗಳಿಗೆ ಎಟುಕುತ್ತದೋ ಅದು ಸತ್ (Being) ಅಲ್ಲ ; ಅದು ಅಸತ್ (Non-Being), ಕೇವಲ ತೋರಿಕೆ. ಹೀಗೆ ಸತ್ಯ ಮತ್ತು ತೋರಿಕೆಗಳ ನಡುವೆ ಮೂಲಭೂತ ಭೇದ ಇದೆ ಎಂದು ಪಾರ್ಮೆನೈಡಿಸ್ ಪ್ರತಿಪಾದಿಸುತ್ತಾನೆ. ಅವನ ಪ್ರಕಾರ ಸತ್ಯದ ಪ್ರಮುಖ ಲಕ್ಷಣ, ನಿರಂತರ ನಿತ್ಯತ್ವ, ಅಭಾಧಿತತ್ವ, ಅಚಲತೆ, ಅಪರಿಣಾಮತ್ವ, ಅಖಂಡತೆ ಮತ್ತು ಪೂರ್ಣತ್ವ. ತೋರಿಕೆಯ ಮುಖ್ಯ ಲಕ್ಷಣ ಬದಲಾವಣೆ, ಬಾಧಿತತ್ವ, ಅನಿತ್ಯತ್ವ, ಖಂಡತ್ವ ಹಾಗೂ ಅಪೂರ್ಣತ್ವ.

ಪ್ರಾರಂಭದಲ್ಲಿ 'ಏಕವಾದ'ವೆನಿಸಿದ್ದ ಪಾರ್ಮೆನೈಡಿಸ್‌ನ ಚಿಂತನೆ ರೂಢಿಸಲಾಗದ ಅತ್ಯಂತಿಕ ದ್ವೈತವಾದ'ವಾಗಿ ಪರಿಣಮಿಸುತ್ತದೆ. ಏಕೆಂದರೆ ಅವನ ಪ್ರಕಾರ ಅತ್ಯಂತಿಕ ಸತ್ಯವಾದ 'ಸತ್' (Being)ಗೂ ತೋರಿಕೆಯಾದ ಪ್ರಪಂಚಕ್ಕೆ ಅರ್ಥಾತ್ ಸಂಬಂಧವಿಲ್ಲ. ಪ್ರತಿಯೊಂದೂ ಅದರದರ ಪಾಡಿಗೆ ಇದ್ದುಬಿಡುತ್ತದೆ. ಪ್ರಪಂಚ 'Being' ನಿಂದ ಬಂದಿಲ್ಲ ; 'Being'ನಲ್ಲಿ ಅಗಲಿ ಅವ್ಯಕ್ತವಾಗಿಯೂ ಇಲ್ಲ ; ಆದರೆ ಇಂದ್ರಿಯ ಜ್ಞಾನಕ್ಕೆ ಗೋಚರವಾಗುತ್ತದೆ. ಇಷ್ಟನ್ನು ಹೇಳುವುದರಿಂದಲೇ ಪಾರ್ಮೆನೈಡಿಸ್ ಪ್ರಪಂಚವನ್ನು ವಿವರಿಸಿದಂತಾಗುವುದಿಲ್ಲ. ಪ್ರಪಂಚವನ್ನು ವಿವರಿಸುವ ಸಮಸ್ಯೆಯನ್ನು ಸಮಸ್ಯೆಯಾಗಿ ಕಾಣದೆ ಜಾಣತನದಿಂದ ಅವನು ಜಾರಿಕೊಳ್ಳುತ್ತಾನೆ.

ಜೀನೋ (ಸುಮಾರು ಕ್ರಿ.ಶ. 489)

ಜೀನೋ ಪಾರ್ಮೆನೈಡಿಸ್‌ನ ಶಿಷ್ಯ. ಇಲಿಯಾಟಿಕ್ ಚಿಂತನೆಗೆ ಅವನ ಕೊಡುಗೆ ನಕಾರಾತ್ಮಕವಾದುದು. ಅದಕ್ಕೆ ಹೊಸದಾಗಿ ಏನನ್ನೂ ಅವನು ಸೇರಿಸಲಿಲ್ಲ. ಅಂತಿಮ

ಸತ್ಯವಾದ (Being) ಚಲನ ರಹಿತವಾದುವೆಂದೂ, ನಾನಾತ್ವರಹಿತವಾದುದೆಂದೂ ಪ್ರತಿಪಾದಿಸಿದ ಪಾರ್ಮಿನೇಡಿಸನ ನಿಲುವನ್ನು ವಾದಗಳ ಮೂಲಕ ಎತ್ತಿ ಹಿಡಿದು ಪುಷ್ಟೀಕರಿಸುತ್ತಾನೆ. ಅಷ್ಟೇ. ಇಲಿಯಾಟಿಕ್ ಚಿಂತನೆಯ ನಿಲುವನ್ನು ವಿರೋಧಿಸುವವರ ವಾದದಲ್ಲಿನ ಆಭಾಸವನ್ನು ಪ್ರದರ್ಶಿಸುವುದರ ಮೂಲಕ ಈ ಕಾರ್ಯವನ್ನು ಮಾಡುತ್ತಾನೆ.

ಇಲಿಯಾಟಿಕ್ ಚಿಂತನೆಯ ಪ್ರಕಾರ ಅಂತಿಮ ಸತ್ಯವಾದ ಸತ್ (Being) ನಾನಾತ್ವರಹಿತವಾದುದು. ಒಂದು ವೇಳೆ ಅದು ನಾನಾತ್ವವೆಂದು ಒಪ್ಪಿದರೆ, ಕೆಳಗಿನ ಆಭಾಸಗಳು ಉಂಟಾಗಿ ಅಂಥ ವಾದವೇ ಬಿದ್ದುಹೋಗುತ್ತದೆ; 'ಸತ್ಯ', 'ನಾನಾತ್ವ' ವಾಗಿದ್ದರೆ, ಅವು (ಅನೇಕ ವಸ್ತುಗಳು) ಮಿತವಾಗಿರಬೇಕು ಇಲ್ಲವೆ ಅಪಾರವಾಗಿ ಮಹತ್ತರವಾಗಿರಬೇಕು. ಅವು ಮಿತವಾಗಿದ್ದರೆ ಯಾವುದೋ ಒಂದು ಗೊತ್ತಾದ ಸಂಖ್ಯೆಯ ಮಿತಿಯಲ್ಲಿರಬೇಕು. ಅವು ಅಪಾರವಾಗಿ ಮಹತ್ತರವಾಗಿದ್ದರೆ ಸಂಖ್ಯೆಯಲ್ಲಿ ಅಮಿತವಾಗಿರಬೇಕು. ಅಂದರೆ ಅವು ಏಕಕಾಲದಲ್ಲೇ ಮಿತವೆಂದೂ ಅಮಿತವೆಂದೂ ಒಂದೇ ದನಿಯಲ್ಲಿ ಹೇಳಿದಂತಾಗುತ್ತದೆ. ಈ ಭಾವನೆಗಳು ಸ್ವವಿರೋಧಗಳಾದುದರಿಂದ (Self contradictory) ಅವುಗಳನ್ನು ನಿಜವೆಂದು ನಂಬಲಾಗುವುದಿಲ್ಲ.

ಹಾಗೆಯೇ ಅಂತಿಮ ಸತ್ಯವಾದ 'ಸತ್' (Being) ಚಲನೆ ರಹಿತವಾದುದೆಂಬುದನ್ನು ಹೀಗೆ ವಾದಿಸುವುದರ ಮೂಲಕ ಪುಷ್ಟೀಕರಿಸುತ್ತಾನೆ; ಒಂದು ವಸ್ತು ಒಂದು ಪ್ರದೇಶದಲ್ಲಿ ಚಲಿಸುತ್ತಿದೆ ಎಂದು ಭಾವಿಸೋಣ. ಚಲಿಸುವುದಕ್ಕೆ ಪ್ರಾರಂಭಿಸಿ ಸ್ವಲ್ಪ ಪ್ರದೇಶವನ್ನು ಅದು ಆವರಿಸಿಕೊಳ್ಳಬೇಕಾದರೆ ಮೊದಲು ಆ ಪ್ರದೇಶದಲ್ಲಿ ಅರ್ಧದಷ್ಟು ದೂರವನ್ನು ಕ್ರಮಿಸಬೇಕು. ಈ ದೂರವನ್ನು ಕ್ರಮಿಸಲು ಅದರಲ್ಲಿ ಅರ್ಧ ದೂರವನ್ನು ಮೊದಲು ಕ್ರಮಿಸಬೇಕು. ಇದೇ ರೀತಿಯಾಗಿ ಅನಂತವಾಗಿ ಕ್ರಮಿಸಬೇಕಾಗಬಹುದು. ಅಂದರೆ ಕ್ರಮಿಸಬೇಕಾದ ದೂರ—ಅದು ಎಷ್ಟು ಸ್ವಲ್ಪ ಕಡಿಮೆಯಿದ್ದರೂ—ಇದ್ದೇ ಇರುವುದು. ಹೀಗೆಂದರೆ ಆ ವಸ್ತು ಎಲ್ಲಿಯೂ ಚಲನೆ ಮಾಡಲೇ ಇಲ್ಲ ಎಂದರ್ಥ. ಹೀಗೆ ಚಲನೆಯೆಂಬುದೇ ಅಸಾಧ್ಯ ಭಾವನೆಯೆಂದು ಜೀನೋ ವಾದಿಸುತ್ತಾನೆ. ಇದಕ್ಕೆ ದೃಷ್ಟಾಂತವಾಗಿ 'ಎಸೆದ ಬಾಣ'ವನ್ನು ಅವನು ನೀಡುತ್ತಾನೆ. 'ಎಸೆದ ಬಾಣ' ನಿಶ್ಚಲ ಸ್ಥಿತಿಯಲ್ಲೇ ಇರುವುದು. ಹೇಗೆಂದರೆ ಅದು ಸ್ವಲ್ಪ ಪ್ರದೇಶವನ್ನು ಹಾದು ಹೋಗಬೇಕಾದರೆ, ಆ ಪ್ರದೇಶದ ಪ್ರತಿಯೊಂದು ಅಂಶವನ್ನು ದಾಟಬೇಕು. ಪ್ರದೇಶ (Space) ವನ್ನು ಅನಂತವಾಗಿ ವಿಭಜಿಸಬಹುದಾದರಿಂದ ಬಾಣ ಪ್ರದೇಶದ ಅಸಂಖ್ಯಾತ ಅಂಶಗಳನ್ನು ಹಾದುಹೋಗಬೇಕಾಗುತ್ತದೆ. ಇದು ಅಸಾಧ್ಯವಾದುದು. ಆದುದರಿಂದ 'ಎಸೆದ ಬಾಣ' ಇದ್ದಲ್ಲಿಯೇ ಇದೆ ಎಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆಂದು ಜೀನೋ ವಾದಿಸುತ್ತಾನೆ.

ಮೆಲಿಸಸ್

ಮೆಲಿಸಸ್ ಇಲಿಯಾಟಿಕ್ ಚಿಂತನೆಯ ಕಟ್ಟಕಡೆಯ ಚಿಂತಕ. ಇವನು ಪಾರ್ಮಿನೈಡಿಸ್‌ನ ಚಿಂತನೆಯನ್ನು ಅನುಮೋದಿಸುತ್ತಾನೆ. ಆದರೆ ಒಂದು ಅಂಶದಲ್ಲಿ ಅವನಿಗೂ ಪಾರ್ಮಿನೈಡಿಸ್ಸನಿಗೂ ಭೇದವಿದೆ. ಅವ್ಯಯವೂ ಅನಿರ್ಣೀತವೂ, ಅಚಲವೂ, ಅಪರಿಣಾಮಿಯೂ, ವರವೂ, ಅಖಂಡವೂ, ಸಂಪೂರ್ಣವೂ, ಅದಿಅಂತ್ಯರಹಿತವೂ ಅವಿನಾಶಿಯೂ ಆದ 'ಸತ್‌ತತ್ವ' (Being) ಗೋಳಾಕಾರವಾದುವೆಂಬ ಪಾರ್ಮಿನೈಡಿಸ್ಸಿನ ನಿಲುವು ದೋಷಪೂರಿತವೆಂದು ಮೆಲಿಸಸ್ ಅಭಿಪ್ರಾಯಪಡುತ್ತಾನೆ. ಅದು ಅನಂತವೂ ವಿರೂಪವೂ ಆಗಿರಬೇಕು. ಹಾಗಲ್ಲದೆ ಅದು ಗೋಳಾಕಾರವಾದುದು ಎಂದು ಒಪ್ಪಿದ ಪಕ್ಷದಲ್ಲಿ ಆದರ ಸುತ್ತಲಿನಿಂದಲೂ ಮಿತಿಗೊಳಿಸಲ್ಪಡುತ್ತದೆ. ಹೀಗೆ ಅದು ಆತ್ಯಂತಿಕ ಸತ್ಯವಾಗಿ ಉಳಿಯದೆ ತೋರಿಕೆಯೊಡನೆ ಒಂದಾಗಿಬಿಡುತ್ತದೆ. ಇದು ಪಾರ್ಮಿನೈಡಿಸ್ಸಿನ ಚಿಂತನೆಯ ಅಡಿಪಾಯವನ್ನೇ ಅಲ್ಲಾಡಿಸಿ ಅವನ ಭವ್ಯ ತಾತ್ವಿಕ ಕಟ್ಟಡ ಕುಸಿದು ಬೀಳುವಂತೆ ಮಾಡುತ್ತದೆ. ಆದುದರಿಂದ 'ಸತ್‌ತತ್ವ' (Being) ಗೋಳಾಕಾರವಲ್ಲವೆಂದೂ, ಅವನು ವಾದಿಸುತ್ತಾನೆ. ಹೀಗೆ 'Being' ಆದಿ ಅಂತ್ಯರಹಿತವಾದುವೆಂದು ಒಪ್ಪುವ ಪಾರ್ಮಿನೈಡಿಸ್, ಅದು ಅನಂತವೂ ಆಗಿರಬೇಕೆಂದು ತಾರ್ಕಿಕವಾಗಿ ಒಪ್ಪಬೇಕೆಂದು ಮೆಲಿಸಸ್ ವಾದಿಸುತ್ತಾನೆ.

೬

ಪಾರ್ಮಿನೈಡಿಸ್‌ನ ಚಿಂತನೆಗೂ, ಶ್ರೀ ಶಂಕರರ ಅದ್ವೈತಕ್ಕೂ ಅನೇಕ ಅಂಶಗಳಲ್ಲಿ ಹೋಲಿಕೆಯುಂಟು. ಪಾರ್ಮಿನೈಡಿಸ್ ಪ್ರತಿಪಾದಿಸಿದ ಅಂತಿಮಸತ್ಯ (Being) ಅದ್ವೈತ ದರ್ಶನದ ಬ್ರಹ್ಮತತ್ವವನ್ನು ಬಹುವಾಗಿ ಹೋಲುತ್ತದೆ. (i) ಪಾರ್ಮಿನೈಡಿಸ್ ಚಿಂತನೆಗೆ ಮೆಲಿಸಸ್ ಮಾಡಿದ ತಿದ್ದುಪಡಿಯನ್ನು ಗಮನದಲ್ಲಿಟ್ಟುಕೊಂಡರೆ, ಶಂಕರರ ಬ್ರಹ್ಮತತ್ವದಂತೆಯೇ ಪಾರ್ಮಿನೈಡಿಸ್‌ನ 'Being' ಅನಂತ, ಅಚಲ, ಅಖಂಡ, ಅಪರಿಣಾಮಿ ಅಮಲ, ಅಮೃತ, ಆದಿ ಅಂತ್ಯ ರಹಿತ, ಅಮಿತ, ನಿತ್ಯ, ನಿರ್ಹೇತುಕ, ನಿರ್ವಿಷಯಿಕ, ನಿರ್ವಿಕಾರ, ನಿರ್ವಿಶೇಷ ತತ್ವ. (ii) ಅದ್ವೈತ ದರ್ಶನದಂತೆ ಅವನು ನಾನಾತ್ವವನ್ನೂ, ಭೇದವನ್ನು ತೋರಿಕೆಯೆಂದು ಎಣಿಸುತ್ತಾನೆ; ಎರಡೂ ಅದ್ವಯ ವಾದಗಳಾಗಿವೆ. (iii) ಅದ್ವೈತ ದರ್ಶನದಂತೆ ಜಗತ್ತಿನ ಸತ್ಯತೆಯನ್ನು ಅವನು ಅಲ್ಲಗಳೆಯುತ್ತಾನೆ. ಜಗತ್ತು ಎರಡೂ ಚಿಂತನೆಗಳ ಪ್ರಕಾರ ಕೇವಲ ತೋರಿಕೆ. ಅದು ಸದಾ ಬದಲಾವಣೆ ಹೊಂದುತ್ತಿರುತ್ತದೆ. ಅದು ಇಂದ್ರಿಯ ಜ್ಞಾನಕ್ಕೆ ಆಧಾರವಾದುದಾಗಿದೆ.

ಅದ್ವೈತ ದರ್ಶನ, 'ಸತ್' ತತ್ವವಾದ ಬ್ರಹ್ಮ, 'ಚಿತ್' ತತ್ವವೂ ಆಗಿರಬೇಕೆಂದೂ, ಆನಂದ ತತ್ವವೂ ಆಗಿರಬೇಕೆಂದೂ ಪ್ರತಿಪಾದಿಸುತ್ತದೆ. ಅಂದರೆ ಚಿತ್ ಅಲ್ಲದ ಸತ್ ಖಂಡಿತವಾಗಿಯೂ 'ಸತ್' ಅಲ್ಲವೆಂದೂ, ಹಾಗೆಯೇ ಚಿತ್, 'ಚಿತ್'

ಎನಿಸಿಕೊಳ್ಳಲು ಸತ್ ಆಗಿದ್ದಾಗ ಮಾತ್ರವೆಂದೂ, ಸತ್, ಚಿತ್‌ಗಳು ಆನಂದ ಸ್ವರೂಪವೆಂದೂ ಅದ್ವೈತ ದರ್ಶನದ ಪ್ರತಿಪಾದನೆಯಾಗಿರುತ್ತದೆ. ಆದರೆ ಸತ್ ತತ್ವವಾದ 'Being' ಚಿತ್ ಹೌದೆಂದು ಪಾರ್ಮಿನೈಡಿಸ್ ಪರಿಗಣಿಸಿದ್ದನೇ ಎಂಬ ವಿಚಾರ ಅಸ್ಪಷ್ಟವಾಗಿದೆ. ಅದನ್ನು 'ಚಿತ್' ಎಂದೂ, 'ಅಚಿತ್' ಎಂದೂ ತಿಳಿಯಬಹುದಾಗಿದೆ ಯೆಂದು ಪಾರ್ಮಿನೈಡಿಸ್ ಅಭಿಪ್ರಾಯಪಡುವಂತೆ ತೋರುತ್ತದೆ. ಬ್ರಹ್ಮತತ್ವ ಆನಂದ ಸ್ವರೂಪವಾದುದು ಎಂಬ ಅದ್ವೈತದರ್ಶನದ ಪ್ರತಿಪಾದನೆ, ಪಾರ್ಮಿನೈಡಿಸ್‌ಗೆ ಹೊಸದು. ಅವನ ದರ್ಶನದಲ್ಲಿ ಅದು ಎಲ್ಲೂ ಕಂಡುಬರುವುದಿಲ್ಲ.

ಆದರೆ ಜಗತ್ತಿನಲ್ಲಿದ್ದುಕೊಂಡಿರುವ ಜೀವಾತ್ಮನ ಬಗ್ಗೆ ಪಾರ್ಮಿನೈಡಿಸ್‌ನ ಚಿಂತನೆಯಲ್ಲಿ ಪ್ರಸ್ತಾಪವಿಲ್ಲ. ಅಂತಿಮಾರ್ಥದಲ್ಲಿ ಜೀವಾತ್ಮ ಜಗತ್ತು ಮತ್ತು ಬ್ರಹ್ಮ ಎಂಬ ಮೂರು ತತ್ವಗಳು ಇಲ್ಲವೆಂದೂ, ಇರುವುದು ಒಂದೇ ತತ್ವವೆಂದೂ, ಸಾರದಲ್ಲಿ ಜೀವಾತ್ಮನು ಬ್ರಹ್ಮವೇ ಎಂದೂ ಜೀವಾತ್ಮ-ಬ್ರಹ್ಮಗಳ ಐಕ್ಯವನ್ನು ಅದ್ವೈತ ದರ್ಶನ ಪ್ರತಿಪಾದಿಸುತ್ತದೆ.

ಹಾಗೆಯೇ ಜೀವನದ ಗುರಿ ಹುಟ್ಟು ಸಾವುಗಳ ನಿರಂತರ ಚಕ್ರದಿಂದ ಹೊರಬರುವುದೆಂದೂ, ಅದನ್ನೇ ಮೋಕ್ಷವೆಂದೂ, ಅದಕ್ಕೆ ಜ್ಞಾನವೇ ಸಾಧನವೆಂದೂ ಅದ್ವೈತ ದರ್ಶನ ಪ್ರತಿಪಾದಿಸಿದರೆ, ಪಾರ್ಮಿನೈಡಿಸ್‌ನ ಚಿಂತನೆ, ಜೀವನದ ಗುರಿ, ಅದರ ಸಾಧನದ ಬಗ್ಗೆ ಮೌನ ವಹಿಸುತ್ತದೆ. ಹೀಗೆ ಅದ್ವೈತ, ದರ್ಶನವಷ್ಟೇ ಅಲ್ಲದೆ ಧರ್ಮವೂ ಆಗಿದ್ದರೆ, ಪಾರ್ಮಿನೈಡಿಸ್‌ನ ಚಿಂತನೆ ದರ್ಶನವಷ್ಟೇ ಆಗಿದೆ.

ಹೆರಾಕ್ಲೈಟಸ್ (ಸುಮಾರು ಕ್ರಿ. ಪೂ. 535)

ಹೆರಾಕ್ಲೈಟಸ್ ಪಾರ್ಮಿನೈಡಿಸ್‌ನ ಸಮಕಾಲೀನ. ಅವನ ತಾತ್ವಿಕ ಚಿಂತನೆ ಪಾರ್ಮಿನೈಡಿಸ್‌ನ ಚಿಂತನೆಗೆ ಸಮಾನಾಂತರವಾಗಿದೆ ಎನ್ನಬಹುದು. ಅಂದರೆ ಅದು ಪಾರ್ಮಿನೈಡಿಸ್‌ನ ಚಿಂತನೆಗೆ ತದ್ವಿರುದ್ಧವಾದುದು.

ಹೆರಾಕ್ಲೈಟಸ್, ತನ್ನ ತಾತ್ವಿಕ ಚಿಂತನೆಯನ್ನು ಒಗಟಿನ ರೂಪದಲ್ಲಿರುವ ಚಿಕ್ಕ ಚಿಕ್ಕ ವಾಕ್ಯಗಳ ಗದ್ಯ ಬರಹದಲ್ಲಿ ಅಭಿವ್ಯಕ್ತಗೊಳಿಸಿದ್ದಾನೆ. ಅವನ ಚಿಂತನೆಯನ್ನು ಹೀಗೆ ಸಂಗ್ರಹಿಸಬಹುದು: ಈ ವಿಶ್ವದಲ್ಲಿ ನಿತ್ಯವಾದುದೂ, ಶಾಶ್ವತವಾದುದೂ, ನಿಶ್ಚಲವಾದುದೂ ಯಾವುದೂ ಇಲ್ಲ. ಎಲ್ಲವೂ ಕ್ಷಣಿಕ. ಎಲ್ಲಾ ವಸ್ತುಗಳೂ ಕ್ಷಣಕ್ಷಣಕ್ಕೂ ಬದಲಾಯಿಸುತ್ತಿರುತ್ತವೆ. ಹೀಗೆ ಚಲನೆಯೇ, ಬದಲಾವಣೆಯೇ, ಗತಿಯೇ ಅಂತಿಮ ಸತ್ಯ. 'ಹರಿಯುತ್ತಿರುವ ನದಿಯಲ್ಲಿ ಎರಡು ಬಾರಿ ಕಾಲಿಡಲಾಗುವುದಿಲ್ಲ' ಎಂಬ ವಾಕ್ಯ ಹೆರಾಕ್ಲೈಟಸ್ಸನ ಚಿಂತನೆಯನ್ನು ಬಹಳ ಚನ್ನಾಗಿ ವಿವರಿಸುತ್ತದೆ. ಒಂದು ಸಾರಿ ನದಿಯಲ್ಲಿ ಕಾಲಿಟ್ಟು ತೆಗೆದು ಪುನಃ ಇಡುವಷ್ಟರಲ್ಲಿ ಹೊಸ ಹೊಸ ನೀರು ಬಂದಿರುತ್ತದೆ. ಪ್ರತಿದಿನವೂ ಹೊಸ ಹೊಸ ರವಿ ಉದಯಿಸುತ್ತಾನೆ. ಬದಲಾವಣೆ, ಚಲನೆ, ಗತಿ, ವೈವಿಧ್ಯತೆ – ಇವು ಭ್ರಮೆ, ಭ್ರಾಂತಿಗಳಲ್ಲ, ಕಟುಸತ್ಯಗಳು ಎಂದು ಅವನು ಪ್ರತಿಪಾದಿಸುತ್ತಾನೆ.

ಹೀಗೆ, ಹೆರಾಕ್ಲೈಟಸ್‌ನ ಪ್ರಕಾರ ಎಡೆಬಿಡದ ಶುದ್ಧ ಕ್ರಿಯಾಭಾವವೇ ಸತ್ಯ. ಅದು ಸದಾ ಚಲಿಸುತ್ತಾ ಪರಿಣಾಮ ಹೊಂದುತ್ತದೆ. ಅದೆಂದಿಗೂ ತಟಸ್ಥವಾಗಿರುವುದಿಲ್ಲ. ಪ್ರಪಂಚದಲ್ಲಿ ಯಾವುದೂ ಸ್ಥಿರವಲ್ಲ. ಸ್ಥಿರತ್ವವೆಂಬುದು 'ಮಾಯೆ', 'ತೋರಿಕೆ' ಎಂದು ಅವನು ಉದ್ಘೋಷಿಸುತ್ತಾನೆ.

ವಸ್ತುಗಳ ಬದಲಾವಣೆ ಒಂದು ನಿರಂತರ ಕ್ರಿಯೆ. ನಿಶ್ಚಲ ಸ್ಥಿತಿಯಲ್ಲಿರುವ ವಸ್ತುವಿನಲ್ಲಿ ಗತಿ ಉಂಟಾಗಿ ನಿಶ್ಚಲತ್ವವನ್ನು ಕಳೆದುಕೊಳ್ಳುತ್ತದೆ. ಇದನ್ನೇ 'ಆಗುವಿಕೆ' ಅಥವಾ 'ಬದಲಾವಣೆ' (Becoming) ಎನ್ನುವುದು. ಹಾಗೆಯೇ ಗತಿಹೊಂದಿದ ವಸ್ತು ನಿಶ್ಚಲತೆಯನ್ನು (Not-Being) ಹೊಂದುತ್ತವೆ. ಇದನ್ನೇ ಆ ವಸ್ತುವಿನ ನಿಲುಗಡೆ (decease) ಎನ್ನುವುದು. ಹೀಗೆ 'ಸತ್' (Being) 'ಅಸತ್' (Not-Being) ಆಗಿ, ಹಾಗೂ 'ಅಸತ್' (Not-Being) 'ಸತ್' (Being) ಆಗಿ ಬದಲಾಯಿಸುವ ಕ್ರಿಯೆ ನಿರಂತರವಾಗಿ ಮುಂದುವರಿಯುತ್ತದೆ. ಈ ಅರ್ಥದಲ್ಲಿ ಸೃಷ್ಟಿ ಲಯಗಳೆರಡೂ ಒಂದೇ. ವಿಕಾಸ ಸಂಕೋಚಗಳೆರಡೂ ಒಂದೇ. ಒಂದು ರೂಪ ಮತ್ತೊಂದು ರೂಪವನ್ನು ಹೊಂದುತ್ತದೆ. ಹೀಗಾದಾಗ ಮೊದಲಿನ ರೂಪ ಮಾಯವಾಗಿ ಹೊಸ ರೂಪ ವ್ಯಕ್ತವಾಗುತ್ತದೆ. ಹೀಗೆ ಪ್ರತಿಯೊಂದು ವಸ್ತುವೂ ಅದರ ವಿರುದ್ಧ ಸ್ಥಿತಿಯನ್ನು ಹೊಂದುತ್ತಿರುತ್ತದೆ. ಆದುದರಿಂದ ಹೆರಾಕ್ಲೈಟಸ್ ಪ್ರತಿಯೊಂದು ವಸ್ತುವೂ ವಿರುದ್ಧ ಗುಣಗಳ ಸಂಗಮ, ದ್ವಂದ್ವಗಳ ಸಂಯೋಗ ಎಂದು ಹೇಳುತ್ತಾನೆ. ಈ ಅರ್ಥದಲ್ಲಿಯೇ ಪ್ರತಿಯೊಂದು ವಸ್ತುವು 'ಇದೆ' ಎಂತಲೂ ಹೇಳಬಹುದು, 'ಇಲ್ಲ'ವೆಂತಲೂ ಹೇಳಬಹುದು. ಹಿತ–ಅಹಿತ, ದುಷ್ಟ–ಶಿಷ್ಟ, ಜನನ–ಮರಣ, ಎಚ್ಚರ–ನಿದ್ರೆ, ಯೌವನ–ವಾರ್ಧಿಕ್ಯ—ಈ ದ್ವಂದ್ವಗಳೆಲ್ಲ ಒಂದೇ. ಎಲ್ಲಿ ಪರಸ್ಪರ ವಿರುದ್ಧ ಶಕ್ತಿಗಳು ಸಮತೋಲನದಲ್ಲಿರುವುವೋ ಅಲ್ಲಿ ಶಾಂತಿ, ಸಾಮರಸ್ಯಗಳು ನೆಲಸಿರುತ್ತವೆ—ಸಂಗೀತದಲ್ಲಿ ಆರೋಹಣ, ಅವರೋಹಣ ಧ್ವನಿಗಳ ಸಮತೋಲನವಾದಾಗ ರಾಗ ಸಾಮರಸ್ಯ ಏರ್ಪಡುವಂತೆ.

ಹೀಗೆ ಹೆರಾಕ್ಲೈಟಸ್‌ನ ಪ್ರಕಾರ, ವಸ್ತುವಿನಲ್ಲಿನ ಪರಸ್ಪರ ವಿರೋಧವೇ ವಿಶ್ವದ ಮೂಲಾಧಾರ. ಈ ವಿರೋಧಗಳ ನಡುವೆ ನಿರಂತರವಾದ ಕಾದಾಟ (Strife) ಮುಂದುವರಿಯುತ್ತದೆ. ಇದೇ ವಸ್ತುವಿಗೆ ಅಸ್ತಿತ್ವವನ್ನು ಕೊಡುವುದು. "ಹೋರಾಟ (ಕಾದಾಟ)ವೇ ಸ್ವರ್ಗಲೋಕದ ಜನಕ, ಸರ್ವ ಜಗತ್ತಿನ ದೊರೆ" ಎಂದು ಹೆರಾಕ್ಲೈಟಿಸ್ ಹೇಳುತ್ತಾನೆ. ಈ ಹೋರಾಟವಿಲ್ಲದಿದ್ದರೆ ವಿಶ್ವ 'ವಿಶ್ವ'ವಾಗುವುದಿಲ್ಲ. ಈ ಪರಸ್ಪರ ವಿರೋಧ ಇರುವುದರಿಂದಲೇ ವಸ್ತು ತನ್ನ ಐಕ್ಯತೆಯನ್ನು ಕಾಪಾಡಿಕೊಳ್ಳುತ್ತದೆ. ಇಡೀ ವಿಶ್ವ ಒಂದು ಸಾಮ್ಯಾವಸ್ಥೆಯಲ್ಲಿರುವುದಕ್ಕೆ ಮುಖ್ಯ ಕಾರಣ ಅದರಲ್ಲಿರುವ ಬಿಗುವು ಮತ್ತು ಹೋರಾಟವೇ. ಇಬ್ಬರು ಕುಸ್ತಿ ಪೈಲ್ವಾನರು ಒಬ್ಬರನ್ನೊಬ್ಬರು ಹೊರಗೆ ಎಸೆಯಲು ಪ್ರಯತ್ನಿಸುತ್ತಿರುವುದೇ ಬಿಗುವು (tension). ಕುಸ್ತಿಯ ಆಕರ್ಷಣೆಯ ಜೀವಾಳ. ಈ ಅರ್ಥದಲ್ಲಿಯೇ 'ಬಿಗುವೇ' ಸಾಮ್ಯಾವಸ್ಥೆ ಹಾಗೂ 'ಸಾಮ್ಯಾವಸ್ಥೆಯೇ' ಬಿಗುವು ಎಂದು ಅವನು ಹೇಳುತ್ತಾನೆ.

ಹೀಗೆ ಪಾರ್ಮಿನ್ಯೆಡಿಸ್‌ನ ಪ್ರಕಾರ, ನಿಶ್ಚಲವೂ, ನಿರವಯವವೂ, ನಿತ್ಯವೂ ಆದ 'ಸತ್‌ತತ್ವ' (Being) ಪರಮ ಸತ್ಯವಾದರೆ, ಹೆರಾಕ್ಲೈಟಸ್‌ನ ಪ್ರಕಾರ, ನಿಶ್ಚಲತೆ, ನಿರಂತರತೆ — ಇವೆಲ್ಲ ಭ್ರಮೆ, ಭ್ರಾಂತಿ. ಅಸ್ತಿ-ನಾಸ್ತಿಗಳು ಏಕಪ್ರಕಾರವಾಗಿರುವಿಕೆಯೇ ಬದಲಾವಣೆ (Becoming) ಎನಿಸುವುದು. ಉದಾಹರಣೆಗೆ ಮಾನವನನ್ನೇ ತೆಗೆದುಕೊಳ್ಳಬಹುದು. ಮಾನವ ಜನ್ಮವೆತ್ತುತ್ತಾನೆ ; ಅದೇ ಅವನ ಹುಟ್ಟು ; ಕೊನೆಗೆ ಎಂದಾದರೊಂದು ದಿನ ಇಲ್ಲವಾಗುತ್ತಾನೆ ; ಅದೇ ಅವನ ಮರಣ. ಜನನ ಮರಣಗಳ ನಡುವೆ ಅವನು ಎಷ್ಟೊಂದು ಬದಲಾವಣೆಯನ್ನು ಹೊಂದುತ್ತಾನೆ! ಅವನು ಎತ್ತರವಾಗಿ ಕೆಲವು ಸಾರಿ ಗಿಡ್ಡಾಗಿ ಬೆಳೆವನು, ಬೌದ್ಧಿಕವಾಗಿ ಹಿಗ್ಗುವುದೂ ಕುಗ್ಗುವುದೂ ಉಂಟು. ಹೀಗೆ ಪರಸ್ಪರ ವಿರುದ್ಧ ತತ್ವಗಳ ಸಂಗಮವೇ ಮಾನವ.

ಹಾಗೆಯೇ ಮರದ ಎಲೆ. ಮೊದಲು ಅದು ಹಸಿರಾಗಿರುತ್ತದೆ. ಕ್ರಮಕ್ರಮೇಣ ಅದು ವಿವರ್ಣವಾಗಿ ಹಳದಿ ಬಣ್ಣವನ್ನು ಹೊಂದಿ ಒಂದು ದಿನ ಉದುರಿ ಹೋಗುತ್ತದೆ. ಅದು ಅಸ್ತಿತ್ವದಿಂದ ನಾಸ್ತಿತ್ವಕ್ಕೆ ಹೋಗುವ ಆಪತ್ತಿಗೆ ಮುನ್ನ ಅದೆಷ್ಟು ಬದಲಾವಣೆಗಳನ್ನು ಹೊಂದಿತು ಎಂಬುದನ್ನು ಅನುಭವ ಮುಚ್ಚಿಡಲಾರದು.

ಹೀಗೆ ಸತತ ಗತಿಯೇ ಅಂತಿಮ ಸತ್ಯ. ಅದನ್ನು ಬಹಳ ಚೆನ್ನಾಗಿ ಪ್ರತಿನಿಧಿಸುವುದೇ ಅಗ್ನಿ. ಅಗ್ನಿ ಯಾವಾಗಲೂ ಒಂದೇ ತೆರನಾಗಿರುವುದಿಲ್ಲ, ಅದರ ಉರಿಯುವಿಕೆ ಕ್ಷಣದಿಂದ ಕ್ಷಣಕ್ಕೆ ಬದಲಾಯಿಸುತ್ತಿರುತ್ತದೆ. ಅದು ನಿರಂತರವಾಗಿ ಕ್ಷಣಿಕವಾದುದು. 'ಚಪಳೆ ಸೊಡರ ಕುಡಿಯಂ ಪೋಲ್ವಳ್'. (ಚಂಚಲೆ, ದೀಪದ ಬತ್ತಿಯ ಕುಡಿಯನ್ನು ಹೋಲುತ್ತಾಳೆ) ಎಂಬ ಕವಿವಾಣಿಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಹೀಗೆ ಅಗ್ನಿಯೇ ಸರ್ವಕ್ಕೂ ಮೂಲ. ಅದು ಮೊದಲು ಕ್ರಮ ಕ್ರಮವಾಗಿ ವಾಯುವಾಗಿ, ತದನಂತರ ನೀರಾಗಿ ಪೃಥ್ವಿ ಎನಿಸಿಕೊಳ್ಳುತ್ತದೆ. ಇದು ಅವರೋಹಣ ಕ್ರಮ. ಹಾಗೆಯೇ ಪೃಥ್ವಿ ಹಂತಹಂತವಾಗಿ ನೀರಾಗಿ ತದನಂತರ ವಾಯುವಾಗಿ, ಪುನಃ ಅಗ್ನಿಯಾಗುತ್ತದೆ. ಇದು ಆರೋಹಣ ಕ್ರಮ. ಈ ಎರಡು ಕ್ರಿಯೆಗಳ ನಡುವೆ ಬಿಗುವು (tension) ಇರುವುದರಿಂದಲೇ ವಿಶ್ವ ರಚನೆಯಲ್ಲಿ ಒಂದು ಅಂದಚಂದವಿದೆ, ಕ್ರಮವಿದೆ.

ಹೀಗೆ, ಒಂದು ವಸ್ತು ಮತ್ತೊಂದಾಗಿ ಪರಿಣಮಿಸುತ್ತದೆ. ಕೊನೆಗೆ ಈ ಎಲ್ಲಾ ವಿರೋಧಗಳೂ, ವಿಪರ್ಯಾಸಗಳೂ ವಿಶ್ವದ ಮೂಲ ತತ್ವವಾದ ಅಗ್ನಿಗೆ ಹಿಂತಿರುಗುತ್ತವೆ. ವಸ್ತುವಿನಲ್ಲಿ ಅಗ್ನಿಯ ಅಂಶದ ಪ್ರಮಾಣ ಹೆಚ್ಚು ಹೆಚ್ಚು ಆದಂತೆಲ್ಲಾ, ಅದರ ಗುಣ ಮಟ್ಟ ಉತ್ತಮಗೊಳ್ಳುತ್ತದೆ. ಅಗ್ನಿಯೇ ಆತ್ಮಕ್ಕೆ ಚೇತನ ಶಕ್ತಿಯನ್ನೂ, ಪ್ರಾಣವನ್ನೂ ನೀಡುವಂಥದು. ಆತ್ಮ ಎಂಬುದು ಪ್ರತಿಯೊಬ್ಬನಲ್ಲಿದ್ದರೂ, ಅದು ಅವರವರಿಗೆ ಪ್ರತ್ಯೇಕವಾದುದಲ್ಲ. ಎಲ್ಲರ ಆತ್ಮಗಳೂ, ವಿಶ್ವಾತ್ಮವಾದ ಅಗ್ನಿಯ ಅಂಶಗಳು, ಕಿಡಿಗಳು. ಆತ್ಮನಲ್ಲಿ ಅಗ್ನಿಯ ಅಂಶದ ಪ್ರಮಾಣ ಹೆಚ್ಚು ಹೆಚ್ಚು ಆದಂತೆಲ್ಲಾ ಅವನ ಬುದ್ಧಿಶಕ್ತಿ ವೈಚಾರಿಕತೆ, ಹೆಚ್ಚು ಹೆಚ್ಚು ಹರಿತವಾಗುತ್ತವೆ. ವಿಶ್ವದ ಆತ್ಮವಾದ ಅಗ್ನಿಯ ಸಂಪರ್ಕ ಕಡಿದುಹೋದರೆ ಮಾನವ-ಆತ್ಮ ಮೂಢವೂ, ಮಂದಮತಿಯೂ, ಅವೈಚಾರಿಕವೂ ಆಗಿ

ಕೊನೆಗೆ ಮರಣವನ್ನು ಹೊಂದುತ್ತದೆ. ಅನಿಷ್ಟ (Evil)ವು ಶಿಷ್ಟ (Good)ದ ನೋವು, ನಲವಿನ ಅನಿವಾರ್ಯ ಹಿಂಬಾಲಕರೆಂದೂ, ವಿಶ್ವದ ಸಾಮರಸ್ಯ ಈ ದ್ವಂದ್ವಗಳ ಮೇಲೆಯೇ ಆಧರಿತವಾಗಿರುವುದೆಂದೂ ಹೆರಾಕ್ಲೈಟಸ್ ಅಭಿಪ್ರಾಯ ಪಡುತ್ತಾನೆ.

ಹೆರಾಕ್ಲೀಟಸ್‌ನ ಪ್ರಕಾರ ವಿಶ್ವ, ಆಕಸ್ಮಿಕವಾದುದಾಗಲೀ ಸ್ವೇಚ್ಛ ಪ್ರವೃತ್ತಿಯದಾಗಲೀ ನಿಯಮರಹಿತವಾದುದಾಗಲೀ ಅಲ್ಲ. ಅದು ನಿಯಮಬದ್ಧವಾದುದು. ಕ್ರಮಬದ್ಧವಾದುದು. ಒಂದು ನಿಯಮವನ್ನು, ಕ್ರಮವನ್ನು ವಿಶ್ವ ಚಾಚೂ ತಪ್ಪದೆ ಅನುಸರಿಸುತ್ತದೆ ಅದನ್ನೇ ಹೆರಾಕ್ಲೈಟಸ್ 'Logos' ಎಂದು ಕರೆಯುತ್ತಾನೆ. ಅವೇ ಪ್ರಕೃತಿ ಅನುಸರಿಸುವ 'ಧರ್ಮ'. ಅದೇ ವಿಶ್ವದ ಸಕಲ ವಸ್ತುಗಳಲ್ಲಿ ನೆಲಸಿರುವ ಪರಿಜ್ಞಾನ ಅಥವಾ ಜ್ಯೋತಿ (Wisdom). ಪ್ರಕೃತಿ ವ್ಯಾಪಾರಗಳನ್ನು ಮುನ್ನಡೆಸುತ್ತಿರುವ ಶಕ್ತಿವಿಶೇಷ. ಅದು ಆದಿ ಅಂತ್ಯ ರಹಿತವಾದುದು. ಅದು ಸ್ವಯಂ ಸೃಜಿತವಾಗಿ ಬೆಳಗುತ್ತಲೂ ಸ್ವಯಂಲಯವಾಗಿ ಅಳಿದುಹೋಗುತ್ತಲೂ ಇರುತ್ತದೆ. ಅದೊಂದು ಕ್ರಿಯಾತ್ಮಕ ನಿರಂತರ ಅವಸ್ಥೆ. ಅದನ್ನು ಅರಿತುಕೊಳ್ಳುವುದೇ ನಿಜವಾದ ವಿವೇಕ ಎಂದು ಹೆರಾಕ್ಲೈಟಸ್ ಅಭಿಪ್ರಾಯ ಪಡುತ್ತಾನೆ. ಪ್ರಸಿದ್ಧ ಅನುಭಾವಿಯಾದ ಪ್ಲೋಟೀನಸ್ 'Logos'ನ್ನು 'ದೈವಿಕ ಜ್ಞಾನ'ವೆಂದೂ, ಇತರ ಪಾಶ್ಚಾತ್ಯ ವಿದ್ವಾಂಸರು 'ದೇವರು' ಎಂದೂ ವಿವರಿಸುತ್ತಾರೆ.

ಹೀಗೆ ಹೆರಾಕ್ಲೀಟಸ್‌ನ ಚಿಂತನೆಗೆ ಅನುಭವವೇ ಆಧಾರ, ತರ್ಕವಲ್ಲ. ಪಾರ್ಮಿನೈಡಿಸ್‌ನ ಚಿಂತನೆ ತರ್ಕಪ್ರಧಾನವಾಗಿದ್ದು ಅನುಭವ ಶೂನ್ಯವಾದರೆ, ಹೆರಾಕ್ಲೀಟಸ್‌ನ ಚಿಂತನೆ ಅನುಭವಗನ್ಯವಾಗಿದ್ದು ಶುಷ್ಕ ತರ್ಕದಿಂದ ವಿಮುಖವಾಗಿದೆ.

೮

ಹೆರಾಕ್ಲೈಟಸ್‌ನ ತಾತ್ವಿಕ ಚಿಂತನೆ ಪ್ರಾಚೀನ ಬೌದ್ಧದರ್ಶನವನ್ನು ಅನೇಕ ಅಂಗಗಳಲ್ಲಿ ಹೋಲುತ್ತವೆ. (i) ಹೆರಾಕ್ಲೈಟಸ್‌ನಂತೆ ಬೌದ್ಧದರ್ಶನವೂ ವಿಶ್ವ ಅನಿತ್ಯವಾದುದೆಂದೂ, ಅಶಾಶ್ವತವಾದುವೆಂದೂ, ಕ್ಷಣ ಭಂಗುರವಾದುವೆಂದೂ ಪ್ರತಿಪಾದಿಸುತ್ತವೆ (ii) ವಿಶ್ವ ಕ್ಷಣಕ್ಷಣಕ್ಕೂ ಬದಲಾಯಿಸುತ್ತದೆಂಬುದನ್ನು ಅದರ ಅನಿತ್ಯತೆಯನ್ನು ವಿವರಿಸಲು ಬೌದ್ಧದರ್ಶನ ಹೆರಾಕ್ಲೈಟಸ್‌ನಂತೆ ಹರಿಯುವ ನದಿಯ ಉದಾಹರಣೆಯನ್ನು ಉಪಯೋಗಿಸಿಕೊಳ್ಳುತ್ತದೆ. ಅಲ್ಲಿ ಅಗ್ನಿ ಚಂಚಲತೆಯ ಪ್ರತೀಕವಾದರೆ, ಬೌದ್ಧದರ್ಶನದಲ್ಲಿ ಮೇಣದ ಬೆಳಕು ಚಂಚಲತೆಯ, ಕ್ಷಣಭಂಗುರತೆಯ ಪ್ರತೀಕವಾಗಿದೆ. (iii) ಹೆರಾಕ್ಲೈಟಸ್‌ನ ಪ್ರಕಾರ, ವಿಶ್ವ 'Logos'ಗೆ ಅನುಸಾರವಾಗಿ ನಡೆಯುತ್ತಿದ್ದರೆ, ಬೌದ್ಧದರ್ಶನ ಸರ್ವವೂ 'ಕರ್ಮ' ನಿಯಮಕ್ಕೆ ಬದ್ಧವಾಗಿದೆಯೆಂದು ಪ್ರತಿಪಾದಿಸುತ್ತದೆ. (iv) ಎರಡೂ ಚಿಂತನೆಗಳ ಪ್ರಕಾರ 'ವಿವೇಕ'ವೆಂದರೆ ನಿತ್ಯವಾದ, ಶಾಶ್ವತವಾದ, ಆತ್ಮವೆಂಬುದಿಲ್ಲ ಎಂಬ ತಿಳುವಳಿಕೆ (v) ಪ್ರತೀತ್ಯ ಸಮುತ್ಪಾದ (—ಕಾರ್ಯ (effect) ಕೆಲವು ನಿಬಂಧನೆ (conditions)ಗಳ ಮೇಲೆ ನಿಂತಿದೆ

ಎಂಬ ನಿಯಮ)ವನ್ನು ಕಂಡುಹಿಡಿದ ಸಿದ್ಧಾರ್ಥ 'ಬುದ್ಧ'ನೆನಿಸಿದರೆ, 'Logos'ನ್ನು ಕಂಡುಹಿಡಿದ ಹೆರಾಕ್ಲೈಟಸ್ 'ಜ್ಞಾನಿ'ಯೆನಿಸಿದ್ದಾನೆ. (vi) ಎರಡೂ ಚಿಂತನೆಗಳಲ್ಲಿ 'ಸದಾಚಾರ'ವನ್ನು, ನೀತಿಪ್ರಾಧಾನ್ಯತೆಯನ್ನು ಒತ್ತಿ ಒತ್ತಿ ಹೇಳಲಾಗಿದೆ. (vii) ಎರಡೂ ದರ್ಶನಗಳಲ್ಲಿ ಸೌಶೀಲ್ಯ, ದಯೆ, ಅನುಕಂಪ, ವಿಶ್ವಾಸ ಮುಂತಾದ ಮಾನವೀಯ ಗುಣಗಳನ್ನು ಬೆಳಸಿ ಉಳಿಸಿಕೊಳ್ಳುವ ಅವಶ್ಯಕತೆಯನ್ನು ಒತ್ತಿ ಹೇಳಲಾಗಿದೆ.

ಹಾಗೆಯೇ ಹೆರಾಕ್ಲೈಟಸ್‌ನ ಮೂಲತತ್ವವಾದ 'ಅಗ್ನಿ' ಸಾಂಖ್ಯ ದರ್ಶನದ 'ಪ್ರಕೃತಿ' ತತ್ವವನ್ನು ಹೋಲುತ್ತದೆ. (i) ಎರಡೂ ವಿಶ್ವದ ಮೂಲಗಳು (ii) ಎರಡೂ ಕ್ರಿಯಾತ್ಮಕವಾದವು ; ಚಲನೆಯೇ ಗತಿಯೇ, ಪರಿಣಾಮವೇ ಅವುಗಳ ಸ್ವಭಾವ (iii) ವಿಶ್ವವ್ಯಾಪಾರಗಳಲ್ಲಿ 'Logos' ಅಂತರ್ಗತವಾಗಿದೆಯೆಂದು ಹೆರಾಕ್ಲೈಟಸ್ ಹೇಳಿದರೆ, ಸಾಂಖ್ಯ ದರ್ಶನ ಅದನ್ನೇ 'ಬುದ್ಧಿ' ಎಂದು ಕರೆಯುತ್ತದೆ.

೬

ಎಂಪೆಡೋಕ್ಲಸ್ (ಸುಮಾರು ಕ್ರಿ.ಪೂ. 495)

ಎಂಪೆಡೋಕ್ಲಸ್ ತನ್ನ ಜೀವನ ಕಾಲದಲ್ಲಿ ಪೈಥಾಗೋರಸ್‌ನಂತೆ ಪ್ರತಿಭಾವಂತನೂ, ಪ್ರಭಾವಶಾಲಿಯೂ ಆದ ವ್ಯಕ್ತಿಯಾಗಿದ್ದನು. ಅವನ ತಾತ್ವಿಕ ಚಿಂತನೆ ತನಗಿಂತ ಮೊದಲು ಇದ್ದ ವಿವಿಧ ತಾತ್ವಿಕ ಆಲೋಚನಾಲಹರಿಗಳ ಕೇವಲ ವ್ಯವಸ್ಥಾಬದ್ಧ ಜೋಡಣೆ (Electicism) ಮಾತ್ರವಾಗಿದೆ ; ತನ್ನದೇ ಆದ ಅಸಲು ಚಿಂತನೆಯನ್ನು ಅವನಲ್ಲಿ ಅಷ್ಟಾಗಿ ಕಾಣಲಾಗುವುದಿಲ್ಲ.

ಎಂಪೆಡೋಕ್ಲಸ್ ತಾತ್ವಿಕ ವೇದಿಕೆಯ ಮೇಲೆ ಬರುವ ವೇಳೆಗಾಗಲೇ ಗ್ರೀಕ್ ತಾತ್ವಿಕಚಿಂತನೆ ಅಗಾಧವಾಗಿ ಬೆಳೆದಿತ್ತು. ಒಂದು ಚಿಂತನೆಗೂ ಮತ್ತೊಂದು ಚಿಂತನೆಗೂ ತಾತ್ವಿಕ ವಿರೋಧ, ಸ್ಪರ್ಧೆ ಇತ್ತು. ಹೀಗೆ ಪರಸ್ಪರ ವಿರುದ್ಧವೆಂದು ಕಾಣಿಸಿದ ವಿವಿಧ ತಾತ್ವಿಕ ಚಿಂತನೆಗಳನ್ನು ಸಮನ್ವಯ ಮಾಡುವ ಕಾರ್ಯ ಎಂಪೆಡೋಕ್ಲಸ್‌ನ ಪಾಲಿಗೆ ಬಂದಿತು.

ಈಗ ಎಂಪೆಡೋಕ್ಲಸ್ ಈ ಸಮನ್ವಯವನ್ನು ಹೇಗೆ ಮಾಡುತ್ತಾನೆ ಎಂಬುದನ್ನು ವಿವರಿಸಬಹುದು. (i) ಪಾರ್ಮಿನೈಡಿಸ್‌ನ ಚಿಂತನೆ, ಹೆರಾಕ್ಲೈಟಸ್‌ನ ಚಿಂತನೆಗೆ ತದ್ವಿರುದ್ಧವಾದುದು. ಅವನ ಪ್ರಕಾರ ಅಂತಿಮ ಸತ್ಯ 'Being'. ಅದು ಸತ್ ತತ್ವ. ಅದು ನಿತ್ಯವೂ ಒಂದೇ ತೆರನಾಗಿರುತ್ತದೆಂದೂ, ಅದು ಅಸತ್ ಅಥವಾ ಇನ್ನೊಂದಾಗಲು ಸಾಧ್ಯವಿಲ್ಲವೆಂದೂ ಅವನು ಪ್ರತಿಪಾದಿಸುತ್ತಾನೆ.

ಪಾರ್ಮಿನೈಡಿಸ್‌ನ 'Being'ನ್ನು 'ಭೌತಿಕ'ವೆಂದು ಪರಿಗಣಿಸಿ ಎಂಪೆಡೋಕ್ಲಸ್ ತನ್ನ 'ಚತುರ್ಭೂತ ಸಿದ್ಧಾಂತ'ವನ್ನು ಮಂಡಿಸುವುದರ ಮೂಲಕ ಹೀಗೆ ವಿವರಿಸುತ್ತಾನೆ. ಅವನ ಪ್ರಕಾರ ನಾಲ್ಕು ಮಹಾ ಭೂತಗಳುಂಟು. ಅವೇ ವಾಯು, ಅಗ್ನಿ, ಅಪ್

(ನೀರು) ಮತ್ತು ಪೃಥ್ವಿಗಳಾಗಿವೆ. ಇಲ್ಲಿ 'ಭೂತ' ಎಂದರೆ ಸರ್ವದ ಮೂಲ ಎಂದರ್ಥ. ಅವನು ಅವುಗಳನ್ನು ಎಲ್ಲದರ ಮೂಲಬೇರು (roots of all) ಗಳೆಂದೇ ಕರೆಯುತ್ತಾನೆ. ಪ್ರತಿಯೊಂದು ಭೂತವೂ ಕಣಗಳಿಂದ ಮಾಡಲ್ಪಟ್ಟಿದೆ. ಹೀಗೆ ನಾಲ್ಕು ವಿಧದ matter ಇವೆ. ಇವುಗಳಿಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಅವುಗಳಿಗೆ ಸೃಷ್ಟಿಯೆಂಬುದೇ ಇಲ್ಲ. ಆದುದರಿಂದ ಅವುಗಳಿಗೆ ನಾಶವೂ ಇಲ್ಲವೆಂದು ಎಂಪೆಡೋಕ್ಲಸ್ ವಾದಿಸುತ್ತಾನೆ. ಈ ಅರ್ಥದಲ್ಲಿ ಪಾರ್ಮಿನೈಡಿಸ್ 'ಸತ್‌ತತ್ವ' (Being) ಆದಿ ಅಂತ್ಯರಹಿತವಾಗಿದ್ದು ಅಚಲ, ಅಪರಿಣಾಮಿಯಾಗಿದ್ದು ಸದಾ ತನ್ನ ಐಕ್ಯವನ್ನು ಕಾಪಾಡಿಕೊಳ್ಳುತ್ತದೆ.

ಆದರೆ ಚಲನೆಯೇ, ಪರಿಣಾಮವೇ, ಬದಲಾವಣೆಯೇ, ಗತಿಯೇ ಅಂತಿಮ ಸತ್ಯವೆಂದು ಹೆರಾಕ್ಲೈಟಸ್ ಪ್ರತಿಪಾದಿಸಿದ್ದಾನೆ. ಈ ವಿರೋಧವನ್ನು ಹೇಗೆ ನಿವಾರಿಸುವುದು? ಅಂತಿಮ ಸತ್ಯ ಆದಿ ಅಂತ್ಯವಿಲ್ಲದ್ದು, ಅಚಲ–ಅಪರಿಣಾಮಿ, ಅವಿನಾಶಿಯೆಂದು ಪಾರ್ಮಿನೈಡಿಸ್‌ನೊಡನೆ ಒಪ್ಪುವ ಪಕ್ಷದಲ್ಲಿ ನಮ್ಮ ದಿನನಿತ್ಯದ ಅನುಭವದಲ್ಲಿ, ನಾವು ಕಾಣುವ ಚಲಿಸುವ, ಪರಿಣಾಮಹೊಂದುವ ಹಾಗೂ ವಿನಾಶಹೊಂದುವ ವಸ್ತುಗಳನ್ನು ಹೇಗೆ ಸಮರ್ಥಿಸುವುದು?

ಎಂಪೆಡೋಕ್ಲಸ್ ಹೀಗೆ ಸಮರ್ಥಿಸುತ್ತಾನೆ: ಚತುರ್ಭೂತಗಳಾದ ವಾಯು, ಅಗ್ನಿ, ಅಪ್ ಮತ್ತು ಪೃಥ್ವಿಗಳು ಅತ್ಯಂತ ಸೂಕ್ಷ್ಮ ಕಣಗಳಿಂದ ಮಾಡಲ್ಪಟ್ಟಿವೆ. ಪುನಃ ವಿಭಜಿಸಲಾಗದ ಅತ್ಯಂತ ಸೂಕ್ಷ್ಮವಾದ ಈ ಕಣಗಳಿಗೆ ಹುಟ್ಟಾಗಲೀ, ಸಾವಾಗಲೀ, ಪ್ರಾರಂಭವಾಗಲೀ, ಕೊನೆಯಾಗಲೀ ಇಲ್ಲ. ಅವು ಅವಿನಾಶಿ. ನಾಲ್ಕು ವಿಧದ ಈ ಸೂಕ್ಷ್ಮ ಕಣಗಳು ಪರಸ್ಪರ ಸಂಯೋಗವಾದಾಗ 'ಭೌತಿಕ ವಸ್ತು' ಉತ್ಪತ್ತಿಯಾಗುತ್ತದೆ. ಅವು ಪರಸ್ಪರ ವಿಯೋಗ ಹೊಂದಿದಾಗ 'ಭೌತಿಕ ವಸ್ತು' ನಾಶವಾಗುತ್ತದೆ. ಹೀಗೆ ವಸ್ತುವಿಗೆ 'ಉತ್ಪತ್ತಿ' ಮತ್ತು 'ನಾಶ' ಉಂಟು, ಚಲನೆಯುಂಟು ಎಂದು ಪ್ರತಿಪಾದಿಸುವ ಹೆರಾಕ್ಲೈಟಸ್‌ನನ್ನು ಸಮರ್ಥಿಸಬಹುದು ಎಂದು ಎಂಪೆಡೋಕ್ಲಸ್ ವಾದಿಸುತ್ತಾನೆ.

ವಸ್ತುವಿಗೆ ಹುಟ್ಟು, ನಾಶವಿದ್ದರೂ, ಅದು ಯಾವ ಸೂಕ್ಷ್ಮ ಕಣಗಳಿಂದ ಮಾಡಲ್ಪಟ್ಟಿದೆಯೋ ಅವುಗಳಿಗೆ ಚಲನೆಯಾಗಲೀ, ಪರಿಣಾಮವಾಗಲೀ ಹುಟ್ಟಾಗಲೀ ನಾಶವಾಗಲೀ ಇಲ್ಲ ಎಂದು ಪ್ರತಿಪಾದಿಸುವುದರ ಮೂಲಕ ಪಾರ್ಮಿನೈಡಿಸ್‌ನ 'Being'ನ್ನು ಎತ್ತಿ ಹಿಡಿಯುತ್ತಾನೆ. ಹೀಗೆ ಪಾರ್ಮಿನೈಡಿಸ್ ಹಾಗೂ ಹೆರಾಕ್ಲೈಟಸ್—ಇಬ್ಬರ ಚಿಂತನೆಗಳನ್ನೂ ಎಂಪೆಡೋಕ್ಲಸ್ ಸಮನ್ವಯ ಮಾಡುತ್ತಾನೆ.

ಅಯಾನಿಕ್ ತಾತ್ವಿಕರಿಗೂ, ಪಾರ್ಮಿನೈಡಿಸ್‌ಗೂ ಒಂದು ರೀತಿಯ ತಾತ್ವಿಕ ವಿರೋಧವಿದ್ದಂತೆ ಕಂಡುಬರುತ್ತದೆ. ಏಕೆಂದರೆ, ಅಯಾನಿಕ್ ತಾತ್ವಿಕ ಚಿಂತನೆ, ಯಾವುದೋ ಒಂದು ಮೂಲವಸ್ತು ಸಕಲ ಪ್ರಪಂಚವಾಗುತ್ತದೆ ಎಂದು ಪ್ರತಿಪಾದಿಸುತ್ತದೆ. ಉದಾಹರಣೆಗೆ ಥಾಲಿಸ್‌ನು, ನೀರು ಸಕಲ ವಿಶ್ವದ ಮೂಲವೆಂದೂ, ಅನಾಕ್ಸಿಮಾಂಡರ್ ಅನಿರ್ದಿಷ್ಟ ತತ್ವವಾದ 'ಅಪೈರಾನ್' ಮೂಲವೆಂದೂ, ಅನಾಕ್ಸಿಮಿನಸ್

ವಾಯು ಮೂಲವೆಂದೂ ಪ್ರತಿಪಾದಿಸುತ್ತಾರೆ. ಅಂದರೆ ಮೂಲಾಧಾರ ವಸ್ತು ಸರ್ವ ವಿಧವಾದ ಚಲನ ಮತ್ತು ಪರಿಣಾಮ ಶಕ್ತಿಗಳನ್ನು ತನ್ನಲ್ಲಿಯೇ ಅವಶ್ಯಕವಾಗಿ ಹೊಂದಿದೆ ಎಂದು ಅವರು ಭಾವಿಸಿದಂತಾಗುತ್ತದೆ. ಆದರೆ ಅಂತಿಮಸತ್ಯ ಚಲನರಹಿತವಾದುದೆಂದೂ ಅಪರಿಣಾಮ, ನಿರ್ವಿಶೇಷವೆಂದೂ ಪಾರ್ಮಿನೈಡಿಸ್ ಪ್ರತಿಪಾದಿಸುತ್ತಾನೆ. ಪರಸ್ಪರ ವಿರುದ್ಧವಾದ ಈ ಎರಡು ಚಿಂತನೆಗಳನ್ನು ಹೇಗೆ ಸಮನ್ವಯ ಮಾಡುವುದು ?

ಸಮನ್ವಯವನ್ನು ಎಂಪೆಡೋಕ್ಲಸ್ ಹೀಗೆ ಮಾಡುತ್ತಾನೆ : ನಾಲ್ಕು ವಿಧದ ಸೂಕ್ಷ್ಮಕಣಗಳಿಂದ ಮಾಡಲ್ಪಟ್ಟಿರುವ ಎಲ್ಲವರ ಬೇರುಗಳೆನಿಸಿದ ವಾಯು, ಅಗ್ನಿ, ಅಪ್ ಮತ್ತು ಪೃಥ್ವಿ ಎಂಬ ನಾಲ್ಕು ಮಹಾಭೂತಗಳುಂಟು. ಒಂದೊಂದು ಭೂತದ ಸೂಕ್ಷ್ಮ ಕಣಗಳು ಪರಸ್ಪರ ಸಂಯೋಗವಾದಾಗ 'ಭೌತಿಕ ವಸ್ತು' ಹೊರಬರುತ್ತದೆ ; ಪರಸ್ಪರ ವಿಯೋಗವಾದಾಗ ಅದು ನಾಶ ಹೊಂದುತ್ತದೆ. ಈ ಅರ್ಥದಲ್ಲಿ ವಸ್ತುವಿಗೆ ಹುಟ್ಟು, ನಾಶ, ಚಲನ, ಪರಿಣಾಮ ಉಂಟು. ಆದರೆ ಒಂದು ವಿಧದ ಸೂಕ್ಷ್ಮಕಣಗಳಿಂದ ಕೂಡಿರುವ ಒಂದು ಮಹಾಭೂತ ಎಂದೆಂದಿಗೂ ಇನ್ನೊಂದು ವಿಧದ ಮಹಾಭೂತವಾಗಲಾರದು ಎಂದು ಎಂಪೆಡೋಕ್ಲಸ್ ಸಾರುತ್ತಾನೆ. ಈ ಅರ್ಥದಲ್ಲಿ ಅಂತಿಮಸತ್ಯ ಚಲನರಹಿತವಾದುದೆಂದೂ, ಅಪರಿಣಾಮ, ನಿರ್ವಿಶೇಷವೆಂದೂ ಎಂಪೆಡೋಕ್ಲಸ್ ವಾದಿಸುತ್ತಾನೆ. ಹೀಗೆ ಅಯಾನಿಕ್ ಮತ್ತು ಈಲಿಯಾಟಿಕ್ ಚಿಂತನೆಗಳನ್ನು ಅವನು ಸಮನ್ವಯ ಮಾಡುತ್ತಾನೆ.

ಹೀಗೆ ಎಂಪೆಡೋಕ್ಲಸ್‌ನ ಪ್ರಕಾರ ವಾಯು, ಅಗ್ನಿ, ಅಪ್ ಪೃಥ್ವಿ ಎಂಬ ನಾಲ್ಕು ವಿಧದ ಮಹಾಭೂತಗಳುಂಟು. ಅವು ಎಲ್ಲವೂ ಸರಿಸಮ ಹಾಗೂ ಸ್ವತಂತ್ರ ತತ್ವಗಳು ಅವುಗಳಲ್ಲಿ ಯಾವುದೊಂದೂ ಯಾವುದರಿಂದಲೂ ಬಂದಿಲ್ಲ, ಯಾವುದಕ್ಕೂ ಮೂಲವಲ್ಲ. ವಿಶ್ವದ ಉಳಿದೆಲ್ಲ ವಸ್ತುಗಳೂ ಈ ನಾಲ್ಕು ಮಹಾಭೂತಗಳ ವಿವಿಧ ಅನುಪಾತಗಳಲ್ಲಿನ ಮಿಶ್ರಣವಾಗಿವೆ. ಈ ನಾಲ್ಕು ಭೂತಗಳು ಪರಸ್ಪರ ಸಂಯೋಗವಾಗುವುದಕ್ಕೆ 'ಉತ್ಪತ್ತಿ' ಯೆಂದೂ, ಪರಸ್ಪರ ವಿಯೋಗವಾಗುವುದಕ್ಕೆ 'ನಾಶ'ವೆಂದೂ ಹೇಳಬಹುದು. ವಿಶ್ವದ ವಸ್ತುಗಳ ಗುಣಧರ್ಮಗಳು ಬೇರೆಬೇರೆಯಾಗಿರುವುದಕ್ಕೆ ವಿವಿಧ ಅನುಪಾತಗಳಲ್ಲಿನ ಸಂಯೋಗವೇ ಕಾರಣವೆಂದು ಎಂಪೆಡೋಕ್ಲಸ್ ಪ್ರತಿಪಾದಿಸುತ್ತಾನೆ.

ಈಗ ಒಂದು ಪ್ರಶ್ನೆ ತಲೆ ಎತ್ತುತ್ತದೆ. ಚತುರ್ಭೂತಗಳು ಚಲನರಹಿತವಾದವು ಬದಲಾವಣೆರಹಿತವಾದವು. ಅವು ಪರಸ್ಪರ ಒಂದರೊಡನೊಂದು ವಿವಿಧ ಅನುಪಾತಗಳಲ್ಲಿ ಮಿಶ್ರ (ಸಂಯೋಗ) ವಾದಾಗ ವಿಶ್ವದ ಸಕಲ ವಸ್ತುಗಳೂ ಅಸ್ತಿತ್ವಕ್ಕೆ ಬರುತ್ತವೆಂದೂ ಪರಸ್ಪರ ವಿಯೋಗವಾದಾಗ ಅವು ನಾಶ ಹೊಂದುತ್ತವೆಂದೂ ಎಂಪೆಡೋಕ್ಲಸ್ ಪ್ರತಿಪಾದಿಸುತ್ತಾನೆ. ತಮ್ಮಲ್ಲಿ ಚಲನರಹಿತವಾದ ಈ ಭೂತಗಳು ಹೇಗೆ ಪರಸ್ಪರ ಸಂಯೋಗ ವಿಯೋಗಗಳನ್ನು ಹೊಂದುತ್ತವೆ ? ಈ ಪ್ರಶ್ನೆಗೆ ಉತ್ತರವಾಗಿ ಎಂಪೆಡೋಕ್ಲಸ್ ಪ್ರೇಮ (Love) ಮತ್ತು ದ್ವೇಷ (Hate) ಎಂಬ ಎರಡು ಆಕರ್ಷಣ, ವಿಕರ್ಷಣ ಶಕ್ತಿಗಳನ್ನು ಪ್ರತಿಪಾದಿಸುತ್ತಾನೆ. ಈ ಶಕ್ತಿಗಳು ಜೊತೆಜೊತೆಯಲ್ಲಿಯೇ ಚತುರ್ಭೂತಗಳ ಮೇಲೆ

ವರ್ತಿಸುತ್ತವೆ. 'ಪ್ರೇಮ' ಶಕ್ತಿ ಪ್ರಬಲವಾದಾಗ ಚತುರ್ಭೂತಗಳು ಪರಸ್ಪರ ಸಂಯೋಗ ಹೊಂದಿ ವಿಶ್ವದ ಸಕಲ ವಸ್ತುಗಳೂ ಉತ್ಪತ್ತಿಯಾಗುತ್ತವೆ. 'ದ್ವೇಷ' ಪ್ರಬಲವಾದಾಗ ಅವು ಪರಸ್ಪರ ವಿಯೋಗ ಹೊಂದಿ ವಸ್ತುಗಳು ನಾಶವಾಗುತ್ತವೆ.

ಹೀಗೆ ಚತುರ್ಭೂತಗಳ ಮೇಲೆ ಎರಡು ಶಕ್ತಿಗಳು ವರ್ತಿಸುತ್ತವೆಂದು ಅವಶ್ಯವಾಗಿ ತಿಳಿಯಬೇಕೆಂದು ಎಂಪೆಡೋಕ್ಲಸ್ ವಾದಿಸುತ್ತಾನೆ. ಮೂಲಾಧಾರ ತತ್ವ (ಉದಾ : ನೀರು) ತಾನೇ ವಿಶ್ವವಾಗುವ ಶಕ್ತಿಯನ್ನು ತನ್ನಲ್ಲಿ ಅವ್ಯಕ್ತರೂಪದಲ್ಲಿ ಹೊಂದಿದೆ ಎಂದು ಪ್ರತಿಪಾದಿಸುವ ಅಯೋನಿಕ್ ಚಿಂತನೆಯನ್ನು ಎಂಪೆಡೋಕ್ಲಸ್ ಒಪ್ಪುವುದಿಲ್ಲ. ಏಕೆಂದರೆ, ಮೂಲಾಧಾರ ತತ್ವ, ಅವನ ಪ್ರಕಾರ ಭೌತಿಕವಾದುದರಿಂದ, ಅದು ನಿರ್ಜೀವ ವಸ್ತು ; ಅದು ತನ್ನಷ್ಟಕ್ಕೆ ತಾನೇ ವಿಶ್ವವಾಗಲಾರದು. ಆದುದರಿಂದ 'ಪ್ರೇಮ' ಮತ್ತು 'ದ್ವೇಷ' ಎಂಬ ಎರಡು ಶಕ್ತಿಗಳು ವಿಶ್ವದ ಮೂಲಾಧಾರ ತತ್ವಗಳಾದ ಚತುರ್ಭೂತಗಳ ಮೇಲೆ ವರ್ತಿಸುವುದರ ಮೂಲಕ ಪ್ರಪಂಚದ ವಸ್ತುಗಳ ಉತ್ಪತ್ತಿ ನಾಶಗಳಿಗೆ ಕಾರಣವಾಗುತ್ತವೆಂದು ಅವಶ್ಯವಾಗಿ ಒಪ್ಪಬೇಕೆಂದು ಎಂಪೆಡೋಕ್ಲಸ್ ಪ್ರತಿಪಾದಿಸುತ್ತಾನೆ. ಮಾನವರಲ್ಲಿ ಕಂಡುಬರುವ ಪರಸ್ಪರ ಆಕರ್ಷಣ ವಿಕರ್ಷಣಗಳಿಗೆ, ಈ 'ಪ್ರೇಮ' ಮತ್ತು 'ದ್ವೇಷ'ಗಳೇ ಮೂಲವೆಂದು ಬೇರೆ ಹೇಳಬೇಕಾಗಿಲ್ಲ.

ಎಂಪೆಡೋಕ್ಲಸ್‌ನ ಪ್ರಕಾರ, ವಿಶ್ವದ ಸೃಷ್ಟಿಲಯಗಳು ಒಂದು ನಿರಂತರ ಕ್ರಿಯೆ. ಅದೊಂದು ತಿರುಗುತ್ತಿರುವ ಚಕ್ರ. ಅದಕ್ಕೆ ಆದಿಯಾಗಲೀ ಅಂತ್ಯವಾಗಲೀ ಇಲ್ಲ.

ಪರಮಾಣುವಾದಿಗಳು

ಎಂಪೆಡೋಕ್ಲಸ್‌ನಂತೆ ಪರಮಾಣುವಾದಿಗಳು ತಮಗಿಂತ ಮೊದಲು ಇದ್ದ ಗ್ರೀಕ್ ಚಿಂತನೆಯಲ್ಲಿನ ಸ್ವವಿರೋಧವನ್ನು ನಿವಾರಿಸಿ ಸಮನ್ವಯವನ್ನು ಉಂಟುಮಾಡಲು ಪ್ರಯತ್ನಿಸಿದ್ದಾರೆ. ಲೂಸಿಪ್ಪಸ್ ಮತ್ತು ಡೆಮಾಕ್ರೈಟಸ್ ಎಂಬ ಜ್ಞಾನಿದ್ವಯರೇ ಆ ಪರಮಾಣುವಾದಿಗಳು. ಇವರೇ ಗ್ರೀಕ್ ಚಿಂತನೆಯಲ್ಲಿ ಮೊಟ್ಟಮೊದಲಿಗೆ ಪರಮಾಣುವಾದ (Atomism) ವನ್ನು ಪ್ರತಿಪಾದಿಸಿದರು. ಪಾಶ್ಚಾತ್ಯ ತತ್ವಶಾಸ್ತ್ರದಲ್ಲಿ ಸಾಮಾನ್ಯವಾಗಿ ಇವರಿಬ್ಬರೂ ಒಟ್ಟೊಟ್ಟಿಗೇ ಹೆಸರಿಸಲ್ಪಡುತ್ತಾರೆ.

ಲೂಸಿಪಸ್ ಬಹಳ ಕಾಲ ಇದ್ದಂತೆ ಕಂಡು ಬರುವುದಿಲ್ಲ. ಅವನ ಬಗ್ಗೆ ನಮಗೆ ಈಗ ಉಪಲಬ್ಧವಾಗಿರುವುದು ಅಲ್ಪವೇ. ಡೆಮಾಕ್ರೈಟಸ್‌ನ ಕಾಲ ಕ್ರಿ. ಪೂ. 460—370. ಅವನು ಅಪ್ರತಿಮ ಜ್ಞಾನಿಯಾಗಿದ್ದ, ಪರಿಪಕ್ವ ಅನುಭವಿಯಾಗಿದ್ದ.

ಎಂಪೆಡೋಕ್ಲಸ್‌ನ 'ಕಣ' ಕಲ್ಪನೆಯ ತಾರ್ಕಿಕ ಪರಮಾವಧಿಯೇ 'ಪರಮಾಣುವಾದ, ಅಣು ಎಂದರೆ ಅತ್ಯಂತ ಸೂಕ್ಷ್ಮ ಪದಾರ್ಥ. ಅದು ಇಂದ್ರಿಯ ಗೋಚರವಲ್ಲ. ಅದು ಅವಿಭಾಜ್ಯ. ಒಂದು ವಸ್ತುವನ್ನು ವಿಭಜಿಸುತ್ತಾ ಹೋದ ಹಾಗೆ ಕೊನೆಯಲ್ಲಿ ವಿಭಜಿಸಲಾಗದ ಒಂದು ಪೂರ್ಣ ಅಂಶ ಉಳಿಯುತ್ತದೆ. ಅದೇ ಪರಮಾಣು ಅಥವಾ ಆ್ಯಟಮ್.

ಅಣುಗಳು ಅಪರಿಮಿತ ಮತ್ತು ನಿತ್ಯ. ಎಲ್ಲ ಅಣುಗಳು ಒಂದೇ ತೆರನಾಗಿರುತ್ತವೆ. ಆದರೆ ಗಾತ್ರ ಹಾಗೂ ರೂಪಗಳಲ್ಲಿ ಅವುಗಳಲ್ಲಿ ಪರಸ್ಪರ ಭೇದ ಇದೆ. ಅವುಗಳಿಗೆ ಚಲನ ಶಕ್ತಿ, ಸ್ವಾಭಾವಿಕವಾದುದು, ನೈಜವಾದುದು, ಅಪ್ಪ ಅವಿನಾಶಿ ಅವುಗಳ ನೈಜವಾದ ಚಲನಶಕ್ತಿಯಿಂದ ಅವು ಪರಸ್ಪರ ಸಂಧಿಸುತ್ತವೆ ಹಾಗೂ ವಿಯೋಗ ಹೊಂದುತ್ತವೆ. ಅವು ಪರಸ್ಪರ ಸಂಯೋಗವಾದಾಗ ನಾವು ಅನುಭವಿಸುವ ವಸ್ತುಗಳು 'ಉತ್ಪತ್ತಿ'ಯಾಗುತ್ತವೆ ; ಪರಸ್ಪರ ವಿಯೋಗವಾದಾಗ ಅವು 'ನಾಶ' ಹೊಂದುತ್ತವೆ. ಹೀಗೆ ವಸ್ತುವಿಗೆ ಆದಿ ಅಂತ್ಯ ಉಂಟು ; ಆದರೆ ಅಣುಗಳು ಅವಿನಾಶಿ.

ಹೀಗ ಅಣುಗಳು ಸಂಯೋಗ–ವಿಯೋಗರಹಿತ ಸ್ಥಿತಿಯಲ್ಲಿ ಎಂದೆಂದಿಗೂ ತಾವಿರುವ ಸ್ಥಿತಿಯಲ್ಲೀ ಇರುತ್ತವೆ. ಅವು ಪರಿಣಾಮರಹಿತವಾದವು ಈ ಅರ್ಥದಲ್ಲಿ ಪಾರ್ಮಿನೈಡಿಸ್ ಹೇಳುವಂತೆ ಸತ್ಯ ನಿರ್ವಿಕಾರ, ನಿರವಯವ, ನಿರ್ಹೇತುಕ ಹಾಗೂ ನಿತ್ಯ. ಆದರೆ ಸಂಯೋಗ–ವಿಯೋಗ ಸ್ಥಿತಿಯಲ್ಲಿ ಅವುಗಳಲ್ಲಿ ವಿಕಾರ, ಚಲನೆ, ಆಗುವಿಕೆ ಇವೆ. ಈ ಅರ್ಥದಲ್ಲಿ ಅಸತ್ಯ ಹೆರಾಕ್ಲೈಟಸ್ ಹೇಳುವಂತೆ, ಅನಿತ್ಯ, ನಿರಂತರ ಬದಲಾವಣೆಯನ್ನು ಹೊಂದುವಂಥದು.

'ಪ್ರೇಮ' ಮತ್ತು 'ದ್ವೇಷ'ಗಳೇ ಚತುರ್ಭೂತಗಳ ಕಣಗಳ ಸಂಯೋಗ–ವಿಯೋಗಕ್ಕೆ ಕಾರಣ ಎಂಬ ಎಂಪೆಡೋಕ್ಲಸ್‌ನ ಪ್ರತಿಪಾದನೆಯನ್ನು, ಅತಾರ್ಕಿಕ ಹಾಗೂ ಪೌರಾಣಿಕ ಎಂದು ಪರಮಾಣುವಾದಿಗಳು ತಳ್ಳಿಹಾಕಿ, ಚಲನೆ, ಗತಿ ಪರಮಾಣುಗಳ ಸ್ವರೂಪವೆಂದು ಪ್ರತಿಪಾದಿಸುತ್ತಾರೆ. ಈ ದೃಷ್ಟಿಯಲ್ಲಿ ಲೂಸಿಪ್ಪಸ್ ಮತ್ತು ಡೆಮಾಕ್ರೈಟಸ್‌ರ ಚಿಂತನೆ, ಎಂಪೆಡೋಕ್ಲಸ್‌ನ ಚಿಂತನೆಗಿಂತ ಉತ್ಕೃಷ್ಟವಾದುದಾಗಿದೆ.

ಅನಾಕ್ಸಗೊರಾಸ್ (ಸುಮಾರು ಕ್ರಿ. ಪೂ. 500)

ಅನಾಕ್ಸಗೊರಾಸ್ ಪ್ರಾಚೀನ ಗ್ರೀಕ್ ಚಿಂತನೆಯ ಮೊದಲನೆಯ ಘಟ್ಟದ ಕೊನೆಯ ಚಿಂತಕ. ಎಂಪೆಡೋಕ್ಲಸ್ ಮತ್ತು ಪರಮಾಣುವಾದಿಗಳ ತಾತ್ವಿಕ ಚಿಂತನೆಯ ತಳಹದಿಯೇ ಅನಾಕ್ಸಗೊರಾಸ್‌ನ ಚಿಂತನೆಯ ತಳಹದಿಯಾಗಿದೆ. ಅವನ ಪ್ರಕಾರ ಭೌತಿಕ ಕಣ (Matter) ಆದಿ ಅಂತ್ಯ ಇಲ್ಲದ್ದು, ಆದುದರಿಂದ ಅವಿನಾಶಿ. ಭೌತಿಕ ಕಣವನ್ನು ಅನಂತವಾಗಿ ವಿಭಜಿಸುತ್ತಾ ಹೋಗಬಹುದು ; ವೈಶೇಷಿಕರು (ಪರಮಾಣುವಾದಿಗಳು) ಹೇಳುವಂತೆ ಅದರ ವಿಭಜನೆಗೆ ಮಿತಿಯೆಂಬುದಿಲ್ಲ. ಪರಮಾಣುಗಳೆಲ್ಲ ಒಂದೇ ತೆರನಾದ ಭೌತಿಕ ಕಣದಿಂದ (Matter) ಮಾಡಲ್ಪಟ್ಟಿವೆ ಎಂಬ ಅನಾಕ್ಸಗೊರಾಸ್ ತಿರಸ್ಕರಿಸುತ್ತಾನೆ.

ಹಾಗೆಯೇ ವಿಶ್ವದಲ್ಲಿ ವಾಯು, ಅಗ್ನಿ, ಅಪ್ ಮತ್ತು ಪೃಥ್ವಿ ಎಂಬ ನಾಲ್ಕು ಬಗೆಯ ಮಹಾಭೂತ (Matter) ಗಳು ಮಾತ್ರ ಇವೆ ಎಂಬ ಎಂಪೆಡೋಕ್ಲಸ್‌ನ ಪ್ರತಿಪಾದನೆಯನ್ನು ಅನಾಕ್ಸಗೊರಾಸ್ ಒಪ್ಪುವುದಿಲ್ಲ. ಅವನ ಪ್ರಕಾರ ಪ್ರಪಂಚದಲ್ಲಿ ಎಷ್ಟು ಬಗೆಯ ವಸ್ತು ವಿಶೇಷಗಳಿವೆಯೋ ಅಷ್ಟು ಬಗೆಯ Matter ಗಳು ಇವೆ.

ಇವೆಲ್ಲವೂ ಸರಿಸಮ, ಅಂತಿಮ ಹಾಗೂ ಸ್ವತಂತ್ರವಾದವುಗಳು, ಒಂದು ಇನ್ನೊಂದಾಗುವುದಿಲ್ಲ, ಒಂದರಿಂದ ಇನ್ನೊಂದು ಉತ್ಪತ್ತಿಯಾಗುವುದಿಲ್ಲ ಉದಾ : ಕೂದಲು, ಬೆಳ್ಳಿ, ಚಿನ್ನ, ಮೂಳೆ ಇತ್ಯಾದಿ. ಚಿನ್ನ ಮೂಳೆಯಾಗಿಯಾಗಲೀ, ಮೂಳೆ ಚಿನ್ನವಾಗಿಯಾಗಲೀ ಬದಲಾವಣೆ ಹೊಂದಲಾರದ್ದರಿಂದ, ವಿಶ್ವದಲ್ಲಿ ಎಷ್ಟೆಷ್ಟು ವಸ್ತು ವಿಶೇಷಗಳಿವೆಯೋ ಅಷ್ಟಷ್ಟು Matter ಇವೆ ಎಂದು ಅನಿವಾರ್ಯವಾಗಿ ಒಪ್ಪಬೇಕೆಂದು ಅನಾಕ್ಸ ಗೊರಾಸ್ ವಾದಿಸುತ್ತಾನೆ.

ಹೀಗೆ Matter ಕೇವಲ ನಾಲ್ಕು ಬಗೆಯದು ಅಲ್ಲ ; ಅನಂತ ಬಗೆಯದು. Matter ನ್ನು ಅವನು 'ಸ್ಪರ್ಮಟ' ಅಥವಾ 'ಬೀಜ' ಎಂದು ಪಾರಿಭಾಷಿಕವಾಗಿ ಕರೆಯುತ್ತಾನೆ. ಅವು ಪಾರ್ಮಿನೈಡಿಸ್‌ನ 'Being' ನಂತೆ ಯಾವ ಬದಲಾವಣೆಯನ್ನೂ ವಿಕಾರವನ್ನೂ ಹೊಂದುವುದಿಲ್ಲ. ಅವು ಚಲನ ರಹಿತವಾದವು ; ಸದಾ ಒಂದೇ ರೀತಿಯಲ್ಲಿ ಇರುವಂಥವು.

ಅನಂತ ಬೀಜಗಳು ಪರಸ್ಪರ ಸಂಯೋಗವಾದಾಗ ವಸ್ತು 'ಉತ್ಪತ್ತಿ'ಯಾಗುತ್ತದೆ. ಅವು ಪರಸ್ಪರ ವಿಯೋಗವಾದಾಗ ವಸ್ತು 'ನಾಶ' ಹೊಂದುತ್ತದೆ ಎಂದು ಹೇಳಬಹುದು. ಹೀಗೆ ವಸ್ತುವಿಗೆ ಉತ್ಪತ್ತಿ, ಹುಟ್ಟು ಉಂಟು ; ಹಾಗೆಯೇ ಕೊನೆಯೂ, ನಾಶವೂ ಉಂಟು. ಆದರೆ ವಸ್ತು ಯಾವುದರ ಸಂಯೋಗವೊ, ಅವುಗಳಿಗೆ (ಅಂದರೆ ಬೀಜಗಳಿಗೆ) ಉತ್ಪತ್ತಿಯಾಗಲೀ ನಾಶವಾಗಲೀ ಇಲ್ಲ. ಹೀಗೆ ಅನಾಕ್ಸಗೊರಾಸ್ ತನ್ನ ಹಿಂದೆ ಇದ್ದ ಪರಸ್ಪರ ವಿರುದ್ಧವೆನಿಸಿದ ಚಿಂತನೆಗಳನ್ನು ಸಮನ್ವಯ ಮಾಡಿದ್ದಾನೆ.

ಅನಾಕ್ಸಗೊರಾಸ್‌ನ ವೈಶಿಷ್ಟ್ಯವೇನೆಂದರೆ ಬೀಜ ಅಥವಾ ಸ್ಪರ್ಮಟ ಸಜಾತೀಯವಲ್ಲ (not homogeneous) ಎಂದು ಹೇಳುವುದು. ಪ್ರತಿಯೊಂದು ಬೀಜ ವಿಶ್ವದ ಉಳಿದೆಲ್ಲ ಬೀಜಗಳ ಸ್ವಲ್ಪ ಭಾಗವನ್ನಾದರೂ ತನ್ನಲ್ಲಿ ಒಳಗೊಂಡಿರುತ್ತದೆ. ಅವನ ಪ್ರಕಾರ ಪರಿಶುದ್ಧವಾದ ಬೀಜನೆಂಬುದಿಲ್ಲ. ಉದಾಹರಣೆಗೆ ಬಂಗಾರದ 'ಸ್ಪರ್ಮಟ' ಬರೀ ಬಂಗಾರವಷ್ಟೇ ಅಲ್ಲ ; ಅದರಲ್ಲಿ ವಿಶ್ವದ ಉಳಿದೆಲ್ಲ ಬೀಜಗಳ ಕಿಂಚಿತ್ ಅಂಶಗಳು ಆಗಲೇ ಸೇರಿಕೊಂಡಿವೆ. 'ಸ್ಪರ್ಮಟ'ವನ್ನು ಅನಂತವಾಗಿ ವಿಭಜಿಸಬಹುದು; ಅದಕ್ಕೆ ಮಿತಿಯಿಲ್ಲ. ಹಾಗೆ ವಿಭಜಿಸಿದರೂ ಪ್ರತಿಯೊಂದು ಸ್ಪರ್ಮಟ ಉಳಿದೆಲ್ಲ ಸ್ಪರ್ಮಟಗಳ ಕಿಂಚಿತ್ ಅಂಶವನ್ನಾದರೂ ಒಳಗೊಂಡಿರುತ್ತದೆ ; ಆದರೆ ಅದರಲ್ಲಿ ಉಳಿದೆಲ್ಲ ಸ್ಪರ್ಮಟಗಳ ಕಿಂಚಿತ್ ಅಂಶ ಒಂದೇ ಪ್ರಮಾಣದಲ್ಲಿರುವುದಿಲ್ಲ ಎಂದು ಅನಾಕ್ಸಗೊರಾಸ್ ಪ್ರತಿಪಾದಿಸುತ್ತಾನೆ.

ಎಂಪೆಡೋಕ್ಲಸ್‌ನ ಚಿಂತನೆಯಲ್ಲಿ ಒಂದು ದೋಷವಿದೆ. ಅವನ ಪ್ರಕಾರ, ವಾಯು, ಅಗ್ನಿ, ಅಪ್ ಮತ್ತು ಪೃಥ್ವಿ ಎಂಬ ನಾಲ್ಕು ಬಗೆಯ ಮಹಾ ಭೂತಗಳಿವೆ. ನಾಲ್ಕೂ ಸ್ವತಂತ್ರ. ಅವು ಪರಸ್ಪರ ಸಂಯೋಗ ಹೊಂದಿದಾಗ ವಸ್ತು ಉತ್ಪತ್ತಿಯಾಗುತ್ತದೆ. ಅದು ಹೊಸ ಗುಣಗಳನ್ನು ಹೊಂದಿರಬಹುದು. ಇದನ್ನು ಎಂಪೆಡೋಕ್ಲಸ್ ಸಮರ್ಪಕವಾಗಿ ವಿವರಿಸಿಲ್ಲ ಎಂದು ಅನಾಕ್ಸಗೊರಾಸ್ ಅಭಿಪ್ರಾಯ ಪಡುತ್ತಾನೆ.

ಏಕೆಂದರೆ ಹೊರಬಂದ ವಸ್ತುವಿನ ಹೊಸಗುಣ ನಾಲ್ಕು ಭೂತಗಳ ಗುಣಗಳಿಂದ ಭಿನ್ನವಾಗಿರಬಹುದು. ಅಂದರೆ ಚತುರ್ಭೂತಗಳಲ್ಲಿ ಆಗಲೇ ಇಲ್ಲದಿದ್ದ ಗುಣ ವಸ್ತುವಿನಲ್ಲಿ ಕಾಣಿಸಿಕೊಳ್ಳುತ್ತದೆ ಎಂದು ಹೇಳಿದಂತಾಗುತ್ತದೆ. ಇದು ಚತುರ್ಭೂತಗಳು ಅಂತಿಮ, ಸರಿಸಮ ಹಾಗೂ ಸ್ವತಂತ್ರ ಎಂಬ ಎಂಪೆಡೋಕ್ಲಸ್‌ನ ಸಿದ್ಧಾಂತಕ್ಕೇ ವಿರುದ್ಧವಾಗುತ್ತವೆ. ಎಂಪೆಡೋಕ್ಲಸ್‌ನ ಸಿದ್ಧಾಂತದ ಈ ದೋಷವನ್ನು ತನ್ನ 'ಸ್ಪರ್ಮಟ ಸಿದ್ಧಾಂತ' ಬಹಳ ಚೆನ್ನಾಗಿ ನಿವಾರಿಸುವುದಾಗಿ ಅನಾಕ್ಸಗೊರಾಸ್ ಭಾವಿಸುತ್ತಾನೆ. ಒಂದು ಸ್ಪರ್ಮಟ ವಿಶ್ವದ ಉಳಿದೆಲ್ಲ ಸ್ಪರ್ಮಟಗಳ ಕಿಂಚಿತ್ ಅಂಶವನ್ನು ಆಗಲೇ ತನ್ನಲ್ಲಿ ಹೊಂದಿರುವುದರಿಂದ ಹೊರಬರುವ ವಸ್ತುವಿನಲ್ಲಿ ಹೊಸಗುಣವೆಂಬುದು, ನಿಜಾಂಶದಲ್ಲಿ ಹೊಸಗುಣವಲ್ಲ.

ಅನಾಕ್ಸಗೊರಾಸ್‌ನ ಪ್ರಕಾರ, ವಿಶ್ವ ಸೃಷ್ಟಿಗೆ ಮುಂಚೆ ಅನಂತ ಬಗೆಯ ಸ್ಪರ್ಮಟ ಅಥವಾ ಬೀಜಗಳ ಮಿಶ್ರಿತದ್ರಾಶಿಯಾಗಿತ್ತು. ಈ ರಾಶಿಯಿಂದ ಬೀಜಗಳು ಪರಸ್ಪರ ಬೇರ್ಪಟ್ಟಾಗ, ವಿಶ್ವ ಅಸ್ತಿತ್ವಕ್ಕೆ ಬರತೊಡಗಿತು. ಈ ಕ್ರಿಯೆಯಲ್ಲಿ, ಒಂದೇ ತೆರನಾದ ಬೀಜಗಳು ಒಂದೆಡೆ ಸೇರಿದಾಗ ಒಂದು ವಸ್ತುವಾಗುತ್ತದೆ. ಉದಾಹರಣೆಗೆ ರಾಶಿಯಲ್ಲಿ ಎಲ್ಲೆಲ್ಲೊ ಇರುವ ಬಂಗಾರದ ಸ್ಪರ್ಮಟಗಳು ಕ್ರಮೇಣ ಇದೇ ರಾಶಿಯಿಂದ ಬೇರ್ಪಟ್ಟಾಗ, ಬಂಗಾರ ವಸ್ತು ಹೊರಬರುವುದು. ಆದರೆ ಅದು ಪರಿಶುದ್ಧ ಬಂಗಾರ ವಸ್ತುವಲ್ಲ. ಪರಿಶುದ್ಧವಾದ ಸ್ಪರ್ಮಟ ಎಂಬುದೇ ಇಲ್ಲ. ಬಂಗಾರ ವಸ್ತು ವಿಶ್ವದ ಉಳಿದೆಲ್ಲ ವಸ್ತುಗಳ ಕಿಂಚಿತ್ ಅಂಶವನ್ನು ಹೊಂದಿರುತ್ತದೆ.

ಈಗ ಅನಂತಬಗೆಯ ಸ್ಪರ್ಮಟ ಅಥವಾ ಬೀಜಗಳ ರಾಶಿ ಏಕೆ ಪ್ರತ್ಯೇಕಗೊಳ್ಳುತ್ತದೆ ಮತ್ತು ಹೇಗೆ ಎಂಬ ಪ್ರಶ್ನೆ ಉದ್ಭವಿಸುವುದು. ಚತುರ್ಭೂತಗಳ ಸಂಯೋಗ–ವಿಯೋಗಗಳಿಗೆ 'ಪ್ರೇಮ' ಮತ್ತು 'ದ್ವೇಷ'ಗಳೆಂಬ ಶಕ್ತಿಗಳೇ ಕಾರಣ ಎಂಬ ಎಂಪೆಡೋಕ್ಲಸ್‌ನ ಪ್ರತಿಪಾದನೆಯನ್ನು ಅನಾಕ್ಸಗೊರಾಸ್ ಎಳ್ಳಷ್ಟೂ ಒಪ್ಪುವುದಿಲ್ಲ. ಅವನ ಪ್ರಕಾರ, ಅಂಥ ಕಲ್ಪನೆ ಬುದ್ಧಿ (Reason)ಗೆ ಅನುಸಾರವಾದುದಲ್ಲ ; ಅದು ಕೇವಲ ಕಾಲ್ಪನಿಕ. ವಿಶ್ವದಲ್ಲಿಯ ಚಲನೆ, ಸಂಯೋಗ, ವಿಯೋಗಗಳು ಯಾವುದೋ ಕುರುಡು ಶಕ್ತಿಗಳಿಂದ ಆಗುತ್ತವೆ ಎಂದು ಹೇಳುವುದು ಅಸಮಂಜಸ. ವಿಶ್ವವನ್ನು ಗಮನವಿಟ್ಟು ವೀಕ್ಷಿಸಿದಾಗ ಅಲ್ಲಿ ಒಂದು ಕ್ರಮ, ಉದ್ದೇಶ ಇರುವುದು ಕಂಡುಬರುತ್ತದೆ. ವಿಶ್ವದ ಪ್ರತಿಯೊಂದು ವಸ್ತುವಿಗೂ ತನ್ನದೇ ಆದ ಗುರಿಯಿದೆ. ಅದನ್ನು ಮುಟ್ಟಲು ಅದು ಪ್ರಯತ್ನಪೂರ್ವಕವಾಗಿ ಶ್ರಮಿಸುತ್ತದೆ. ಅದುದರಿಂದ ಈ ವಿಶ್ವದಲ್ಲಿನ ಚಲನೆ, ಹಾಗೂ ಸ್ಪರ್ಮಟಗಳ ಸಂಯೋಗ ವಿಯೋಗಗಳಿಗೆ ಚೇತನ ತತ್ವವೇ ಕಾರಣವಾಗಿರಬೇಕು. ಅದನ್ನು ಅನಾಕ್ಸಗೊರಾಸ್ 'ನೌಸ್' (ಚೇತನ ತತ್ವ) ಎಂದು ಕರೆಯುತ್ತಾನೆ. ಹೀಗೆ ಅನಾಕ್ಸಗೊರಾಸ್‌ನ ಚಿಂತನೆಯಲ್ಲಿ ಚೇತನ ತತ್ವವಾದ 'ನೌಸ್' ಸ್ಪರ್ಮಟಗಳ ಪ್ರಥಮ ಚಲನೆಯ ಹಾಗೂ ವಿಶ್ವದ ಸೃಷ್ಟಿಯ ಉದ್ದೇಶದ ಮೂಲಕಾರಣವಾಗಿದೆ.

'ನೌಸ್' ಅತ್ಯಂತ ಪರಿಶುದ್ಧವಾದುದು. ಅದನ್ನು ಅನಾಕ್ಸಗೊರಾಸ್ ಪರಿಶುದ್ಧ

ಸ್ಪರ್ಮಟ ಎಂದು ಕರೆಯುತ್ತಾನೆ. ವಿಶ್ವದಲ್ಲಿ ಪರಿಶುದ್ಧವಾದವಾವುದೂ ಇಲ್ಲ ಎಂಬ ಅವನ ಪ್ರತಿಪಾದನೆಗೆ ಅಪವಾದವೇನೋ ಎಂಬಂತಿದೆ ಈ ನೌಸ್ ಸಂಕೀರ್ಣವಾದ Matterಗೆ ಹೋಲಿಸಿದಾಗ, ಅದು ಅತ್ಯಂತ ಸರಳ. ಅದು ಎಲ್ಲ ಚಲನೆಯ ಆಧಾರ. ಆದರೆ ತಾನು ಮಾತ್ರ ಸಂಪೂರ್ಣವಾಗಿ ಚಲನರಹಿತವಾದದ್ದು. ಅದು ಸ್ವತಂತ್ರ ತತ್ವ. ಅದರ ಅಸ್ತಿತ್ವ ಮತ್ಯಾವುದರ ಮೇಲೆಯೂ ಅವಲಂಬಿತವಾಗಿಲ್ಲ. ಅದು ಪೂರ್ಣವಾಗಿ ತಾನೇ, ಸ್ವತಃ ತನ್ನಿಂದಲೇ, ತನ್ನಲ್ಲಿಯೇ, ತನಗಾಗಿಯೇ ಇದೆ. ಅದರಲ್ಲಿ ಮಿತಿಗೊಳಿಸುವ 'Matter' ನ ಅಂಶ ಲವಲೇಶವೂ ಇಲ್ಲ. ಆದುದರಿಂದಲೇ ಅದು ಸರ್ವಶಕ್ತವಾಗಿದೆ.

ಅದರ ಪಾತ್ರ ಸ್ಪರ್ಮಟಗಳಲ್ಲಿ ಪ್ರಥಮ ಚಲನೆಯನ್ನಷ್ಟೇ ಉಂಟು ಮಾಡುವುದಾಗಿದೆ. ಅದು ವಿಶ್ವದಲ್ಲಿ ಒಂದು ಕ್ರಮವನ್ನು, ನಿಯಮವನ್ನು ಉದ್ದೇಶವನ್ನು ನೀಡುವ ತತ್ವವೇ ಹೊರತು, ವಿಶ್ವವನ್ನು ಸೃಜಿಸುವ ತತ್ವವಲ್ಲ. ಅದು Matterನ್ನು ಸೃಜಿಸುವುದಿಲ್ಲ; Matterನ ಜೊತೆಜೊತೆಯಲ್ಲಿಯೇ ಅನಾದಿಕಾಲದಿಂದ ಇದ್ದು 'Matter'ನ್ನು ವ್ಯವಸ್ಥೆಗೊಳಿಸುತ್ತದೆ. ಹೀಗೆ ಚೇತನ ತತ್ವವಾದ 'ನೌಸ್'ನ್ನು ತಾತ್ವಿಕ ಚಿಂತನೆಗೆ ನೀಡಿದ್ದೇ ಅನಾಕ್ಸಗೊರಾಸನ ಕೊಡುಗೆಯಾಗಿದೆ.

ಅನಾಕ್ಸಗೊರಾಸನ ತಾತ್ವಿಕ ಚಿಂತನೆ ಎಂಪೆಡೋಕ್ಲಸ್‌ನ ಚಿಂತನೆಗಿಂತ ಉತ್ತಮ ಮಟ್ಟದ್ದು. ಆದರೂ ಅದರಲ್ಲಿ ದೋಷಗಳು ಇಲ್ಲದಿಲ್ಲ. ಅದರ ಬಹುದೊಡ್ಡ ದೌರ್ಬಲ್ಯವೆಂದರೆ ಕೂಡಿಸಲಾಗದ 'ಕಡು ದ್ವೈತ'ದಲ್ಲಿ ಪರ್ಯವಸಾನವಾಗುವುದು. ಆಗಲೇ ತಿಳಿಸಿದಂತೆ, ಅವನ ಪ್ರಕಾರ Matter ಮತ್ತು Nous ಎರಡು ವಿಭಿನ್ನ ಸ್ವತಂತ್ರ ಅಂತಿಮ ಸತ್ಯಗಳು. ಒಂದರಿಂದ ಮತ್ತೊಂದು ಹೊರಬಂದಿಲ್ಲ. ಅವುಗಳ ನಡುವೆ ಪರಸ್ಪರ ಸಂಬಂಧ ಎಂಬುದಿಲ್ಲ. ಹೀಗಾಗಿ ಅವನ ಚಿಂತನೆ ಏನನ್ನೂ ವಿವರಿಸದೆ ಹಾಗೆ ಉಳಿಯುತ್ತದೆ.

ಅನಾಕ್ಸಗೊರಾಸ್‌ನ ಅನಂತರ, ಗ್ರೀಕ್ ತಾತ್ವಿಕ ಚಿಂತನೆಯಲ್ಲಿನ ವಿಶ್ವವನ್ನು ಕುರಿತ ಬಾಹ್ಯ ದೃಷ್ಟಿ ಮಾಯವಾಗಿ ಅಂತರ್ಮುಖವಾಗುತ್ತದೆ.

ತತ್ವಶಾಸ್ತ್ರದ ಆದಿ ಸಹಜಪ್ರವೃತ್ತಿಯಾದ ಕುತೂಹಲ ಮತ್ತು ಒಲವುಗಳಲ್ಲಿ ಇದ್ದರೂ ತತ್ವ ಕ್ರಿಯೆಯ ಇತಿಹಾಸ ಅಷ್ಟಕ್ಕೆ ಪರಿಸಮಾಪ್ತಿಯಾಗುವುದಿಲ್ಲ. ಅದು ವಸ್ತು ಸ್ವರೂಪದ ಧಾರಣ ಕ್ರಿಯೆ ಎನ್ನುವುದು ಭಾರತೀಯ ಸೃಷ್ಟಿ......... ತತ್ವಶಾಸ್ತ್ರ ಸಾಮಾನ್ಯ ಜ್ಞಾನವನ್ನೂ ಮನ್ನಿಸುವುದಾದರೂ ವಿಚಾರದಿಂದ ಉತ್ಕರ್ಷವಾದ ಜ್ಞಾನಕ್ಕೆ ಪ್ರಾಧಾನ್ಯ ನೀಡುತ್ತದೆ. ಇಂದ್ರಿಯಜನ್ಯ ಜ್ಞಾನದ ಅಥವಾ ಸಾಮಾನ್ಯ ಅನುಭವ ದಿಂದ ಉಂಟಾದ ಜ್ಞಾನದ ಅರ್ಥ, ಮೌಲ್ಯ, ವಿಮರ್ಶೆ ಮತ್ತು ಅವು ವಸ್ತುಗಳ ಸತ್-ಸ್ವರೂಪವನ್ನು ಎಷ್ಟರಮಟ್ಟಿಗೆ ನಮಗೆ ತೋರಿಸಿಕೊಡುತ್ತವೆ ಎನ್ನುವ ಎಲ್ಲ ರೀತಿಯ ಜಿಜ್ಞಾಸೆಗೆ ಒಳಗಾಗುವ ವಿಚಾರ ಕ್ರಮ ತತ್ವಶಾಸ್ತ್ರದ್ದು, ಕೇವಲ ಊಹೆ, ನಂಬಿಕೆಗಳ ಆಧಾರದ ಮೇಲೆ ನಿಂತ ಜ್ಞಾನ ಪ್ರಮಾಣಬದ್ಧವಾಗಿರದು. ಅನುಭವಕ್ಕೆ ತರ್ಕಕ್ಕೆ ಸರಿಯೆಂದು ತೋರಿದ ಅರಿವು ಸಾಮಾನ್ಯ ರೀತಿಯ ತಿಳಿವಳಿಕೆ. ಜ್ಞಾನ ವಿಜ್ಞಾನದ ಮಟ್ಟಕ್ಕೆ ಹೋದರೆ ಮಾತ್ರ ಅದು ತತ್ವಜ್ಞಾನವಾಗುತ್ತದೆ, ಶಾಸ್ತ್ರವಾಗುತ್ತದೆ. ಈ ರೀತಿಯ ತತ್ವಾಭಿಲಾಷೆಯಿಂದ ಪ್ರೇರಿತವಾದ ಜಿಜ್ಞಾಸೆ ಜೀವನವನ್ನು ವಿಶ್ಲೇಷಿಸುತ್ತದೆ. ಅದರ ಅರ್ಥ ಮೌಲ್ಯಗಳನ್ನು ನಿರ್ಧರಿಸುತ್ತದೆ. ಇದು ಕೇವಲ ಇಂದ್ರಿಯ ಜನ್ಯ ಜ್ಞಾನ ದಿಂದ ಸಾಧ್ಯವಾಗದು. ಇವು ಪ್ರಗಲ್ಭವಲ್ಲದ ಪ್ರಾಕೃತಿಕ ಪ್ರತಿಕ್ರಿಯೆಯ ಫಲವಾದರೆ, ತತ್ವಜ್ಞಾನ ಸತ್ಯ-ಅಸತ್ಯ ನಿತ್ಯ-ಅನಿತ್ಯ ಎನ್ನುವ ನಿರ್ಣಾಯಕ ಮಾನದಂಡಗಳಿಂದ ಪರಿಷ್ಕೃತವಾದ ಪ್ರಬುದ್ಧ ಜ್ಞಾನ ಸಂಸ್ಕರಣ.

(ಕನ್ನಡ ವಿಶ್ವಕೋಶ - ಸಂಪುಟ ಒಂಭತ್ತು - ಪುಟ ೮೨)

ಎಚ್. ಎಸ್. ಹರಿಶಂಕರ್

ಭಾಷಾಂತರದಲ್ಲಿ ಪರ್ಯಾಯ ಪದಗಳು

ಭಾಷಾಂತರ ಕಾರ್ಯದಲ್ಲಿ ತೊಡಗಿದ ಭಾಷಾಂತರಕಾರನಿಗೆ ಎದುರಾಗುವ ಸಮಸ್ಯೆಗಳು, ತೊಡಕುಗಳು ಅನೇಕ. ಮೂಲದ ಸ್ವಾರಸ್ಯವನ್ನು ಅನುವಾದದಲ್ಲಿ ತರುವುದು ಅನೇಕ ಸಂದರ್ಭಗಳಲ್ಲಿ ಆತನಿಗೆ ಸಾಧ್ಯವಾಗದೆ ಹೋಗಬಹುದು. ಈ ಸಮಸ್ಯೆಗಳು ನಾನಾ ಕಾರಣಗಳಿಂದಾಗಿ ಉದ್ಭವಿಸಬಹುದು. ಸಾಂಸ್ಕೃತಿಕವಾಗಿ, ಭಾಷಿಕವಾಗಿ ಇವು ಉಂಟಾಗಬಹುದು. ಭಾಷಾಂತರಕಾರ ಈ ಸಮಸ್ಯೆಗಳನ್ನು ಹಾಗೂ ಸವಾಲುಗಳನ್ನು ಎದುರಿಸಬೇಕಾಗುತ್ತದೆ.

ಭಾಷಾಂತರ ಕಾರ್ಯದಲ್ಲಿ ಎದುರಾಗುವ ಸಮಸ್ಯೆಗಳ ಪೈಕಿ ಪರ್ಯಾಯ ಪದಗಳ ಸಮಸ್ಯೆಯೂ ಒಂದೆಂದು ಹೇಳಬಹುದು. ಮೂಲದಲ್ಲಿ ಬಳಸಿದ ಪದಕ್ಕೆ ಸಂವಾದಿಯಾದ ಪದ ಉದ್ದಿಷ್ಟ ಭಾಷೆಯಲ್ಲಿ ದೊರೆಯುತ್ತದೆಯೆ ? ದೊರೆಯದಿದ್ದಲ್ಲಿ ಅದಕ್ಕೆ ಪರ್ಯಾಯ ಪದವನ್ನು ಬಳಸಬಹುದೆ ? ಪರ್ಯಾಯ ಪದವನ್ನು ಬಳಸಿದಾಗ ಅದು ಮೂಲದ ಅರ್ಥವನ್ನು ಪ್ರತಿಬಿಂಬಿಸುತ್ತದೆಯೆ ? ಇತ್ಯಾದಿ ಪ್ರಶ್ನೆಗಳು ಉದ್ಭವಿಸುತ್ತವೆ. ಈ ಬಗ್ಗೆ ಇಲ್ಲಿ ಸಂಕ್ಷೇಪವಾಗಿ ಹೇಳಲು ಪ್ರಯತ್ನಿಸಿದೆ.

ಒಂದು ಪದ ಅಥವಾ ಶಬ್ದ ಬೇರೆ ಬೇರೆ ಅರ್ಥ ಛಾಯೆಗಳಲ್ಲಿ ಬಳಕೆಯಾದಾಗ ಅಂಥ ಶಬ್ದ ಅಥವಾ ಪದವನ್ನು ಪರ್ಯಾಯ ಪದವೆಂದು ಕರೆಯುತ್ತೇವೆ. ಈ ಪರ್ಯಾಯ ಪದ, ಯಾವ ಭಾಷೆಯಲ್ಲೇ ಆಗಲಿ, ಸಮಾನಾರ್ಥಕ ಪದವಾಗುವುದಿಲ್ಲ. ಬಹು ಹೆಚ್ಚೆಂದರೆ ಆ ಅರ್ಥದ ಸಾಮೀಪ್ಯವನ್ನು ತಲುಪಬಹುದು. ಈ ಬಗ್ಗೆ ಒಂದೆರಡು ಉದಾಹರಣೆಗಳನ್ನು ಇಲ್ಲಿ ಗಮನಿಸಬಹುದು.

ಇಂಗ್ಲಿಷ್ ಭಾಷೆಯ ಬಗೆಗೆ ಹೇಳುವುದಾದರೆ ಇಂಗ್ಲೆಂಡನ್ನು ನಾರ್ಮನರು ವಶಪಡಿಸಿಕೊಳ್ಳುವುದಕ್ಕೆ ಮೊದಲು ಬೇಸಗೆ ಮತ್ತು ಚಳಿಗಾಲಗಳ ನಡುವೆ ಇದ್ದ ಕಾಲವನ್ನು ಆ ಭಾಷೆಯಲ್ಲಿ 'haerfest' ಎಂದು ಕರೆಯಲಾಗುತ್ತಿತ್ತು. ಆದರೆ ನಾರ್ಮನರ ಕಾಲದಲ್ಲಿ ಈ ಪದಕ್ಕೆ ಸಂವಾದಿಯಾಗಿ ಇದೇ ಕಾಲವನ್ನು ಸೂಚಿಸುವ 'autumn' ಎಂಬ ಫ್ರೆಂಚ್ ಪದ ಬಳಕೆಗೆ ಬಂದಿತು. ಬೇರೆ ಬೇರೆ ಋತುಮಾನಗಳನ್ನು ಕುರಿತು ಹೇಳುವಾಗ ಆಂಗ್ಲೊ-ಸ್ಯಾಕ್ಸನ್ ಪೂರ್ವಿಕರು ಬಳಸುತ್ತಿದ್ದ spring, summer ಮತ್ತು

winter ಪದಗಳನ್ನೇನೂ ಬದಲಾಯಿಸಲಿಲ್ಲ. ಆದರೆ 'haerfest' ಮತ್ತು 'autumn' ಪದಗಳು ಜೊತೆ ಜೊತೆಯಲ್ಲಿಯೇ ಬಳಕೆಗೆ ಬಂದವು. ಈ ಎರಡು ಪದಗಳ ಬಳಕೆಯಿಂದ ಒಮ್ಮೊಮ್ಮೆ ಮುಜುಗರ ಉಂಟಾಗುತ್ತಿತ್ತು. ಈ ಋತುಕಾಲ ಹಣ್ಣು ಮತ್ತು ಧಾನ್ಯಗಳು ಪಕ್ವವಾಗುವ ಕಾಲವನ್ನು ಸೂಚಿಸುತ್ತಿದ್ದುದರಿಂದಾಗಿ ಅಂತಿಮವಾಗಿ 'harvest' ಎಂಬ ರೂಪ ಬಳಕೆಗೆ ಬಂದಿತು.

ಹಾಗೆಯೇ ಮತ್ತೊಂದು ಇಂಗ್ಲಿಷ್ ಪದವನ್ನು ನೋಡಬಹುದು. ಇಂಗ್ಲಿಷಿನ body ಎಂಬ ಪದವನ್ನು ಫ್ರೆಂಚ್ ಭಾಷೆಯ corps ಎಂಬ ಶಬ್ದದೊಡನೆ ಹೋಲಿಸಬಹುದು. ಈ ಎರಡೂ ಭಾಷೆಗಳಲ್ಲಿ ಈ ಪದಗಳಿಗೆ ಸಮಾನಾರ್ಥಕವಿದೆ. ಫ್ರೆಂಚ್ ಭಾಷೆಯಲ್ಲಿನ ಈ ಪದವನ್ನೇ ಆಂಗ್ಲರು ತೆಗೆದುಕೊಂಡು corse ಅಥವಾ corpse ಎಂದು ಬಳಸತೊಡಗಿದರು. ಆಗ ಮೂಲಾರ್ಥ ಸಂಕುಚಿತವಾಯಿತು, ಅಷ್ಟೇ ಅಲ್ಲ ಆ ಅರ್ಥ ಮತ್ತಷ್ಟು ಸೀಮಿತಗೊಂಡು ಮನುಷ್ಯನ ಮೃತದೇಹವೆಂಬ ಅರ್ಥವನ್ನು ಪಡೆಯಿತು. ಇದರ ಜೊತೆಗೆ ಆಂಗ್ಲರು ಸತ್ತ ಪ್ರಾಣಿಗಳ ದೇಹಕ್ಕೆ carcase ಎಂಬ ಮತ್ತೊಂದು ಪದವನ್ನು ಸೃಷ್ಟಿಸಿಕೊಂಡರು. ಆದರೆ corps ಪದದ ಇತಿಹಾಸ ಇಷ್ಟಕ್ಕೆ ಮುಗಿಯಲಿಲ್ಲ. ಈ ಶಬ್ದ ಮತ್ತೊಮ್ಮೆ ಇಂಗ್ಲಿಷ್ ಶಬ್ದಕೋಶವನ್ನು ಹೊಕ್ಕಿತು. ಈ ಬಾರಿ ಇದಕ್ಕೆ "ಸೈನ್ಯದಳ"ವೆಂಬ ಅರ್ಥ ಪ್ರಾಪ್ತವಾಯಿತು.

ಇಂಗ್ಲೀಷಿನ ಮತ್ತೊಂದು ಸರಳ ಶಬ್ದ sad ಎಂಬುದನ್ನೇ ನೋಡೋಣ. ಈ ಪದದಲ್ಲಿ 'sorrow', 'gloom', 'tragedy', 'despair' ಮೊದಲಾದ ಅರ್ಥಗಳು ಅಡಗಿವೆ. ಆದರೆ ಇವೆಲ್ಲ ಸಮಾನಾರ್ಥಕ ಪದಗಳೆ ? ಖಂಡಿತಾ ಅಲ್ಲ. ಹಾಗೆಯೇ 'charity', 'friendship', 'affection', 'passion,' 'tenderness', 'devotion', 'amours', 'lust' ಈ ಎಲ್ಲ ಶಬ್ದಗಳೂ 'Love' ಎಂಬ ಶಬ್ದವನ್ನೇ ಗುರಿಯಾಗಿಟ್ಟುಕೊಂಡಿವೆ. ಇದರಿಂದ ಅರ್ಥವಾಗುವುದಿಷ್ಟೇ ; ಒಂದು ಭಾಷೆಯಲ್ಲಿ ಪ್ರತಿಯೊಂದು ಶಬ್ದಕ್ಕೂ ಮೂಲಭೂತವಾದ ಒಂದರ್ಥವಿದ್ದು ಅದನ್ನು ಅದೇ ಅರ್ಥದಲ್ಲಿ ಬೇರೊಂದು ಶಬ್ದದ ಮೂಲಕ ವಿವರಿಸಲು ಸಾಧ್ಯವಾಗದೆ ಇರುವುದು. ಕೇವಲ ಅಪ್ರಸಿದ್ಧ ಲೇಖಕರು ತಮ್ಮ ಬಡ ಆಲೋಚನೆಯನ್ನು ಹತ್ತಾರು ಪದಗಳಲ್ಲಿ ಅಡಗಿಸುವ ಸಲುವಾಗಿ ಪರ್ಯಾಯ ಪದಗಳ ಮೊರೆ ಹೋಗುತ್ತಾರೆ ಎಂದು ಆಸ್ಟಿನ್ ಕೆ. ಗ್ರೇ ಅಭಿಪ್ರಾಯಪಡುತ್ತಾರೆ.1 ಸಮರ್ಥ ಭಾಷಾಂತರಕಾರನಿಗೂ ಒಮ್ಮೊಮ್ಮೆ ಪರ್ಯಾಯ ಪದಗಳನ್ನು ಆಯ್ಕೆ ಮಾಡುವುದು ಕಷ್ಟವಾಗುತ್ತದೆ.

ಸಂಸ್ಕೃತ ಭಾಷೆಯಲ್ಲಿ ಕನ್ನಡ ಪದ 'ಹೆಂಗಸು' ಎಂಬುದಕ್ಕಿರುವ ಪರ್ಯಾಯ ಪದಗಳನ್ನು ನೋಡೋಣ. ಆ ಪದಗಳನ್ನು ಹೀಗೆ ಪಟ್ಟಿ ಮಾಡಬಹುದು. ಸ್ತ್ರೀ, ಯೋಷಿತ್, ಅಬಲಾ, ಯೋಷಾ, ನಾರೀ, ಸೀಮಂತಿನೀ, ವಧೂ, ಪ್ರತೀಪದರ್ಶಿನೀ, ವಾಮಾ, ವನಿತಾ ಮತ್ತು ಮಹಿಳಾ.2 ಆದರೆ ಈ ಎಲ್ಲ ಪದಗಳೂ 'ಹೆಂಗಸು' ಪದಕ್ಕೆ ಪರ್ಯಾಯ ಪದಗಳೆ ? ಮೇಲಿನ ಪದಗಳೆಲ್ಲ 'ಹೆಂಗಸು' ಎಂಬ ಅರ್ಥವನ್ನು ಕೊಟ್ಟರೂ

ಅವು ಒಂದಕ್ಕೊಂದು ಪರ್ಯಾಯ ಪದಗಳಲ್ಲ. ಇವುಗಳನ್ನು ಇಂಗ್ಲಿಷ್ ಅಥವಾ ಇತರ ಯಾವುದೇ ಐರೋಪ್ಯ ಭಾಷೆಗಳಿಗೆ ಹೇಗೆ ಭಾಷಾಂತರಿಸುವುದು ? ಇಂಥ ಕಡೆ ಪರ್ಯಾಯ ಪದಗಳು ಶಬ್ದಾನುವಾದದ ಚೌಕಟ್ಟಿಗೆ ಅಳವಡುವುದಿಲ್ಲ. ಹಾಗೆ ಭಾಷಾಂತರಿಸಲೇಬೇಕಾದಾಗ ಮೂಲಶಬ್ದವನ್ನೇ ಬಳಸಿಕೊಂಡು ಆ ಶಬ್ದದ ವಿವರಣೆಯನ್ನು ನೀಡಬೇಕಾಗುತ್ತದೆ.

ಥಾಮಸ್ ಗ್ರೇ ಕವಿಯ ಸುಪ್ರಸಿದ್ಧ ಕವನ 'Elegy Written in a Country Churchyard' ಕವನವನ್ನು ಈಗ ಪರಿಶೀಲಿಸಬಹುದು. ಈ ಕವನದಿಂದ ಎರಡು ಪದ್ಯಗಳನ್ನು ಇಲ್ಲಿ ಉದಾಹರಿಸಿದೆ.

"The curfew tolls the knell of parting day,
The lowing herd wind slowly o'er the lea,
The ploughman homeward plods his weary way,
And leaves the world to darkness and to me.

Now fades the glimmering landscape on the sight,
And all the air a solemn stillness holds,
Save where the beetle wheels his droning flight
And drowsy tinklings lull the distant folds."

ಈ ಮೇಲಿನ ಸಾಲುಗಳಲ್ಲಿ ಕವಿ ಬಹಳ ಜಾಣ್ಮೆಯಿಂದ ಪದಗಳನ್ನು ಬಳಸಿದ್ದಾನೆ. ಸನ್ನಿವೇಶ ಗಂಭೀರತೆಯಿಂದ ಕೂಡಿದೆ. ಮೊದಲ ಪದ್ಯದ ಕೊನೆಯ ಸಾಲು ಕವಿಗೆ ಉಂಟಾಗಿರುವ ಮನಃಕ್ಷೋಭೆಯನ್ನು ಬಹು ಸೊಗಸಾಗಿ ಚಿತ್ರಿಸುತ್ತದೆ. ಮೇಲಿನ ಸಾಲುಗಳ ಪದಗಳಿಗೆ ಪರ್ಯಾಯ ಪದಗಳನ್ನು ಬಳಸಿದರೆ ಮೂಲದ ಸೌಂದರ್ಯವೇ ಮಾಯವಾಗಿಬಿಡುತ್ತದೆ. ಇವೇ ಸಾಲುಗಳನ್ನು ಬೇರೊಬ್ಬ ಕವಿ ಬರೆದಿದ್ದರೆ ಬಹುಶಃ ಹೀಗೆ ಬರೆಯುತ್ತಿದ್ದನೇನೋ.[3]

"Funeral curfew clangs the Sun's demise,
The mooing kine o'er fields sweep tardily,
And home the worn-out yokel trudging hies,
Relinquishing the earth to mirk and me.

The misty view dissolves now on my gaze,
And all the atmosphere stern calm doth keep,

Except where yonder insect buzzing strays,
And somnolent janglings sootho the far-off sheep.

ಮೇಲಿನ ಉದಾಹರಣೆಯನ್ನು ಗಮನಿಸಿದಾಗ ಆಂತರಿಕ ಅನುವಾದವಾದ ಈ ಎರಡು ಪದ್ಯಗಳು ಮೂಲದ ಚಿತ್ರಣವನ್ನು ಒಹುಮಟ್ಟಿಗೆ ನೀಡುವುದಾದರೂ ಗ್ರೇ ಕವಿಯು ಬಳಸಿರುವ ಚಿತ್ತಾಕರ್ಷಕ ಶೈಲಿಯೊಡನೆ ಹೋಲಿಸಿದಾಗ ಇವು ಸಪ್ಪೆಯೆನಿಸುತ್ತವೆ. ಇಲ್ಲಿ ಬಳಸಲಾದ 'stern calm', 'funeral....clangs', 'somnolent janglings' ಮೊದಲಾದ ಪರ್ಯಾಯ ಪದಗಳು ಔಚಿತ್ಯವನ್ನು ಕಳೆದುಕೊಂಡಿವೆ.

ಈಗ ಇನ್ನೊಂದು ಉದಾಹರಣೆಯನ್ನು ನೋಡೋಣ. ಇಂಗ್ಲಿಷ್ ಭಾಷೆಯಲ್ಲಿ 'rich' ಮತ್ತು 'wealthy' ಎಂಬ ಎರಡು ಪದಗಳು ಬಳಕೆಯಲ್ಲಿವೆ. ಇವೆರಡು ಪದಗಳಿಗಿರುವ ಸೂಕ್ಷ್ಮ ವ್ಯತ್ಯಾಸವನ್ನು ನಾವು ಗಮನಿಸದಿದ್ದರೆ ಇವೆರಡೂ ಒಂದಕ್ಕೊಂದು ಪರ್ಯಾಯಗಳೆಂಬ ಭ್ರಮೆ ನಮಗುಂಟಾಗಬಹುದು. ನಮಗೆ ಗೊತ್ತಿಲ್ಲದೆಯೇ ಒಬ್ಬ ವ್ಯಕ್ತಿ 'rich' ಆಗಿರಬಹುದು, ಆದರೆ ನಮಗೆ ಗೊತ್ತಿಲ್ಲದೆಯೆ ಒಬ್ಬ ವ್ಯಕ್ತಿ 'wealthy' ಆಗಿರಲಾರ. ಚಾರ್ಲ್ಸ್ ಡಿಕೆನ್ಸ್ ತನ್ನ ಕಾದಂಬರಿಯಲ್ಲಿ ವ್ಯಕ್ತಿಯೊಬ್ಬನನ್ನು ಹೀಗೆ ವರ್ಣಿಸುತ್ತಾನೆ. Scrooge was *rich* and *miserly*. ಇದನ್ನು ಕುರಿತು ಆಸ್ಟಿನ್ ಕೆ. ಗ್ರೇ ಹೀಗೆ ಹೇಳುತ್ತಾರೆ: Here 'rich' seems almost an unneeded complement to 'miserly', as misers are usually held to be rich, but to say that 'Scrooge was *wealthy* and *miserly*' seems a contradiction in terms.[4]

'wealthy' ಪದವನ್ನು ಕೇವಲ ಐಶ್ವರ್ಯ ಸೂಚಕ ಶಬ್ದವನ್ನಾಗಿ ಬಳಸಬಹುದೇ ವಿನಾ 'rich' ಶಬ್ದದಂತೆ ಬೇರೆ ಬೇರೆ ಅರ್ಥ ಛಾಯೆಗಳಲ್ಲಿ ಬಳಸಲು ಸಾಧ್ಯವಾಗುವುದಿಲ್ಲ. ಉದಾ : 'rich men,' 'rich food' 'rich in ornamentation', ಇತ್ಯಾದಿ. ಈ ಪದವನ್ನು ಮತ್ತಷ್ಟು ವಿಶೇಷಣಗೊಳಿಸಬಹುದು. rich in lands, rich in suggestions, rich in possibilities ಇತ್ಯಾದಿ.

ಈ ಮೇಲಿನ ಉದಾಹರಣೆಗಳಿಂದ ಪರ್ಯಾಯ ಪದಗಳು ಪ್ರತಿಯೊಂದೂ ಒಂದೊಂದು ನಿರ್ದಿಷ್ಟ ಅರ್ಥವನ್ನು ಹೊಂದಿರುತ್ತದೆ ಹಾಗೂ ಬೇರೆ ಪದ ಈ ನಿರ್ದಿಷ್ಟ ಅರ್ಥವನ್ನು ಸೂಚಿಸಲಾರದೆಂಬ ಸಂಗತಿ ಇದರಿಂದ ಗೊತ್ತಾಗುತ್ತದೆ. ಪರ್ಯಾಯ ಪದಗಳು ಒಂದು ಭಾಷೆಯಲ್ಲಿ ಎರಡು ರೀತಿಯಿಂದ ಪ್ರವೇಶ ಪಡೆಯುತ್ತವೆ ಎಂದು ಗ್ರೇ ಹೇಳುತ್ತಾರೆ.[5]

i) Through the need for variety of expression that comes upon a people as soon as education has widned their outlook and at the same time sharpened their perceptive faculties.

ii) Through the incursion of foreign words into the vocabulary.

ಪರ್ಯಾಯ ಪದಗಳು ತಮ್ಮ ಅರ್ಥವನ್ನು ಅನೇಕ ಸಂದರ್ಭಗಳಲ್ಲಿ ವಿಸ್ತೃತಗೊಳಿಸಿಕೊಳ್ಳುವುದೂ ಉಂಟು. ಪ್ರತಿಯೊಂದು ಶಬ್ದಕ್ಕೂ ಆರಂಭದಲ್ಲಿ ಒಂದು ನಿರ್ದಿಷ್ಟ ಅರ್ಥವಿರುತ್ತದೆ. ಆದರೆ ಕಾಲಕಳೆದಂತೆ ಅವುಗಳ ಅರ್ಥ ಬದಲಾವಣೆಗೊಳ್ಳಬಹುದು ಇಲ್ಲವೆ ಮೂಲಾರ್ಥವನ್ನೇ ಕಳೆದುಕೊಳ್ಳಬಹುದು. ಆರಂಭ ಕಾಲದ ಇಂಗ್ಲಿಷ್ ಭಾಷೆಯಲ್ಲಿ 'dumb' man ಎಂಬುದಕ್ಕೆ 'stupid' man ಎಂಬರ್ಥವಿತ್ತು. ಆದರೆ ಕಾಲ ಕಳೆದಂತೆ ಈ ಪದ ಎರಡು ಅರ್ಥಗಳನ್ನು ತಳೆಯಿತು. ಮೊದಲನೆಯದಾಗಿ ಶಾಸನ ಸಭೆಗಳಲ್ಲಿ ಮೌನವಾಗಿ ಕುಳಿತು ಮಾತನಾಡದ ವ್ಯಕ್ತಿಗೆ 'dumb man' ಅಥವಾ 'uncomplaining man' ಎಂಬ ಹೆಸರು ಬಂದಿತು. ಇನ್ನೊಂದು ಅರ್ಥ, ಹುಟ್ಟುತ್ತಲೇ ಮಾತನಾಡುವ ಸಾಮರ್ಥ್ಯವನ್ನು ಕಳೆದುಕೊಂಡ ವ್ಯಕ್ತಿಯನ್ನೂ 'dumb man' ಎಂದು ಕರೆಯುತ್ತಿದ್ದರು. ಹೀಗಾಗಿ ಮೂಲಾರ್ಥ 'stupid' ಎನ್ನುವುದು ಕಣ್ಮರೆಯಾಯಿತು. ಇದು 'silent', 'quiet', 'calm', 'unruffled', 'indifferent', 'callous', ಇವೇ ಮೊದಲಾದ ಅರ್ಥಛಾಯೆಗಳನ್ನೊಳಗೊಂಡಿತು. ಹಾಗೆಯೇ ಕನ್ನಡದ ಶಬ್ದ 'ಅಮ್ಮ' ಎಂಬುದು ಹಳಗನ್ನಡದಲ್ಲಿ 'ಅಪ್ಪ' ಎಂಬರ್ಥವನ್ನು ಹೊಂದಿದ್ದು ಕ್ರಮೇಣ ಮೂಲಾರ್ಥವನ್ನು ಕಳೆದುಕೊಂಡಿತು.

ತಮ್ಮ ಮೂಲಭೂತ ಅರ್ಥವನ್ನು ಕೊಡದೆ ಸಾದೃಶ್ಯತೆಯಿಂದಾಗಿ ಅನೇಕ ಸಂದರ್ಭಗಳಲ್ಲಿ ಶಬ್ದಗಳು ಬೇರೆ ಅರ್ಥವನ್ನು ನೀಡುವುದುಂಟು. ಯಾವುದೇ ಜೀವಿಯ ಅಥವಾ ವಸ್ತುವಿನ ಕೇಂದ್ರ ಬಿಂದುವನ್ನು 'ಮಧ್ಯಭಾಗ'ವೆಂದು ಕರೆಯುವುದುಂಟು. ಕೆಲವರ ಅಭಿಪ್ರಾಯದಂತೆ ಮಾನವನ ಕೇಂದ್ರಬಿಂದು ಹೃದಯ. ಇಂಗ್ಲಿಷಿನಲ್ಲಿ ಹೃದಯಕ್ಕೆ ಸಂವಾದಿಯಾದ ಪದ 'heart'. ಹಾಗಾಗಿ In the *heart* of England ಎಂದು ಹೇಳಿದರೆ In the *middle* of England ಎಂದು ಅರ್ಥೈಸಬೇಕಾಗುತ್ತದೆ.

ಕೆಲವು ವೇಳೆ ಸಾಹಚರ್ಯದಿಂದಾಗಿ ಇಲ್ಲವೆ ಬೇರೆ ಪದಗಳ ಜೊತೆ ಸಂಬಂಧ ಹೊಂದುವುದರಿಂದಾಗಿ ಪದಗಳು ತಮ್ಮಲ್ಲಿಲ್ಲದ ಮೂಲಭೂತ ಅರ್ಥವನ್ನು ಪಡೆದುಕೊಳ್ಳುವುದುಂಟು. ಈ ಉದಾಹರಣೆಯನ್ನು ಗಮನಿಸಬಹುದು.

king wears a *crown* and sits upon a *throne* ಈ ಶಬ್ದಗಳನ್ನೇ ಹೀಗೆ ಬರೆಯಬಹುದು.

i) Loyalty to the *crown*
ii) Loyalty to the *throne*
ಆದ್ದರಿಂದ iii) Loyalty to the *king*, ಎಂದು ಅರ್ಥಮಾಡಬಹುದು.

ಒಟ್ಟಿನಲ್ಲಿ ಭಾಷಾಂತರ ಕಾರ್ಯದಲ್ಲಿ ತೊಡಗಿದಾಗ ಭಾಷಾಂತರಕಾರ ಪರ್ಯಾಯ ಪದಗಳನ್ನು ಬಹಳ ಎಚ್ಚರಿಕೆಯಿಂದ ಬಳಸಬೇಕು. ಮೂಲಾರ್ಥಕ್ಕೆ ಧಕ್ಕೆ ಬರದಂಥ ಪದಗಳನ್ನೇ ಆಯ್ದುಕೊಳ್ಳಬೇಕು. ಹಾಗೆ ಸಾಧ್ಯವಾಗದ ಕಡೆ ಮೂಲಪದವನ್ನೇ ಬಳಸಬಹುದು. ಹಾಗೆ ಬಳಸಿದಾಗ ಮೊದಲಬಾರಿ ಅದಕ್ಕೆ ವಿವರಣೆಯನ್ನು ಕೊಡುವುದು ಉಚಿತವಾಗುತ್ತದೆ.

ಅಡಿ ಟಿಪ್ಪಣಿಗಳು

1. A Dictionary of Synonyms : Austin K. Gray, ಪು. 2
2. ಅಮರಕೋಶ, ದ್ವಿತೀಯ ಕಾಂಡ, ಮನುಷ್ಯವರ್ಗ, ಶ್ಲೋ. 267, ಸಂ : ಲೂಯಿ ರೈಸ್.
3. A Dictionary of Synonyms : Austin K. Gray, ಪು. 4
4. - ಅದೇ - ಪು. 6
5. - ಅದೇ - ಪು. 8

ಪಿ. ಆರ್. ತಿಪ್ಪೇಸ್ವಾಮಿ

ಕಲಾಕೋವಿದ ಹರ್ತಿಕೋಟೆ ಸುಬ್ಬಣ್ಣ

3-4 ದಶಕಗಳ ಹಿಂದೆ ಚಿತ್ರದುರ್ಗ ಜಿಲ್ಲೆಯಲ್ಲಿ ರಂಗಭೂಮಿಯ ಚಟುವಟಿಕೆಗಳಲ್ಲಿ ತಾನು ತೊಡಗಿರುವದಲ್ಲದೆ ಇತರರನ್ನು ತೊಡಗಿಸಿ ಮೇಳದಲ್ಲಿ ಅವಶ್ಯ ಬಿದ್ದ ಪಾತ್ರವನ್ನು ನಿರ್ವಹಿಸುವುದಲ್ಲದೆ ಬೇಕಾದ ಸಮಯಕ್ಕೆ ತಬಲವನ್ನೋ ಹಾರ್ಮೋನಿಯಮ್ಮನ್ನೋ ನುಡಿಸಿ, ಕಲಾವಿದರನ್ನು ಗುರ್ತಿಸಿ, ಅವರಲ್ಲಿದ್ದ ಗಂಧರ್ವಾಂಶವನ್ನು ಪ್ರದರ್ಶಿಸಲು ಸಹಾಯಮಾಡಿ, ಬೇಕಾದ ತರಬೇತಿಯನ್ನು ನೀಡಿ ರಂಗನಾಟಕಗಳಿಗೊಂದು ಸ್ಥಾನವನ್ನು ಕಲ್ಪಿಸಿಕೊಟ್ಟ ವ್ಯಕ್ತಿ—ಹರ್ತಿಕೋಟೆ ಸುಬ್ಬಣ್ಣ. ಚಿತ್ರದುರ್ಗ ಜಿಲ್ಲೆಯ ಜನಕ್ಕೆ ನಾಟಕವೆಂದರೆ ನಾಲಗೆಯಮೇಲೆ ನಲಿದಾಡುವ ಹೆಸರೆಂದರೆ ಆಗ ದಿ|| ಸುಬ್ಬಣ್ಣನದು. ಆ ತಲೆಮಾರಿನವರ ನುಡಿಯಲ್ಲಿ ಈ ಹೆಸರು ಇನ್ನೂ ಜೀವಂತವಿದೆ.

ಸುಬ್ಬಣ್ಣನ ಜನನ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಹರ್ತಿಕೋಟೆ ಗ್ರಾಮದಲ್ಲಿ ಕ್ರಿ.ಶ. 1905ರ ಮೇ 24 ರಂದು. ತಂದೆತಾಯಿ ಪುರೋಹಿತರ ಮನೆತನಕ್ಕೆ ಸೇರಿದ ಅನಂತಪ್ಪ ಮತ್ತು ಶೇಷಮ್ಮ. ಸುಬ್ಬಣ್ಣ ಶಿಶುವಾಗಿದ್ದಾಗಲೇ ಒಂದು ವಿಚಿತ್ರ ಘಟನೆ ನಡೆಯಿತು. ತಾಯಿ ಶೇಷಮ್ಮ ನೀರಿಗೆ ಹೋಗಿ ಬರುವುದು ದಿನದ ಕಾರ್ಯಗಳಲ್ಲೊಂದು. ಒಮ್ಮೆ ಹೀಗೆ ನೀರಿಗೆ ಹೋಗಿಬರುವುದರಲ್ಲಿ ತೊಟ್ಟಿಲಲ್ಲಿ ಆಡುತ್ತಿದ್ದ ಮಗುವಿನ ಮೇಲೆ ಹೆಡೆಬಿಟ್ಟು ಹಾಡುತ್ತಿದ್ದ ನಾಗರಹಾವು ಕಾಣಿಸಿತು. ಅವಾಕ್ಕಾದ ತಾಯಿ ಅತ್ತೆಮ್ಮನನ್ನು ಕೂಗಿಕೊಂಡಳು. ಇಬ್ಬರೂ ಸೇರಿ ನೆರೆಹೊರೆಯವರನ್ನು ಸೇರಿಸಿದರು. ಆ ಜನತೆ ಹಾವನ್ನು ಹೊಡೆದುಹಾಕಿದರು. ಸೇರಿದ ಜನದಲ್ಲಿ ಕೆಲವರು ಶುಭಶಕುನವೆಂದರೆ ಕೆಲವರು ಅಯ್ಯೋ ವಿಷಸರ್ಪ; ಸಮಯ ಒಳ್ಳೆಯದು, ಕೂಸಿಗೆ ಏನೂ ಆಗಲಿಲ್ಲ ಎಂದು ಕರುಣೆಯ ಮಾತುಗಳನ್ನಾಡಿದರು. ಕೂಡದ ಜನ ಆಡಿದ ಮಾತಿಗೆ ಇತಿಮಿತಿಯ-ಲೆಕ್ಕವೇ ಎಲ್ಲರ ಅದರಲ್ಲೂ ಹಿರಿಯರ ಮನಸ್ಸಿಗೆ ಸರ್ಪಸಂಪರ್ಕ ಆದ ಮಗುವಿಗೆ ಸುಬ್ರಹ್ಮಣ್ಯ-ಸುಬ್ಬರಾಯ- ಎಂಬ ಹೆಸರೇ ಯೋಗ್ಯ ಎಂಬ ಸಿದ್ಧಾಂತ ಮೂಡಿತು. ಹಿರಿಯರ ಆಶೆಯ ಹೆಸರೇ ಸ್ಥಿರವಾಯಿತು. ಸುಬ್ಬಣ್ಣನ ಅನಂತರ ಆತನ ತಂದೆತಾಯಂದಿರಿಗೆ ನಾಲ್ಕು ಹೆಣ್ಣು ಮತ್ತು ಎರಡು ಗಂಡು ಮಕ್ಕಳು ಜನಿಸಿದರು.

ಸುಬ್ಬಣ್ಣನ ತಂದೆ ಅನಂತಪ್ಪನವರು ಸುತ್ತಲ ಹತ್ತಾರು ಗ್ರಾಮಗಳಿಗೆ ಪುರೋಹಿತ ರಾಗಿದ್ದರು. ಜಮೀನು–ಕೇವಲ ಎರಡು ಎಕರೆ; ಅದು ಕೆರೆತುಂಬಿದಾಗ ಬೆಳೆಯುವ ಭೂಮಿ. ಈ ಬಗೆಯ ಅಲ್ಪ ಆದಾಯದಲ್ಲೇ ಜೀವನ ಗಾಡಿ ನಡೆಯುತ್ತಿತ್ತು– ಆ ಬಡಕುಟುಂಬಕ್ಕೆ. ಅನಂತಪ್ಪನವರು ಆ ಪರಿಸರದಲ್ಲೂ ಸಂಗೀತಕಲೆಯ ಸೇವಕರಾಗಿದ್ದರು; ಪೌರೋಹಿತ್ಯಕ್ಕಿಂತ ಕಲಾರಾಧನೆಯಲ್ಲೇ ಹೆಚ್ಚು ಕಾಲವನ್ನು ಕಳೆಯುತ್ತಿದ್ದರು. ಹರ್ತಿ, ರತ್ನಗಿರಿ, ಪಾವಗಡ, ನಿಡುಗಲ್ಲು, ಶಿರಾ– ಈ ಎಲ್ಲ ಸಂಸ್ಥಾನಗಳಲ್ಲೂ ಯಕ್ಷಗಾನ (ಮೂಡಲಪಾಯ) ನಾಟಕಗಳು ನಡೆಯುತ್ತಿದ್ದು ಹರ್ತಿಸಂಸ್ಥಾನವು ತನ್ನ ವಿಶಿಷ್ಟ ಪ್ರತಿಭಾನ್ವಿತ ಕಲಾವಿದರಿಂದ ವಿಶೇಷ ಪ್ರಸಿದ್ಧಿಯನ್ನು ಪಡೆದಿತ್ತು. ಅಂತಹ ಕಲಾವಿದ ರಲ್ಲಿ ಅನಂತಪ್ಪನವರೂ ಒಬ್ಬರು.

ತಂದೆಯ ನೆರಳಿನಲ್ಲಿ ಸುಬ್ಬಣ್ಣನಿಗೆ ಸಂಗೀತದ ಗೀಳು ಬಾಲ್ಯದಿಂದಲೇ ಆವರಿಸಿ ಕೊಂಡಿತು. ಮನೆಯಲ್ಲಿನ ಪರಿಸರ, ಶಾಲೆಗೆ ಸೇರುವ ಮೊದಲೇ ದೇವರನಾಮಗಳು ಕಂಠಗತವಾಗುವಂತೆ ಸುಬ್ಬಣ್ಣನಿಗೆ ಸಹಾಯವೆಸಗಿತು. ತಂದೆಯಿಂದಲೇ ಕ್ರಮ ಶಿಕ್ಷಣ. ಪಾಠ ಪ್ರವಚನ ಇತ್ಯಾದಿಗಳು ಸುಬ್ಬನಿಗೆ ದೊರಕಿದವು. ಶಾಲೆಯಲ್ಲಿ ಶ್ರೀ ವೆಂಕಟ ರಾಮಯ್ಯ ಹಾಗೂ ಶ್ರೀ ಶಾಮಣ್ಣ ಬಾಲಕ ಸುಬ್ಬಣ್ಣನಿಗೆ ಇನ್ನಷ್ಟು ಪ್ರೋತ್ಸಾಹ ಕೊಟ್ಟುದಲ್ಲದೆ ಆತ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತಮ ರೀತಿಯಲ್ಲಿ ಪಾಸಾದು ದನ್ನು ಕಂಡು ಆನಂದಪಟ್ಟು ತಮ್ಮ ಸಹೋಪಾಧ್ಯಾಯನನ್ನಾಗಿ ಮಾಡಿಕೊಂಡರು. ವಿದ್ಯಾರ್ಥಿ ಸುಬ್ಬಣ್ಣ ಓದಿದ ಶಾಲೆಯಲ್ಲೇ ಸ್ಕೂಲುಮೇಷ್ಟರನಾದ, ವೃತ್ತಿ ದೊರಕಿದರೂ ಸುಬ್ಬಣ್ಣನ ಮನೋಗತ ಆಶೆ ಅದರಲ್ಲಿ ಸ್ಥಿರವಾಗಿ ಅವನನ್ನು ನಿಲ್ಲಗೊಡಲಿಲ್ಲ; ಸಂಗೀತ ತಬಲಗಳತ್ತ ಚಿತ್ತ ಒಲಿದು ಆ ವೃತ್ತಿಗೆ ಶರಣು ಹೊಡೆದು ಶಾಲೆಯಿಂದ ಹೊರಹೊರಟ. ಅನಂತಪ್ಪ ಮೇಷ್ಟರಿಗೆ ಇನ್ನೇನು ಮಗನೂ ಜೀವನನೌಕೆಯನ್ನು ಸಾಗಿಸುವಲ್ಲಿ ಸಹಾಯ ಮಾಡುತ್ತಾನಲ್ಲ ಎಂದು ಆಶೆಯ ಕಿರಣ ಮೂಡಿತ್ತು; ಆದರೆ ಬೆಂಬಳಿಯಲ್ಲೇ ದಟ್ಟ ಮೋಡವೊಂದು ಬಂದು ಆಶಾಕಿರಣವನ್ನು ಆಚ್ಛಾದಿಸಿಬಿಟ್ಟಿತು. ಸುಬ್ಬಣ್ಣ ನೌಕರಿ ಬಿಟ್ಟ ಕೆಲಸಮಯದಲ್ಲೇ ಅವರು ವಿಧಿವಶರಾದರು. ಸುಬ್ಬಣ್ಣನಿಗೆ ಹೆಗಲಮೇಲೆ ಸಂಸಾರದ ನೊಗಬೂದಿತು. ಹೀಗಾಗುತ್ತದೆಯೆಂದರೆ ಸುಬ್ಬಣ್ಣ, ಪ್ರಾಯಃ ನೌಕರಿಯನ್ನು ಬಿಡು ತ್ತಿದ್ದಿಲ್ಲವೇನೋ; ಕಲಾವಿದರಿಗೆ ಕಳೆದುಹೋದ ಮೇಲೆಯೇ ಎಚ್ಚರ, ಸಾಮಾನ್ಯವಾಗಿ ಬುದ್ಧಿ ಬರುವುದು; ಲೋಕಕ್ಕೆ ಮನುಷ್ಯ ಸತ್ತಮೇಲೆಯೇ ಅವನ ದೊಡ್ಡತನ–ಶ್ರೇಷ್ಠ ತನ–ಇತ್ಯಾದಿಗಳ ಅರಿವು ಒಡಮೂಡಿ ನಿಲ್ಲುವುದು.

ಹಿರಿಯೂರಲ್ಲಿ ಹರಿಕಥೆ, ಭಜನೆ, ಸಂಗೀತಕಚೇರಿ ಮುಂತಾಗಿ ಕಲಾತ್ಮಕ ಕಾರ್ಯ ಕಲಾಪಗಳು ವಿಶೇಷ. ಇಂತಹ ಸಂದರ್ಭಗಳಲ್ಲೇ ಸುಬ್ಬಣ್ಣನಿಗೆ ಹರಿಕಥಾವಿದ್ವಾನ್ ಹಿಂದೂಪುರ ಕೃಷ್ಣಾಚಾರ್ಯ ಹಾಗೂ ತಂಜಾವೂರಿನ ಸಂಗೀತ ವಿದ್ವಾನ್ ಈಶ್ವರ ಭಾಗ ವತರ ಸಂಪರ್ಕಗಳು ಉಂಟಾದವು. ಆ ಹಿರಿಯರು ಸುಬ್ಬಣ್ಣನಲ್ಲಿ ಸುಪ್ತವಾಗಿದ್ದ ಕಲೆಯು ವರ್ಧಿಸುವುದಕ್ಕೆ ಕಾರಣರಾದರು: ಅವರೊಂದಿಗೆ ಪಕ್ಕವಾದ್ಯ ನುಡಿಸುವುದ

ರಿಂದ ಸ್ವಲ್ಪ ಹಣವೂ ದೊರೆಯಿತು. ಕೃಷ್ಣಾಚಾರ್ಯರಿಂದ ತಬಲದ ಕ್ರಮಶಿಕ್ಷಣ ಪ್ರಾಪ್ತವಾದರೆ ಈಶ್ವರ ಭಾಗವತರಿಂದ ಗಾತ್ರಸಂಗೀತದ ಅಧ್ಯಯನದಲ್ಲಿ ಕ್ರಮಶಿಕ್ಷಣ ದೊರೆಯಿತು. ವರ್ಣಗಳ, ಕೀರ್ತನಗಳ ಅಭ್ಯಾಸ ಆದುದಲ್ಲದೆ ಹಾರ್ಮೋನಿಯಂ ಬಾರಿಸುವುದೂ ಕರಗತವಾಯಿತು. ಈ ಸಂದರ್ಭದಲ್ಲಿ ದಕ್ಷಿಣಪ್ರಾಂತಗಳಲ್ಲಿ ಎರಡು ವರ್ಷ ವಾಸವಾಯಿತು. ತಾಯಿಯ ಕರೆಗೆ ಓಗೊಟ್ಟು ಸ್ವಗ್ರಾಮಕ್ಕೆ ವಾಪಸ್ಸು ಬಂದನು ಸುಬ್ಬಣ್ಣ.

ತಬಲ, ಹಾರ್ಮೋನಿಯಂ, ಗಾತ್ರಸಂಗೀತಗಳ ಅಧ್ಯಯನಗಳಲ್ಲಿಯ ನೈಪುಣ್ಯ, ಸುಬ್ಬಣ್ಣನನ್ನು ಸುಮ್ಮನೆ ಕೂಡಲು ಬಿಡಲಿಲ್ಲ. ತುರುವನೂರಿನಲ್ಲಿನ ಜನತೆ ನಾಟಕ ಕಲಿಸಲು ಆಹ್ವಾನಿಸಿದಾಗ ಒಪ್ಪಿಕೊಂಡು ಅಲ್ಲಿಗೆ ಹೋದ. 'ಗುಲೇಬಕಾವಲಿ' 'ಸದಾರಮೆ' 'ಪಾಂಡವವಿಜಯ' ಇತ್ಯಾದಿ ನಾಟಕಗಳನ್ನು ಕಲಿಸಿ ಆಡಿಸಿ ವಿಶೇಷ ಯಶಸ್ಸನ್ನು ಗಳಿಸಿದ. ಇದೇ ಸಮಯಕ್ಕೆ ಹಿರಿಯೂರಿಗೆ ಅಗಳಿ ತಿಪ್ಪಯ್ಯನವರ ನಾಟಕ ಕಂಪನಿ ಆಗಮಿಸಿತು. ತಿಪ್ಪಯ್ಯನವರಿಂದ ಸುಬ್ಬಣ್ಣನಿಗೆ ಆಹ್ವಾನ. ಕಂಪನಿಗೆ ಸುಬ್ಬಣ್ಣನ ಆಗಮನ. ಕಲಾ ಚಾತುರ್ಯ, ಪಾಂಡಿತ್ಯ, ತಿಪ್ಪಯ್ಯನವರ ಮನಸ್ಸನ್ನು ತೃಪ್ತಿಪಡಿಸಿತು. ತಿಪ್ಪಯ್ಯನವರಿಗಾದರೂ ತಮ್ಮ ಕಂಪನಿಯನ್ನು ಆಗ ಅತ್ಯಂತ ಪ್ರಸಿದ್ಧ ಕಂಪನಿಗಳಾದ ಗುಬ್ಬಿಕಂಪನಿ, ಶೀತು ಕಂಪನಿ—ಇತ್ಯಾದಿಗಳ ಮಟ್ಟಕ್ಕೆ ತರಬೇಕೆಂಬ ಅಭಿಲಾಷೆ. ಅದಕ್ಕಾಗಿ ಒಳ್ಳೊಳ್ಳೆಯ ನಟರನ್ನು ಕರೆಯಿಸುವ ಹಂಬಲ. ಈ ಆಕಾಂಕ್ಷೆ, ನುರಿತ ಕಲಾವಿದರಾದ ಚಿನ್ನಗದ ಮೂರ್ತಿರಾಯರು, ಆನೇಕಲ್ಲ ಶೀನಪ್ಪ, ಮುನಿಸ್ವಾಮಿ, ರಂಗಸ್ವಾಮಿ, ಲಕ್ಷ್ಮೀ ನಾರಾಯಣರಾಯರು, ಕಲಾಪಿಲ್ಲಿ, ಸ್ತ್ರೀಪಾತ್ರಧಾರಿಗಳಾದ ನಾಗೇಶ, ಕೃಷ್ಣರಾಯ, ಕಿಪ್ಪಡಭೀಮ ಮುಂತಾದವರು ಒಂದೆಡೆ ಸೇರುವುದಕ್ಕೆ ಕಾರಣವಾಯಿತು. ಪ್ರತಿಭಾವಂತರ ಸ್ನೇಹ ದರ್ಶನ ಇವುಗಳಿಂದ ಪ್ರಗತಿ ತಂತಾನೆ ಆಗುತ್ತದಂತೆ, ಪ್ರತಿಭಾವಂತನಾದ ಸುಬ್ಬಣ್ಣನಿಗೆ ಕಲೆಯ ಅಭಿವೃದ್ಧಿ ಅಯಾಚಿತವಾಗಿ ಮೈಗೂಡಿತು. 'ಗುಲೇಬಕಾವಲಿ' (ಮುಂದಾರೋಜ್ವಲೆ) 'ಸದಾರಮೆ' 'ಕಾಳಿದಾಸ' 'ಸುಭದ್ರಾಪರಿಣಯ' 'ಪಾಂಡವ ವಿಜಯ' 'ಹರಿಶ್ಚಂದ್ರ' 'ಪ್ರಭಾಮಣಿ ವಿಜಯ' 'ಲಂಕಾದಹನ' 'ಸಂಪೂರ್ಣ ರಾಮಾಯಣ' ನಾಟಕಗಳ ಪ್ರದರ್ಶನಗಳು ಸುಬ್ಬಣ್ಣನಿಗೆ ಹೊಸ ಹೊಸ ಮಟ್ಟುಗಳ, ಕಂದವೃತ್ತಗಳ ಸೀಸಪದ್ಯಗಳ, ಪರಿಚಯಮಾಡಿಸುವವರ ಜೊತೆಗೆ ಸ್ತ್ರೀ ಪಾತ್ರಧಾರಿ ವಾಸುವಿನ ಸ್ನೇಹವನ್ನೂ ಮಾಡಿಸಿದವು. ಅಷ್ಟರಲ್ಲಿ ಇವರ ಕಂಪನಿ ಆರ್ಥಿಕ ಮುಗ್ಗಟ್ಟಿನಿಂದ ಮುಚ್ಚಿ ಹೋಯಿತು.

ಸುಬ್ಬಣ್ಣ ಹಾಗೂ ವಾಸು ಇಬ್ಬರೂ ಕಂಪನಿ ಮುಚ್ಚಿದುದರಿಂದ ತುರುವನೂರಿಗೆ ಬಂದು ನಿಂತರು. ಅಲ್ಲಿನ ಜನ ಇದು ತಮ್ಮ ಪುಣ್ಯವೆಂದೇ ಭಾವಿಸಿದರು. ತುರುವನೂರಿನ ಕಲಾಪ್ರೇಮಿಗಳು ಈ ಇಬ್ಬರನ್ನು ಕೂಡಿಕೊಂಡು ಒಂದು ನಾಟಕ ಸಂಸ್ಥೆಯನ್ನು ಕಟ್ಟಿದರು. ಅವರಲ್ಲಿ ರಾಘವರೆಡ್ಡಿ ಉತ್ತಮ ಸ್ತ್ರೀ ಪಾತ್ರಧಾರಿಯಾಗಿದ್ದ. ಕಂಪನಿ ಕಟ್ಟಿದರೆಂಬ ಸುದ್ದಿ ತಿಪ್ಪಯ್ಯನಿಗೆ ತಿಳಿದಕೂಡಲೆ ಅದನ್ನು ಮುರಿಯುವ ಮತ್ತು

ತನ್ನ ಕಂಪನಿ ನಟರನ್ನು ಪುನಃ ಕಂಪನಿಗೆ ತರುವ ಆಶೆಮರುಕಳಿಸಿ ಅದರ ಹೊಂಚಿನಲ್ಲಿ ನಿರತನಾದ. ಅಗಳಿ ತಿಪ್ಪಯ್ಯ ಅತ್ಯಂತ ಉಪಾಯಾಂತರಿ. ಉಪಾಯದಿಂದ ಕಂಪನಿಯನ್ನು ಮುರಿದ. ಮತ್ತೆ ಸುಬ್ಬಣ್ಣ ಹಾಗೂ ವಾಸು ಅವರು ತನ್ನ ಕಂಪನಿಗೆ ಪುನಃ ಸೇರುವಂತೆ ಮಾಡಿದ. ಈ ಸಮಯಕ್ಕೆ ಕಂಪನಿಯಲ್ಲಿ ಆಂಜನೇಯ ಪಾತ್ರದಲ್ಲಿ ಪ್ರಸಿದ್ಧಿಯನ್ನು ಪಡೆದ ಮಂಜುನಾಥಯ್ಯ, ಒರ್ಫ್ಯೂ ಲಕ್ಷ್ಮಣರಾವ್, ಸುಂದರಮ್ಮ ಆಕೆಯ ತಮ್ಮ ಪಾಪಣ್ಣ (ಬಿ. ಜಯಮ್ಮನವರ ಮಾವ) ಮೊದಲಾದ ಪ್ರಸಿದ್ಧ ಕಲಾವಿದರಿದ್ದರು. ಇವರ ಸಂಪರ್ಕ ಸುಬ್ಬಣನಿಗೆ ಅಪ್ಯಾಯಮಾನವಾಗಿತ್ತು. ತಿಪ್ಪಯ್ಯನ ಕಂಪನಿ ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮೂರು ಮೊದಲಾದ ಸ್ಥಳಗಳಲ್ಲಿ ನಾಟಕಗಳನ್ನು ಪ್ರದರ್ಶಿಸಿ ರಾಮದುರ್ಗಕ್ಕೆ ಬಂದು ಬೀಡುಬಿಟ್ಟಿತು. ನಾಟಕಗಳು ಜನಾದರಣೀಯವಾದರೂ ಕಂಪನಿಯ ಪರಿಸ್ಥಿತಿ ಚೆನ್ನಾಗಿರಲಿಲ್ಲ. ಅವರಲ್ಲೂ ಮಾಲಿಕರಲ್ಲೊಬ್ಬರಾದ ಪಟ್ಟದಯ್ಯ (ಅಗಳಿ ತಿಪ್ಪಯ್ಯನ ಸೋದರ) ಹೇಳದೆ ಕೇಳದೆ ರಾತ್ರೋರಾತ್ರಿ ಪಲಾಯನಮಾಡಿದ್ದು ಎಲ್ಲರಿಗೂ ಶೋಚನೀಯ ಅವಸ್ಥೆಯನ್ನು ತಂದಿಟ್ಟಿತು. ಆ ಪುಣ್ಯಾತ್ಮ ಕೇವಲ ಓಡಿಹೋಗಿದ್ದಿಲ್ಲ, ಕಂಪನಿಯ ಸಾಮಾನುಗಳನ್ನು ಒಬ್ಬರಿಗೆ ಒತ್ತೆ ಹಾಕಿ ಮತ್ತೆ ಕೆಲಸಾಮಾನುಗಳನ್ನು ಕೆಲಸಹೋದ್ಯೋಗಿಗಳೊಂದಿಗೆ ಸಾಗಿಸಿಕೊಂಡು ಹೋಗಿದ್ದ. ಕಂಪನಿ ದಿವಾಳಿಯಾಗುವುದು ಗಮನಕ್ಕೆ ಬಂದು ಆತ ಹಾಗೆ ಮಾಡಿದ್ದ. ಸುತ್ತಲೂ ಎಲ್ಲಿ ವಿಚಾರಿಸಿದರೂ ಯಾವ ಸುಳಿವೂ ಸಿಕ್ಕಲಿಲ್ಲ. ಹೊತ್ತು ಏರಿದಹಾಗೆ ಹೊಟ್ಟೆ ಹಸಿವು ಹೆಚ್ಚಾಗುತ್ತಿತ್ತು. ಯಾರೂ ಬಿಡಿಕಾಸು ಕೊಡಲು ಮುಂದೆ ಬರಲಿಲ್ಲ. ಆಗ ಸುಬ್ಬಣ್ಣನೇ ಸ್ವಲ್ಪ ಧೈರ್ಯವನ್ನು ತೆಗೆದುಕೊಂಡು ಹೋಟೆಲ್ ಮಾಲಿಕನನ್ನು ಕಂಡು ತನ್ನ ಕಿವಿಯಲ್ಲಿದ್ದ ಹತ್ತಕಡಕು ಆಭರಣಗಳನ್ನೇ ಆತನಲ್ಲಿ ಮಾರಿ ಆ ಸಮಯದಲ್ಲಿ ಅಲ್ಲಿ ಉಳಿದಿದ್ದ ತನ್ನ ಸಹೋದ್ಯೋಗಿಗಳಿಗೆ ಊಟವನ್ನು ಹಾಕಿಸಿ ಉಳಿದ ಹಣವನ್ನು ಅವರವರ ಊರಿನ ದಾರಿಗೆ ಸಹಾಯವಾಗುವ ಹಾಗೆ ಹಂಚಿಕೊಂಡನು. ಅವನಿಗೆ ಆಗ ಬಂಗಾರಕ್ಕಿಂತ ವಿಶ್ವಾಸ, ಪ್ರೇಮ, ಶಾಶ್ವತಗಳಾಗಿ ಕಂಡಿದ್ದವು. ಅಗಳಿ ಕಂಪನಿಯ ಸಂಪರ್ಕ ಅಂದಿಗೆ ಕೊನೆಯಾಯಿತು. 'ಸ್ವಾರ್ಥತೆ ಅತ್ಯಲ್ಪ, ನಿಸ್ವಾರ್ಥತೆ ಅಮೋಘ' ಎಂದು ಅಂದಿನ ಆ ಕಳವಳಕಾರಕ ಚಿತ್ರವನ್ನು ಇಂದಿಗೂ ಸ್ಮರಿಸಿಕೊಳ್ಳುತ್ತಾರೆ ಸಹೋದ್ಯೋಗಿ ಬಾಲೇನಹಳ್ಳಿ (ಚಳ್ಳಕೆರೆ ತಾ.) ಪಟೇಲ್ ಬಿ. ಪಿ. ಮಲ್ಲಾರೆಡ್ಡಿ.

ಕಳ್ಳಗತ್ತಿನಿಂದ ಕಂಪನಿ ಕದಗಳು ಕಿತ್ತುಹೋದ ಮೇಲೆ ಸುಬ್ಬಣ್ಣನು ತನ್ನ ಊರಿನತ್ತ ದಾರಿಹಿಡಿದ. ಆಗ ಅವನ ಜೊತೆ ಅವನ ಊರಿಗೆ ಬಂದ ಇನ್ನೊಬ್ಬ ವ್ಯಕ್ತಿ ವಾಸು. ಹಿರಿಯೂರಲ್ಲಿ ಇಬ್ಬರೂ ನೆಲೆನಿಂತರು. ಹರ್ತಿಗೆ ಹೋದ ಸುಬ್ಬಣ್ಣ ಒಮ್ಮೆ ಮದಕರಿನಾಯಕನ ಕೋಟೆಗೆ ಹೋದ. ಅಲ್ಲಿಯ ಗಣ್ಯವ್ಯಕ್ತಿ ಜೋಯಿಸ ಲಕ್ಷ್ಮೀನರಸಪ್ಪನವರ ಮಗ ಪುಟ್ಟಣ್ಣನ ಜೊತೆ 'ಪ್ರಹ್ಲಾದನಾಟಕ' ಅಭ್ಯಾಸ, ಕೆಲವೇ ದಿವಸಗಳಲ್ಲಿ ನಾಟಕ ಪ್ರದರ್ಶನ. ಅನಂತರ ಅದೇ ಗ್ರಾಮದಲ್ಲಿ 'ಸುಭದ್ರಾಪರಿಣಯ' ನಾಟಕದ ಪ್ರದರ್ಶನ. ಅತ್ತ ಹಿರಿಯೂರಲ್ಲಿದ್ದ ವಾಸುವಿನ ನಾಟಕ ಚಪಲತೆ ಸುಬ್ಬಣ್ಣನನ್ನು

ಮತ್ತೆ ಹಿರಿಯೂರಿಗೆ ಬರುವಂತೆ ಮಾಡಿತು. ವಾಸುವಿನ ಸ್ನೇಹಿತ ಎಂ.ಬಸವಣ್ಣ ನಾಟಕದ ಎಲ್ಲ ಭಾರವನ್ನೂ ಹೊರಲು ಸಿದ್ಧವಾಗಿದ್ದ—ಪಾತ್ರವಹಿಸುವುದರ ಜೊತೆಗೆ. ಆದರೆ ಕೆಲವರು ಬಹಳ ಹುರುಪಿನಿಂದ ಮುಂದೆ ಬಂದು ಅದಕ್ಕೆ ಇಮ್ಮಡಿ ಭಯದಿಂದ ಏಕದಂ ಹಿಂದಕ್ಕೆ ಸರಿಯುತ್ತಾರೆ. ಇಂತಹ ಸಹವಾಸ ನಾಟಕ ನಿಲ್ಲುವುದಕ್ಕೂ ಒಮ್ಮೊಮ್ಮೆ ಕಾರಣವಾಗುವುದುಂಟು ಆದರೆ ನಾಟಕ ಕಲಿಸುವ ವ್ಯಕ್ತಿ ಗಟ್ಟಿಗನಾಗಿದ್ದರೆ ಇಂತಹ ಎಲ್ಲ ಘಟನೆಗಳನ್ನೂ ಎದುರಿಸಿ ಯಾರಾದರೂ ಪಾತ್ರಮಾಡುವುದನ್ನು ಬಿಟ್ಟರೆ ಇನ್ನೊಬ್ಬರಿಂದ ಪಾತ್ರ ಮಾಡಿಸಿ ನಾಟಕ ಯಶಸ್ವಿಯಾಗುಹಂತೆ ನೋಡಿಕೊಳ್ಳುತ್ತಾನೆ. ಶ್ಯಾ|| ಶ್ರೀಕಂಠಯ್ಯ ಸುಭದ್ರೆಯ ಪಾತ್ರ ಮಾಡಲು ಹಿಂದೇಟುಹಾಕಿದಾಗ ಸುಬ್ಬಣ್ಣನಿಗೂ ಹೀಗೆ ಮಾಡಬೇಕಾಯಿತು. ಆಗ ಆತ ಕೋಟೆ ಸಿದ್ಧನಾಯಕನನ್ನು ತಯಾರುಮಾಡಿದ. ಇವರ ನಾಟಕಗಳಲ್ಲಿ ಎಷ್ಟು ತೊಂದರೆಯಿತ್ತೆಂದರೆ ಪ್ರತಿಯೊಂದು ಕೆಲಸಕ್ಕೂ—ಹಾರ್ಮೋನಿಯಂ ನುಡಿಸುವುದಕ್ಕೂ ಬೇರೆ ಮನುಷ್ಯರು ಇರಲಿಲ್ಲ. ಅಂತೆಯೇ ವಾಸುವಿಗೆ ಸುಬ್ಬಣ್ಣ ಸುಬ್ಬಣ್ಣನಿಗೆ ವಾಸು ಹೀಗೆ ಒಬ್ಬರಿಗೆ ಇನ್ನೊಬ್ಬರು ಹಾರ್ಮೋನಿಯಂ ನುಡಿಸಿ ಅಭಿನಯವೆಸಗುತ್ತಿದ್ದರು. ಇಷ್ಟರಲ್ಲಿ ಸುಬ್ಬಣ್ಣ ಹಾಗೂ ವಾಸೂ ಕೂಡ ಅಗಲ ಬೇಕಾಯಿತು. ವಾಸು ತನ್ನ ಊರಿಗೆ ಪ್ರಯಣ ಬೆಳೆಸಿದ. ಆಗ ಸುಬ್ಬಣ್ಣ ಒಬ್ಬನೇ ಮುಂದೆ ನಡೆದ ನಾಟಕಗಳ ಕೇಂದ್ರಬಿಂದುವಾದ.

ವಾಸುವಿನ ನಿರ್ಗಮನ ಸಂಗೀತ ಪ್ರೇಮಿ ಸೂರಣ್ಣನ (ಮಲೇರಿಯಾ ಆಫೀಸಿನ ಕೆ. ಸೂರ್ಯನಾರಾಯಣರಾವ್) ಆಗಮನ ಸರಿಯಾಯಿತು. ಶಿರಹಟ್ಟಿ ಕಂಪನಿಯ ನಾಟಕ 'ಭೋಜಪ್ರಬಂಧ'ದ ಪ್ರದರ್ಶನ. ಸುಬ್ಬಣ್ಣನ ಹಾರ್ಮೋನಿಯಂ ಶ್ಯಾ|| ಶಾಮಣ್ಣನ ಪಿಟೀಲು ಮತ್ತು ಚಳ್ಳಕೆರೆ ಸೂರನಾಯ್ಕನ ತಬಲ ಆ ನಾಟಕಕ್ಕೆ ವಿಶೇಷ ಕೀರ್ತಿಯನ್ನು ತಂದುಕೊಟ್ಟವು. ಪಾತ್ರವಹಿಸುವ ಗೀಳು ಸುಬ್ಬಣ್ಣನಿಗೆ ವಿಶೇಷ, ಗಂಡುಧ್ವನಿ ಆದರೂ ಸ್ತ್ರೀ ಪಾತ್ರ ಹಾಕಲೇಬೇಕೆಂಬ ಛಲ. ಒಮ್ಮೆ ಆ ಕೆಲಸಕ್ಕೂ ಕೈ ಹಾಕಿದ 'ಸುಭದ್ರಾ ಪರಿಣಯ' ನಾಟಕದಲ್ಲಿ 'ಸುಭದ್ರೆ'ಯ ಪಾತ್ರಧಾರಿಯಾದ. ಆಗ 'ಅರ್ಜುನ' ಪಾತ್ರಧಾರಿ ಸೂರಣ್ಣ. ಸುಭದ್ರಾ ಪರಿಣಯದಲ್ಲಿ ಹಾಡಿನದೇ ಒಂದು ವಿಶೇಷ.

"ಸಖಿ ಪೌರ್ಣಿಮಾ ಶಶಿಧರಸಂ ತೋರ್ಪ ಚೆಲ್ವುಯುತಿ ನೋಡೆ"

"ಪರಿಹಾಸಗೈವರೆ" ಇತ್ಯಾದಿಗಳ ಮಾಧುರ್ಯ ಕೇಳಿದವರು ಎಂದೂ ಮರೆಯಲಾರರು. 'ಒನ್ಸ್‌ಮೋರ್'ಗಳ ಸುರಿಮಳೆ. ಜನ ಎಷ್ಟು ಭೇಷ್ ಎಂದರೂ ಪುರುಷ ಪಾತ್ರಕ್ಕೇ ತನ್ನ ಶರೀರ ಹೇಳಿಮಾಡಿಸಿದ್ದು ಎನ್ನುವುದನ್ನು ಸುಬ್ಬಣ್ಣ ಅರಿತುಕೊಳ್ಳಲು ಮರೆಯಲಿಲ್ಲ. ಅಂತೆಯೇ ಮುಂದೆ ಆತ ಪುರುಷ ಪಾತ್ರಗಳನ್ನೇ ವಹಿಸುತ್ತಿದ್ದ ; ಈ ಮಧ್ಯೆ ಪಿಟೀಲು ನುಡಿಸುವುದನ್ನೂ ಕಲಿತುಕೊಂಡ.

ಗನ್ನಾಯಕನಹಳ್ಳಿ, ಐಮಂಗಲ, ಮದಕರಿನಾಯಕನಕೋಟೆ, ವದ್ದಿಕೆರೆ, ಯರಬಳ್ಳಿ, ಹರ್ತಿಕೋಟೆ, ಚಿಕ್ಕೋನಹಳ್ಳಿ, ಹೊರಕೇರಿ ಮುಂತಾಗಿ ಅನೇಕ ಊರುಗಳಲ್ಲಿ

ನಾಟಕಗಳನ್ನು ಕಲಿಸುವ ನಿರ್ದೇಶಕನಾಗಿ ಹೋಗಿ ಹಳ್ಳಿಹಳ್ಳಿಗೆ ಅನೇಕ ಕಲಾವಿದರನ್ನು ಸುಬ್ಬಣ್ಣ ತರಪೇತುಗೊಳಿಸಿದುದಲ್ಲದೆ ತಾನೇ ಸ್ವತಃ "ರಾಣಾ ಪ್ರತಾಪಸಿಂಹ" ಎಂಬ ನಾಟಕ ಬರೆದು ಹಿರಿಯೂರಿನಲ್ಲಿ ಮಕ್ಕಳ ಕಡೆಯಿಂದ ಆಡಿಸಿದನು. ಚಿಕ್ಕೇನಹಳ್ಳಿಯಲ್ಲಿ ಬಿ. ಪುಟ್ಟಸ್ವಾಮಯ್ಯನವರ "ಕುರುಕ್ಷೇತ್ರ ನಾಟಕ" ತಳಕಿನಲ್ಲಿ ದಿ|| ಜೆ. ಎಸ್. ವೆಂಕಣ್ಣಯ್ಯನವರ ತಂದೆ ಸುಬ್ಬಣ್ಣನವರು ಬರೆದ 'ಚಿತ್ರಾಂಗದ' ನಾಟಕ ಇತ್ಯಾದಿಗಳನ್ನು ಹರ್ತಿಸುಬ್ಬಣ್ಣ ರಂಗದ ಮೇಲೆ ಪ್ರಯೋಗಕ್ಕೆ ತಂದು ಅನೇಕರಿಂದ ಸೈ ಸೈ ಅನ್ನಿಸಿಕೊಂಡ. ಸಂಸಾರದ ಭಾರ, ನಾಟಕ ಕಲೆಯ ಪ್ರಸಾರ ಎರಡೂ ಸುಬ್ಬಣ್ಣನ ದೇಹವನ್ನು ಒಳ ಒಳಗೇ ನವೆಸಿದ್ದವು,

ದಿ. 18-4-55ರಂದು ಶಿಷ್ಯ ಮಲ್ಲಾರೆಡ್ಡಿಯ ಸಂಬಂಧಿಕರ ಊರು ಬೆಳಗಟ್ಟದಲ್ಲಿ ನಾಟಕ ಕಲಿಸುತ್ತಿದ್ದ ಕಾಲದಲ್ಲಿಯೇ ರಂಗ ತಾಲೀಮು ನಡೆದಲ್ಲಿಯೇ ಸುಬ್ಬಣ್ಣನಿಗೆ ಎದೆ ನೋವು ಇದ್ದಕ್ಕಿದ್ದಂತೆ ಕಾಣಿಸಿಕೊಂಡಿತು. ಸನಿಹದಲ್ಲೇ ಇದ್ದ ಡಾ. ಗೋವಿಂದ ದಾಸ, ಶಿಷ್ಯ ಮಲ್ಲಾರೆಡ್ಡಿ, ಎಲ್ಲರೂ ಸುಬ್ಬಣ್ಣನಿಗೆ ವಿಶ್ರಾಮ ತೆಗೆದುಕೊಳ್ಳಲು ಹೇಳಿದರು. ಆದರೆ "ಕಲೆಗಾಗಿ ತಾನು" ಎಂಬ, ಅದರ ಸೇವೆಯಲ್ಲೆ ಕೊನೆಯುಸಿರೆಳೆಯಬೇಕೆಂಬ ಸುಬ್ಬಣ್ಣ ಯಾರ ಹಿತವಚನವನ್ನೂ ಕೇಳಲಿಲ್ಲ. ಮತ್ತೆ ಯಥಾಪ್ರಕಾರ ಎರಡು ಗಂಟೆಯವರಿಗೆ ಪ್ರಾಕ್ಟೀಸ್ ಮಾಡಿ ದಣಿದು ಮಲಗಿದ. ಮಲಗಿದವನು ಪುನಃ ಏಳಲೇ ಇಲ್ಲ ; ಕಲೆಯಿಂದ ಆರಂಭಿಸಿದ ಜೀವನ ಕಲೆಯಲ್ಲೇ ಮುಕ್ತಾಯವಾಯಿತು.

ಬಿ. ಕೃಷ್ಣ

ಶಿಕ್ಷಣ ಮತ್ತು ಜೀವನ

ಪೀಠಿಕೆ

ಶಿಕ್ಷಣದ ಗುರಿ ಮಾನವನ ಸುಖಸಾಧನೆ. "ಎಲ್ಲರ ಸುಖದಲ್ಲಿ ತನ್ನ ಸುಖವೂ ಸೇರಿಕೊಂಡಿದೆ ; ಆದರೆ ತನ್ನೊಬ್ಬನ ಸುಖದಲ್ಲಿ ಎಲ್ಲರ ಸುಖವೂ ಇಲ್ಲ"— ಎಂಬ ಅರಿವನ್ನು ಶಿಕ್ಷಣವು ಮನವರಿಕೆ ಮಾಡಿಕೊಡಬೇಕು. ನಾವು ಕಲಿಯುವುದೆಲ್ಲವೂ 'ನಾನು' 'ನನ್ನದು' ಎಂಬ ಸಂಕುಚಿತವಾದ ಅಹಂಕಾರ - ಮಮಕಾರ ಭಾವಗಳನ್ನು ಇಲ್ಲವಾಗಿಸಬೇಕು ; 'ನಾವು', 'ನಮ್ಮೆಲ್ಲರದು' ಎಂಬ ವಿಶಾಲ ಭಾವನೆಯನ್ನು ಬೆಳೆಸುವಂತಿರಬೇಕು. ವೇದ ಉಪನಿಷತ್ತುಗಳ ಕಾಲದಲ್ಲಿದ್ದ ವಿಶ್ವವಿಶಾಲ ಭಾವನೆಯು ಇಂದು ಒಂದು ನೆನಪಾಗಿ ಮಾತ್ರ ಉಳಿದಿದೆ. 'ಈ ದಿನ ಮಾತ್ರ ಸುದಿನ ; ನಾಳೆ ಇನ್ನೂ ಕೆಟ್ಟ ದಿನ' ಎಂಬ ಅಭಿಪ್ರಾಯ ಸಾಮಾನ್ಯವಾಗುತ್ತಿದೆ. ಸ್ವಾರ್ಥ ವಿಶ್ವರೂಪವನ್ನು ತಾಳುತ್ತಿದೆ. ಅದರ ಜ್ವಾಲೆ ಏನೂ ಇಲ್ಲದವರನ್ನು ಭಸ್ಮ ಮಾಡುತ್ತಿವೆ. ಅನಾವಶ್ಯಕ ಸಂತಾನ, ಗುರಿಯಿಲ್ಲದ ಶಿಕ್ಷಣ, ಮಾನವೀಯತೆಯಿಲ್ಲದ ಜೀವನ - ಇವುಗಳು ಮಾನವತಾವಾದಿಗಳಿಗೆ ಮಂಕು ಹಿಡಿಸುತ್ತಿವೆ. ಹೊಟ್ಟೆಗೆ ಅನ್ನ, ಜೀವನಕ್ಕೆ ಭದ್ರತೆ, ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳು–ಇವುಗಳಲ್ಲಿ ಮೊದಲು ಯಾವುದು ಅತ್ಯಗತ್ಯ ಎಂಬುದು ನಿರಂತರ ಸಮಸ್ಯೆಯಾಗಿದೆ. ಮಾನವ ಪ್ರಾಣಿಯನ್ನು 'ಪರಿಪೂರ್ಣ ಮಾನವ'ನನ್ನಾಗಿಸಬೇಕಾದ ಶಿಕ್ಷಣದ ಸ್ವರೂಪ ಅಂದು ಹೇಗಿತ್ತು, ಇಂದು ಹೇಗಿದೆ ಮತ್ತು ಮುಂದೆ ಹೇಗಿರಬೇಕು–ಎಂಬುದರ ಸ್ಥೂಲ ವಿವರಣೆ ಈ ಲೇಖನದ ಗುರಿ. ಪರಿಹಾರ ರೂಪದ ಸೂಕ್ಷ್ಮ ವಿವರಣೆಯನ್ನು ಪ್ರಾಜ್ಞ ಓದುಗರ ಸೃಜನಾತ್ಮಕ ಕಲ್ಪನೆಗೇ ಬಿಟ್ಟಿರುವುದು.

ಶಿಕ್ಷಣ ಅಂದು

ಜೀವಿಗಳು ಹುಟ್ಟುತ್ತವೆ, ಬೆಳೆಯುತ್ತವೆ, ಬದುಕಲು ಹೋರಾಡುತ್ತವೆ, ಸಂತತಿಯನ್ನು ಮುಂದುವರಿಸುತ್ತವೆ. ಈ ಸ್ಥಿತಿಗಳು ಮಾನವನಿಗೂ ಉಂಟು. ಬುದ್ಧಿ, ಮನಸ್ಸುಗಳು ಮಾನವನನ್ನು ಸೃಷ್ಟಿಯ ಕಿರೀಟವನ್ನಾಗಿಸಿವೆ. ಆದರೆ ಮಾನವ ಮಾತ್ರ ನಿರಂತರ ಬದಲಾಯಿಸುತ್ತಿದ್ದಾನೆ–ತನ್ನದೇ ಆದ ಜೀವನ ಮೌಲ್ಯಗಳೊಡನೆ.

ಅಂದಿನ, ಅಂದರೆ ಪುರಾತನ ಭಾರತದಲ್ಲಿನ ಶಿಕ್ಷಣದ ವ್ಯವಸ್ಥೆಯ ಪಕ್ಷಿನೋಟವನ್ನು ನೋಡೋಣ. ಸರ್ವಶಾಸ್ತ್ರ ಪಾರಂಗತನಾದ ಸದ್ಗುರುವನ್ನು ಹುಡುಕುತ್ತಾ ಜ್ಞಾನಾರ್ಥಿ ಯುವಜನ ಮುನ್ನಡೆಯುತ್ತಿದ್ದರು. ದೂರದ ಅರಣ್ಯದ ಮಧ್ಯೆ ಈ ಶಿಷ್ಯರಿಗಾಗಿ ಕಾದು ಕುಳಿತಿರುತ್ತಿದ್ದರು ಆ ಗುರುಶ್ರೇಷ್ಠರು. ಲೌಕಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣವನ್ನು ಮನಸಾರೆ ಬಯಸಿ ಹೋಗುತ್ತಿದ್ದರು ಆ ಶಿಷ್ಯರು. ಸರಳತೆ, ಸತ್ಯಸಂಧತೆ ಹಾಗೂ ಜ್ಞಾನದ ಸಾಕಾರ ಮೂರ್ತಿಯಂತಿದ್ದ ಆ ಗುರುವು ಶಿಷ್ಯರ ಕುಲ-ಗೋತ್ರ, ಸಿರಿತನ-ಬಡತನ, ವಿದ್ಯೆ-ಅವಿದ್ಯೆ, ಸಾಮಾಜಿಕ ಸ್ಥಾನಮಾನ – ಈ ಯಾವುದನ್ನೂ ಪರಿಗಣಿಸದೆ ಅವರ ಸುಂದರ, ಸುದೃಢ, ಸೌಮ್ಯ ಹಾಗೂ ಗಾಂಭೀರ್ಯ ವ್ಯಕ್ತಿತ್ವದ ನಿರ್ಮಾಣಕ್ಕೆ ತನ್ನನ್ನೇ ಅರ್ಪಿಸಿಕೊಳ್ಳುತ್ತಿದ್ದನು. ಆ ಶಿಷ್ಯರಾದರೋ ಶ್ರದ್ಧೆ, ಆಸಕ್ತಿ, ಭಕ್ತಿ, ಗೌರವ ಹಾಗೂ ಸೇವಾಭಾವಗಳೊಡನೆ ವಿದ್ಯಾರ್ಜನೆ ಮಾಡುತ್ತಿದ್ದರು. ಗುರಿ ಸಾಧನೆಗಾಗಿ ಕಠಿಣ ನಿಯಮಗಳ ಪಾಲನೆ, ಕಷ್ಟ ಕಾರ್ಪಣ್ಯಗಳ ಸಹಿಷ್ಣುತೆ ಹಾಗೂ ಪ್ರೇಮ, ಕ್ಷಮೆ, ತ್ಯಾಗಮಯ ಜೀವನವನ್ನು ಬಾಳುತ್ತಿದ್ದರು. ಸುಖ ಸಮಾಜದ ಅಸ್ತಿತ್ವ ನಿರಂತರವಾಗಿ ಸಾಗಲಿ ಎಂಬ ಒಂದೇ ಗುರಿಯನ್ನು ಹೊಂದಿದ್ದ ಆ ಗುರುವು ನಿರ್ಲಿಪ್ತ ಹಾಗೂ ನಿಷ್ಕಾಮ ಭಾವನೆಯಿಂದ ಜ್ಞಾನದಾನ ಮಾಡುತ್ತಿದ್ದನು. ಜನತೆ ಆ ಗುರುವಿನ ಸರಳ ಆದರೂ ಸಮಾಧಾನಕರ ಜೀವನದ ಅಗತ್ಯಗಳನ್ನು ಸಂತೋಷದಿಂದ ನೋಡಿಕೊಳ್ಳುತ್ತಿತ್ತು. ಸ್ವಾವಲಂಬಿ ಜನತೆಯನ್ನು, ಜನಸೇವೆ ಮಾಡುವ ಯುವಜನತೆಯನ್ನು, ಲೋಕಹಿತವನ್ನು ಬಯಸುವ ಸಜ್ಜನರನ್ನು ನಿರ್ಮಾಣ ಮಾಡುವುದು ಅಂದಿನ ಶಿಕ್ಷಣದ ಗುರಿಯಾಗಿತ್ತು. ಶ್ರೀ ರಾಮ, ಶ್ರೀ ಕೃಷ್ಣ, ಭಗವಾನ್ ಬುದ್ಧ, ಮಹಾವೀರ ಮುಂತಾದವರೆಲ್ಲರೂ ಅಂತಹ ಉದಾತ್ತ ಶಿಕ್ಷಣದ ಕೊಡುಗೆಗಳು. ಅಂದು ಜನತೆಯ ಜೀವನದ ಗುರಿ, ಗುರುಗಳ ಜೀವನದ ಗುರಿ ಹಾಗೂ ಜ್ಞಾನಾರ್ಥಿ ಯುವಕರ ಜೀವನದ ಗುರಿ "ಆತ್ಮವಿಕಾಸ ಮತ್ತು ಲೋಕ ಹಿತ" ಆಗಿತ್ತು.

ಶಿಕ್ಷಣ ಇಂದು

ಭಾರತ ಸ್ವಾತಂತ್ರ್ಯವನ್ನು ಗಳಿಸಿ ಮೂವತ್ತಐದು ವರ್ಷಗಳೇ ಸಂದಿವೆ. ಈ ಅವಧಿಯಲ್ಲಿ ಜೀವನ ರೀತಿ-ನೀತಿಗಳು ದುರವಸ್ಥೆಗೆ ಇಳಿಯುತ್ತಿರುವುದು ಸರ್ವವೇದ್ಯ. "ನಾವು" ಎಂಬುದರ ಸ್ಥಾನವನ್ನು "ನಾನು" ಎಂಬ ಸ್ವಾರ್ಥ ಭಾವನೆ ಕಾಡ್ಗಿಚ್ಚಿನಂತೆ ಆಕ್ರಮಿಸುತ್ತಿದೆ. ಇದರಿಂದಾಗಿ ಬಡತನ-ಸಿರಿತನಗಳ ಅಂತರ ಸತತವಾಗಿ ಹೆಚ್ಚುತ್ತಿದೆ. ನೀತಿ-ನ್ಯಾಯ-ಧರ್ಮಗಳು ಬಡವರನ್ನು ಬರಡುಗೊಳಿಸಲು ಸ್ವಾರ್ಥಿ ಸಿರಿವಂತರು ಬಳಸುತ್ತಿರುವ ಮಾರಕ ಅಸ್ತ್ರಗಳಾಗುತ್ತಿವೆ. ಸಾರ್ವತ್ರಿಕ ಸುಖ, ಸಾಮಾಜಿಕ ನ್ಯಾಯ, ಸತ್ಯಸಂಧತೆ, ಪ್ರಾಮಾಣಿಕತೆ, ಮಾನವೀಯತೆ, ಭೂತದಯೆ – ಎಂದಿಗೂ ವಾಸ್ತವವಾಗಲಾರದ ಆದರ್ಶಗಳಾಗುತ್ತಿವೆ. ಕೃತಕ ನಾಟಕೀಯ ಜೀವನ, ಪ್ರಚಾರದ ಖ್ಯಾತಿ,

ತೋರಿಕೆಯ ದೊಡ್ಡಸ್ತಿಕೆ, ಸತ್ವವಿಲ್ಲದ ಪದವಿ ಪತ್ರಗಳು – "ನಿಜ"ವನ್ನು ಪಾತಾಳಕ್ಕೆ ತುಳಿದು ಮೆರೆಯುತ್ತಿವೆ.

ಇಂದಿನ ಶಿಕ್ಷಣ ಯಾವ ರೀತಿಯಲ್ಲೂ ಬದುಕಿಗೆ ನೆರವಾಗುತ್ತಿಲ್ಲ. ಪಡೆದ ಪದವಿಗಳಿಗೆ ಸೂಕ್ತ ಉದ್ಯೋಗಗಳಿಲ್ಲ. ಇರುವ ಉದ್ಯೋಗಗಳಿಗೆ ಅರ್ಹರಾದ, ಸಮರ್ಥರಾದ ಶಿಕ್ಷಿತ ಜನರಿಲ್ಲ. ಶಿಕ್ಷಣದ ಹೆಸರಿನಲ್ಲಿ ಸಾಮಾಜಿಕ ನ್ಯಾಯದ ಮಾನವೀಯತೆಯ ಕೊಲೆಯಾಗುತ್ತಿದೆ. ಮಾನವೀಯತೆಯನ್ನು ಉಳಿಸಲು ಸೃಷ್ಟಿಯಾದ ಕಾನೂನುಗಳು ಆ ಮಾನವೀಯತೆಯನ್ನೇ ಹೊಸಕಿಹಾಕುತ್ತಿವೆ. ಶಿಕ್ಷಣದ ಸವಲತ್ತುಗಳು ಕೇವಲ ಬುದ್ಧಿಜೀವಿಗಳೆಂದು ಕರೆಸಿಕೊಳ್ಳಲ್ಪಡುತ್ತಿರುವವರ ಮತ್ತು ಬಲ್ಲಿದರ ಸ್ವತ್ತಾಗುತ್ತಿವೆ. ಶಿಕ್ಷಣದ ಸುಧಾರಣಾ ಕಾರ್ಯಗಳಿಗಾಗಿ ಮುಡಿಪಿಡುತ್ತಿರುವ, ಬಡವರ ಬೆವರಿನ ಗಳಿಕೆಯಾದ ಅಪಾರ ಹಣವು, ಜವಾಬ್ದಾರಿಯುತ ಸ್ಥಾನಗಳಲ್ಲಿರುವ ಕೆಲವು ಸ್ವಾರ್ಥಿ ಅಧಿಕಾರಿಗಳ ಪಾಲಾಗುತ್ತಿದೆ. ಬಡವರ ಬೆವರು ಬುದ್ಧಿಜೀವಿಗಳ ಸುಖ ಜೀವನ ಸೌಧಗಳ ಆಧಾರ ವಸ್ತುವಾಗಿದೆ. ಸಮಾಜಕ್ಕೆ ಅನ್ನ ಕೊಡುವ ರೈತ, ಸೇವೆ ಮಾಡುವ ಕೊಳಕು ವೃತ್ತಿಯ ಕೂಲಿಕಾರ, ಮಲಿನತೆಯನ್ನೇ ಗುಡಿಸಿ ಹಾಕುವ ಜಲಗಾರ – ಇವರು ಯಾವ ಸಂದರ್ಭ ನಾಗರಿಕರಾದ ಬುದ್ಧಿಜೀವಿಗಳ ಗಮನಕ್ಕೆ ಬರುವುದೇ ಇಲ್ಲ. ಆದರೂ, ಇದರ ಪ್ರಾಮಾಣಿಕ ಸೇವೆಯಿಲ್ಲದೆ ಒಂದು ದಿನವೂ ಈ ನಾಗರಿಕರ ಬದುಕು ಸಾಗುವುದಿಲ್ಲ. ಇಷ್ಟೊಂದು ಸ್ವತಂತ್ರ ಜೀವನ ಇವರದು ! ಆದರೂ ಮಾನವೀಯ ಮೌಲ್ಯಗಳಿಗಾಗಿ ಬದುಕುತ್ತಿರುವ ಒಳ್ಳೆಯ ನಾಗರಿಕರು ಇಲ್ಲವೆ ಇಲ್ಲ. ಆದರೆ ಅವರ ಸಂಖ್ಯೆ ಅತ್ಯಲ್ಪ.

ಲಂಚಕೋರ ಅಧಿಕಾರಿ, ದುರಾಶೆಕೋರ ವ್ಯಾಪಾರಿ, ಪರಮಸ್ವಾರ್ಥಿ ರಾಜಕಾರಣಿ ಇವರೆಲ್ಲರೂ ಶಿಕ್ಷಣ ಹೊಂದಿದವರೆ, ಪವಿತ್ರ ಹಿಂದೂ ಧರ್ಮದ ಮಹತ್ವವನ್ನು ಸಾರುವವರೆ. ಆದರೆ ಈ ಮೂವರಿಂದ ಶ್ರೀಸಾಮಾನ್ಯರಿಗೆ ಆಗುತ್ತಿರುವ ಅನ್ಯಾಯಕ್ಕೆ ಮಿತಿ ಎಂಬುದೇ ಇಲ್ಲ. ಬುದ್ಧಿಯನ್ನು ಬಂಡವಾಳ ಮಾಡಿಕೊಂಡು ಬದುಕುತ್ತಿರುವ ಬಹುಮಂದಿ ಬುದ್ಧಿಜೀವಿ ಶಿಕ್ಷಣ ತಜ್ಞರಿಂದ ಬುದ್ಧಿಯಿಲ್ಲದ ಬಡಜನತೆಗೆ ಆಗುತ್ತಿರುವ ಅನ್ಯಾಯದ ಒಂದು ತುಣುಕನ್ನು ನೋಡೋಣ. ನೀತಿ–ನ್ಯಾಯಗಳನ್ನು ಜೀವನದಲ್ಲಿ ಪ್ರತಿಬಿಂಬಿಸಬೇಕೆಂಬ ಆದರ್ಶಗಳನ್ನು ಹೊತ್ತು ಮುಂದಾಳಾಗಿ ನಿಂತಿರುವ ಶಿಕ್ಷಣ ವ್ಯವಸ್ಥೆಯು ಮಾಡುತ್ತಿರುವ ಅತಿದೊಡ್ಡ ಸಾಮಾಜಿಕ ಅನ್ಯಾಯದ ಘೋರರೂಪವನ್ನು ಸೆಕೆಂಡರಿ ಶಿಕ್ಷಣದ ಇಬ್ಬಂದಿ ವ್ಯವಸ್ಥೆಯ ಉದಾಹರಣೆಯ ಮೂಲಕ ಮನಗಾಣಬಹುದು.

ಭಾರತದ ಅಕ್ಷರಸ್ಥ ಜನರ ಸಂಖ್ಯೆ ಶೇಕಡ 40ಕ್ಕಿಂತಲೂ ಕಡಿಮೆಯಂತೆ. ಇನ್ನೂ ಒಟ್ಟು ಜನಸಂಖ್ಯೆಯ ಅರ್ಧವನ್ನೂ ಮುಟ್ಟಿಲ್ಲ. ಈ 40% ಅಕ್ಷರಸ್ಥರಲ್ಲಿ ನಿಜವಾದ ವಿದ್ಯಾವಂತರು ಕೇವಲ ಬೆರಳೆಣಿಕೆಯಷ್ಟು ಮಂದಿ ಮಾತ್ರ. ಉಳಿದವರು ಪದವಿ ಪಟ್ಟಿಗಳನ್ನು ಲಗತ್ತಿಸಿಕೊಂಡಿರುವವರಾಗಿದ್ದರೆ, ಬುದ್ಧಿಜೀವಿಗಳೆಂದು ಕರೆದುಕೊಳ್ಳುತ್ತಾರೆ. ಇವರು ನಗರವಾಸಿಗಳು. ಸರ್ಕಾರಿ ಉದ್ಯೋಗಗಳಲ್ಲಿ, ವ್ಯಾಪಾರ–ಉದ್ಯಮಗಳಲ್ಲಿ, ರಾಜಕಾರಣಗಳಲ್ಲಿ ತೊಡಗಿ ಸುಖಜೀವನ ಸಾಗಿಸುವವರಾಗಿದ್ದಾರೆ. ಆದರೆ, ಅನಕ್ಷರಸ್ಥರೂ,

ಅಜ್ಞಾನಿಗಳೂ, ಅನಾಗರಿಕರೂ ಆದ ಬಡಜನತೆ ಹಳ್ಳಿಗಾಡುಗಳಲ್ಲಿ ಹಸಿವಿನಿಂದ ಅನಾರೋಗ್ಯದಿಂದ ನರಳುತ್ತಿದ್ದಾರೆ, ಇನ್ನೂ ಸಾಯದೆ ಬದುಕಿದ್ದಾರೆ ! ಅಲ್ಪಸಂಖ್ಯಾತರಾದ ವಿದ್ಯಾವಂತರು ನಗರಗಳಲ್ಲಿದ್ದು ಕೊಂಡು ಶಿಕ್ಷಣ, ಆರೋಗ್ಯ, ಸುಖಜೀವನ, ಮನರಂಜನೆ ಮುಂತಾದ ನಾಗರಿಕ ಸವಲತ್ತುಗಳನ್ನು ಅನುಭವಿಸುತ್ತಿದ್ದಾರೆ. ಹಳ್ಳಿಗಾಡಿನ ರೈತ ಮೊದಲಾದ ಶ್ರಮಜೀವಿಗಳು ಈ ನಾಗರಿಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಆದರೆ ಈ ನಾಗರಿಕ ಸವಲತ್ತುಗಳಿಗೆ ಬಹುಪಾಲು ಆಧಾರವಾಗಿರುವುದು ಆ ಶ್ರಮಜೀವಿಗಳ ಜೀವನ, ಅವರ ನಿಸ್ಸಹಾಯಕ ಮೂಕ ಸಹಿಷ್ಣುತೆ ಎಂಬುದನ್ನು ಮರೆಯಬಾರದು. ಬಹುಸಂಖ್ಯಾತರಾದ ಈ ಶ್ರಮಜೀವಿಗಳ ಮಕ್ಕಳು ಅಲ್ಪಸಂಖ್ಯಾತರಾದ ಸುಶಿಕ್ಷಿತ ನಾಗರಿಕರ ಮಕ್ಕಳೊಡನೆ ಶಿಕ್ಷಣ ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋಲುತ್ತಿದ್ದಾರೆ, ಸಾಯುತ್ತಿದ್ದಾರೆ.

ಇಂದಿನ ಶಿಕ್ಷಣ ವ್ಯವಸ್ಥೆಯ ಅಸಂಬದ್ಧತೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಎದುರುಗೊಳ್ಳುತ್ತಿರುವ ನಗರಗಳ ಶ್ರೀಮಂತ ಸುಶಿಕ್ಷಿತ ವರ್ಗದವರ ಮಕ್ಕಳು ಹಾಗೂ ಹಳ್ಳಿಗಾಡಿನ ಅಶಿಕ್ಷಿತ, ಅನಾಗರಿಕ ಶ್ರಮಜೀವಿ ವರ್ಗದವರ ಮಕ್ಕಳು - ಇವರ ಸಾಧನೆಯ ಫಲಾಫಲಗಳು ನಿದರ್ಶನವಾಗಿವೆ. ಹಳ್ಳಿಗಾಡಿನ ದುರದೃಷ್ಟವಂತ ಮಕ್ಕಳು ಏಕಕಾಲದಲ್ಲಿ ಬದುಕಲೂ ಹೋರಾಡುತ್ತಾರೆ ಮತ್ತು ಗಗನ ಕುಸುಮದಂತಿರುವ ವಿದ್ಯೆಗಾಗಿಯೂ ಹಂಬಲಿಸುತ್ತಾರೆ. ಇವರಿಗೆ ಸರ್ಕಾರಿ ಶಾಲೆಗಳೇ ಗತಿ. ಹೊಲ ಗದ್ದೆಗಳಲ್ಲಿ ದುಡಿಯುತ್ತಾ, ಎಮ್ಮೆ ದನಗಳನ್ನು ಕಾಯುತ್ತಾ, ಅರೆಹೊಟ್ಟೆ ಉಂಡು, ಹರಿದ ಬಟ್ಟೆ ತೊಟ್ಟು ಬರುತ್ತಾರೆ. ಶಾಲೆಯಲ್ಲಿ ದೊರೆಯುವ ಶಿಕ್ಷಣ ಎಂತಹದೆಂದು ಎಲ್ಲರಿಗೂ ತಿಳಿದಿದೆ. ಹಳ್ಳಿಮುಕ್ಕರಾದ ಆ ಬಡ ತಾಯಿ-ತಂದೆಯರು ತಮ್ಮ ನತದೃಷ್ಟ ಮಕ್ಕಳಿಗೆ ಯಾವ ಮಾರ್ಗದರ್ಶನ ಮಾಡಬಲ್ಲರು ? ಸಮರ್ಪಕವಾದ ಪೂರ್ವಭಾವಿ ಸಿದ್ಧತೆ ಇಲ್ಲದ, ಯೋಗ್ಯ ಶಿಕ್ಷಣವಿಲ್ಲದ ಆ ನಿಸ್ಸಹಾಯಕ ಬಡತನದ ಮಕ್ಕಳು ಪರೀಕ್ಷೆಗೆ ಬರುತ್ತಾರೆ. ಶೇಕಡ ತೊಂಬತ್ತರಷ್ಟು ಅನುತ್ತೀರ್ಣರಾಗುತ್ತಾರೆ. ನಿರಾಶೆ ಇಡೀ ಕುಟುಂಬವನ್ನು ಆವರಿಸುತ್ತದೆ. ಶಿಕ್ಷಣದಲ್ಲಿ ನಂಬಿಕೆ ಹೋಗುತ್ತದೆ. ಕೈಯಲ್ಲಿದ್ದ ಪುಡಿಗಾಸೂ ಖರ್ಚಾಗಿರುತ್ತದೆ. ವಿದ್ಯಾವಂತರಾಗಲು ತಾವು ಅನರ್ಹರೆಂದು ಹಿಂದೆ ಸರಿಯುತ್ತಾರೆ. ಆದರೆ ನಗರದ ಸಿರಿವಂತರ, ಸುಶಿಕ್ಷಿತರ ಮಕ್ಕಳು ದಿನನಿತ್ಯದ ಹೊಟ್ಟೆ ಬಟ್ಟೆಯ ಯೋಚನೆಯಿಲ್ಲದೆ, ಓದುವುದಕ್ಕಾಗಿಯೇ ಜನ್ಮವೆತ್ತಿರುವವರಂತೆ ಯೋಗ್ಯ ಶಿಕ್ಷಣವನ್ನು ತಮ್ಮ ಮನೆ ಹಾಗೂ ಖಾಸಗಿ ಶಾಲೆಗಳಲ್ಲಿ ಪಡೆಯುತ್ತಾರೆ. ಸಮರ್ಪಕವಾದ ಪೂರ್ವಸಿದ್ಧತೆಗಳೊಡನೆ, ಸಂತೋಷದಿಂದ ಅದೇ ಪರೀಕ್ಷೆಗೆ ಹೋಗುತ್ತಾರೆ. ಉತ್ತಮ ದರ್ಜೆಯಲ್ಲಿ ಪಾಸಾಗುತ್ತಾರೆ. ಉನ್ನತ ವ್ಯಾಸಂಗ ಮಾಡಿ ಇಂಜಿನಿಯರ್, ಡಾಕ್ಟರ್, ಅಧಿಕಾರಿ ಹುದ್ದೆಗಳಲ್ಲಿ ಅಲಂಕರಿಸಿ ಆ ಬಡ ಶ್ರೀಸಾಮಾನ್ಯರ ರಕ್ತ ಹೀರುತ್ತಾರೆ. ಕರುಣೆತೋರುವವರು ಎಲ್ಲೋ ಕೆಲವೇ ಮಂದಿ. ಇದು ಶಿಕ್ಷಣದ ಅಸಂಬದ್ಧತೆ ಅಲ್ಲದೆ ಮತ್ತೇನು ?

ದನಕರುಗಳನ್ನು ಮಾರಿ ಶಾಲಾ ಶುಲ್ಕಗಳನ್ನು ಕಟ್ಟಿ ಮಕ್ಕಳನ್ನು ಶಾಲೆಗಳಿಗೆ ಕಳುಹಿಸಿ, ಕಡೆಗೆ ಆ ಬಡ ಶ್ರಮಜೀವಿಗೆ ಸಿಗುವ ಪ್ರತಿಫಲ ಸೊನ್ನೆ. ಜೀಜವಾಬ್ದಾರಿಯ

ತವರಾದ ಸರ್ಕಾರಿ ಶಾಲೆಗಳಲ್ಲಿ ಮಾತ್ರ ಓದಬೇಕಾಗಿರುವ ಬಡಮಕ್ಕಳು ನಿಜಕ್ಕೂ ಅಸ್ಪೃಷ್ಟರೇನಲ್ಲ. ಸರ್ಕಾರದ ಹಾಗೂ ಶಿಕ್ಷಕರ ನಿರ್ಲಕ್ಷ್ಯ, ಶ್ರಮಜೀವಿಗಳ ಅಜ್ಞಾನ, ಸಿರಿವಂತರ ಸ್ವಾರ್ಥ – ಶ್ರೀಸಾಮಾನ್ಯನು ಸುಶಿಕ್ಷಿತನಾಗಲು, ಸುಖಜೀವನ ನಡೆಸಲು ಅಡ್ಡಿಗಳಾಗಿವೆ. ಸೆಕೆಂಡರಿ ಶಿಕ್ಷಣ ಮಟ್ಟದಲ್ಲಿಯೇ ಬಹುಪಾಲು ನಿರ್ಗತಿಕ ಮಕ್ಕಳು ತಮ್ಮ ವಿದ್ಯಾಭ್ಯಾಸವನ್ನು ಕೊನೆಗಾಣಿಸಿ ಬೀದಿಪಾಲಾಗುತ್ತಾರೆ. ಕಾರಣ, ಅವರಿಗೆ ಆರ್ಥಿಕ ಸಾಮರ್ಥ್ಯವಿಲ್ಲ. ಇಂತಹ ಸ್ಥಿತಿಯಲ್ಲಿ ಅವರು ವಿದ್ಯೆಗಾಗಿ ಹಂಬಲಿಸುವುದರಲ್ಲಿ ಅರ್ಥವಿಲ್ಲ. ಒಂದುವೇಳೆ ಮುಂದುವರಿಸಿದರೆ ಅವರ ಬಡತನದ ಒವೆಣೆ ಇನ್ನೂ ಹೆಚ್ಚಾಗುತ್ತದೆ. ಬದುಕಿನ ಬಗ್ಗೆ ನಿರಾಶೆ ಮೂಡುತ್ತದೆ. ಸ್ವಾರ್ಥ ಶಕ್ತಿಗಳ ಬಗ್ಗೆ, ತಿರಸ್ಕಾರ ದ್ವೇಷ ಹೊಗೆಯಾಡುತ್ತದೆ. ಹಾಗಾದರೆ ಸೆಕೆಂಡರಿ ಶಿಕ್ಷಣದಿಂದ ಸ್ವಾವಲಂಬನಾ ಸಾಮರ್ಥ್ಯ ಸಿದ್ಧಿಸದಿರಲು ಕಾರಣವೇನು ? ಈ ಶಿಕ್ಷಣ ಕ್ರಮದಲ್ಲಿ ದೋಷವಿದೆಯೆ ?

ಇನ್ನು, ಉನ್ನತ ಶಿಕ್ಷಣ ಪಡೆದಂತಹ ಎಂ.ಎ., ಎಂ.ಎಸ್ಸಿ., ಬಿ.ಇ., ಎಂ.ಬಿ.ಬಿ. ಎಸ್., ಪಿ.ಎಚ್‌ಡಿ., ಪದವೀಧರರೂ ನಿರುದ್ಯೋಗ ಸಮಸ್ಯೆಗೆ ಬಲಿಯಾಗಲು ಕಾರಣವೇನು ? ಹೆಚ್ಚುತ್ತಿರುವ ಜನಸಂಖ್ಯೆ, ಅಗತ್ಯ ಮೀರಿ ಹೊರಬರುತ್ತಿರುವ ಪದವೀಧರರು, ಸ್ವತಂತ್ರ ಉದ್ಯಮಗಳಲ್ಲಿ ತೊಡಗಲು ಹಿಂಜರಿಯುವ ಪದವೀಧರರ ಸ್ವಭಾವ, ವೃತ್ತಿ ಗೌರವದ ಬಗ್ಗೆ ಇರುವ ಕಮ್ಮಿ ತಿಳುವಳಿಕೆ, ಪ್ರತಿಷ್ಠೆಯ ಸೊಕ್ಕು, ನಗರ ಜೀವನದ ವ್ಯಾಮೋಹ, ನಿರುದ್ಯೋಗ ಸಮಸ್ಯೆಗೆ ಇರುವ ಕಾರಣಗಳಲ್ಲಿ ಕೆಲವಾಗಿರಬಹುದು.

ಸಾಮಾಜಿಕ ನ್ಯಾಯವನ್ನು ದೊರಕಿಸುವಂತಹ, ನಿರುದ್ಯೋಗ ಸಮಸ್ಯೆಯನ್ನು ಅಳಿಸಿಹಾಕುವಂತಹ, ರಾಷ್ಟ್ರದ ಭಾವೈಕ್ಯತೆಯದ್ನು ಸುಧಾರಿಸುವಂತಹ, "ಎಲ್ಲರ ಸುಖ ಸಾಧನ"ವಾಗುವಂತಹ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಲು ಸಾಧ್ಯವಿಲ್ಲವೆ ? ಖಂಡಿತ ಸಾಧ್ಯವಿದೆ. ಆದರೆ, ಇದಕ್ಕೆ ಸಿರಿವಂತರ, ಸ್ವಾರ್ಥಜೀವಿಗಳ, ಬುದ್ಧಿ ಜೀವಿಗಳ, ಅಧಿಕಾರಿಗಳ, ರಾಜಕಾರಣಿಗಳ ಸಂಕುಚಿತ ಮನೋಭಾವದ ತ್ಯಾಗ ಅನಿವಾರ್ಯ ಅಗತ್ಯವಾಗಿದೆ.

ಶಿಕ್ಷಣ ಇನ್ನು ಮುಂದೆ

ಇಂದಿನ ಜೀವನ ಬಹಳ ತೊಡಕಿನದು, ಕ್ಲಿಷ್ಟವಾದದ್ದು. ಜಗತ್ತು ಕಾಲ ದೇಶಗಳ ದೃಷ್ಟಿಯಲ್ಲಿ ಬಹಳ ಚಿಕ್ಕದಾಗುತ್ತಿದೆ. ಹಳೆ ಸಂಪ್ರದಾಯದ ಜೀವನದ ರೀತಿ-ನೀತಿಗಳು, ವೃತ್ತಿ-ಪ್ರವೃತ್ತಿಗಳು ಉಪಯೋಗಕ್ಕೆ ಬಾರದಾಗುತ್ತಿವೆ. ವಿವಿಧ ರಾಷ್ಟ್ರಗಳ ಜೀವನ ರೀತಿ-ನೀತಿಗಳ ಪ್ರಭಾವ ನಮ್ಮ ಮೇಲೆ ಏಕಕಾಲದಲ್ಲಿ ಆಗುತ್ತಿವೆ. ಆದ್ದರಿಂದ ನಾವಿಂದು ಹಳೆಯದಾದ ಯಾವುದೇ ವ್ಯವಸಾಯ, ಉದ್ಯೋಗ ಪದ್ಧತಿಗಳನ್ನು ಶಿಕ್ಷಣದಲ್ಲಿ ಮುಂದುವರಿಸಲಾಗುವುದಿಲ್ಲ. ಸಮಾಜವು ವಿವಿಧ ಹಂತದ ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯಗಳನ್ನು ಹೊಂದಿರುವ ಯುವಜನರಿಂದ ತುಂಬಿದೆ. ಇವರಿಗೆಲ್ಲಾ ಅನ್ವಯವಾಗುವ ಹೊಸ ಶಿಕ್ಷಣ ವ್ಯವಸ್ಥೆ ಅಗತ್ಯವಾಗಿದೆ. ಇದಕ್ಕಾಗಿ ಅನ್ಯ ರಾಷ್ಟ್ರಗಳ ಮುಂದುವರಿದ ಶಿಕ್ಷಣ ಕ್ರಮಗಳಲ್ಲಿ ನಮಗೆ ಸೂಕ್ತವಾಗುವ ಅಂಶಗಳನ್ನು ಆಯ್ದು

ಕೊಂಡು, ಅವುಗಳ ಜೊತೆಗೆ ನಮ್ಮದೇ ಆದ ಉಪಯುಕ್ತ ಅಂಶಗಳನ್ನು ಸೇರಿಸಬೇಕು. ಅನಂತರ ನಮ್ಮ ಯುವ ಜನಾಂಗದ ದೇಹ-ಮನ-ಬುದ್ಧಿಗಳ ಸಾಮರ್ಥ್ಯಕ್ಕನುಗುಣ ವಾಗುವ ಮತ್ತು ಭವಿಷ್ಯ ಜೀವನಕ್ಕೆ ಆಧಾರವಾಗುವ ಸಮಂಜಸ ಶಿಕ್ಷಣ ಕ್ರಮ ವೊಂದನ್ನು ರೂಪಿಸಬೇಕು. ರಾಷ್ಟ್ರವ್ಯಾಪ್ತ ಈ ಕ್ರಮ ಒಂದೇ ವಿಧವಾಗಿರಬೇಕು. ಇದರಿಂದ ರಾಷ್ಟ್ರವ್ಯಾಪಿ ಸಾಮಾಜಿಕ ನ್ಯಾಯವನ್ನು ದೊರಕಿಸಬಹುದು ; ಶಿಕ್ಷಣದಲ್ಲಾ ಗುತ್ತಿರುವ stagnations ಮತ್ತು ಅಪವ್ಯಯವನ್ನು ಸುಧಾರಿಸಬಹುದು ; ನಿರು ದ್ಯೋಗ ಸಮಸ್ಯೆಯನ್ನು ನಿವಾರಿಸಬಹುದು ; ಸಮಾನತೆಯ ಆಧಾರದ ಸುಖಜೀವನವನ್ನು ನೆಲೆಗೊಳಿಸಬಹುದು ; ಎಲ್ಲಕ್ಕಿಂತಲೂ ರಾಷ್ಟ್ರಮಟ್ಟದ ಭಾವೈಕ್ಯತೆಯನ್ನು ಸಾಧಿಸ ಬಹುದು.

ನಮ್ಮ ಮತ್ತು ನೆರೆರಾಷ್ಟ್ರಗಳಿಂದ ಆಯ್ದುಕೊಳ್ಳಬಹುದಾದ ಉಪಯುಕ್ತ ಶೈಕ್ಷಣಿಕ ಅಂಶಗಳು

1. ಅಮೇರಿಕಾದ ನೈಬರ್‌ಹುಡ್ ಶಿಕ್ಷಣ ವ್ಯವಸ್ಥೆ
2. ರಷ್ಯಾದ ಸ್ಯಾಂಡ್‌ವಿಚ್ ವೃತ್ತಿ ಶಿಕ್ಷಣ ಕ್ರಮ
3. ಮಹಾತ್ಮಗಾಂಧಿಯವರ ಮೂಲ ಶಿಕ್ಷಣ ಕ್ರಮ(Basic Education)

(1) ಅಮೇರಿಕಾದ ನೈಬರ್‌ಹುಡ್ ಶಿಕ್ಷಣ ವ್ಯವಸ್ಥೆ

ಇದು ಪ್ರಜಾಪ್ರಭುತ್ವದ ಮೂಲಭೂತ ತತ್ತ್ವವಾದ ಸಾಮಾಜಿಕ ನ್ಯಾಯದ ಪರಿಪಾಲನೆ, ಸಮಾನತೆಯ ರಕ್ಷಣೆ, ವ್ಯಕ್ತಿ ಸ್ವಾತಂತ್ರ್ಯದ ಮಹತ್ವ ಮತ್ತು ನಿಷ್ಪಕ್ಷಪಾತ ವಾಗಿ ಉತ್ತಮ ಶಿಕ್ಷಣವನ್ನು ಬಡವ-ಬಲಿದರೆಲ್ಲರಿಗೂ ಒಂದೇ ಕಡೆ ದೊರಕಿಸುವ ಯೋಗ್ಯ ಶಿಕ್ಷಣ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯು ಒಂದು ಗೊತ್ತಿರುವ ಭೌಗೋಳಿಕ ಎಲ್ಲೆ ಯನ್ನು ಹೊಂದಿರುವ ಪ್ರದೇಶದ ಮಧ್ಯೆ ಒಂದು ಶಾಲೆಯನ್ನು ಹೊಂದಿರುತ್ತವೆ. ಆ ಭೌಗೋಳಿಕ ಎಲ್ಲೆಯ ಒಳಗೆ ವಾಸಿಸುವ ಎಲ್ಲಾ ಜನರು (ಬಡವ-ಬಲ್ಲಿದ, ನಾಗರಿಕ-. ಅನಾಗರಿಕ, ಇತ್ಯಾದಿ) ತಮ್ಮ ಮಕ್ಕಳನ್ನು ಆ ಶಾಲೆಗೆ ವಿದ್ಯಾಭ್ಯಾಸಕ್ಕೆ ಕಳುಹಿಸಬೇಕು. ಯಾವ ಕಾರಣಕ್ಕೂ ಆ ಎಲ್ಲೆಯಿಂದ ಹೊರಗಿರುವ ಅಂತಹುವೇ ಮತ್ತೊಂದು ಶಾಲೆಗೆ ಕಳುಹಿಸಲಾಗದು. ಇಂತಹ ಶಾಲೆಗಳು ಜನಸಾಂದ್ರತೆಗನುಗುಣವಾಗಿ ದೇಶದಾದ್ಯಂತ ವ್ಯವಸ್ಥೆಗೊಳಿಸಲ್ಪಟ್ಟಿರುತ್ತವೆ. ಸರ್ಕಾರ ಹೆಚ್ಚಾಗಿ ಮತ್ತು ಸ್ಥಳೀಯ ಜನತೆ ಆ ಶಾಲೆಯ ಅವಶ್ಯಕತೆಗಳನ್ನು ಪ್ರಶಂಸನೀಯವಾಗಿ ಪೂರೈಸುತ್ತವೆ. ಯೋಗ್ಯ ಹಾಗೂ ಸಮರ್ಥ ಶಿಕ್ಷಕರು, ಅನುಭವಿ ವ್ಯವಸ್ಥಾಪಕ ವರ್ಗ, ಉತ್ತಮ ಶಿಕ್ಷಣ ಸಾಮಗ್ರಿಗಳು, ಜೀವನೋ ಪಯುಕ್ತ ಪಠ್ಯ ವಿಷಯಗಳು, ಮಾನವೀಯತೆಯನ್ನು ಪ್ರತಿಬಿಂಬಿಸುವ ನೀತಿ-ನಿಯಮಾ ವಳಿಗಳು ಆ ಶಾಲೆಯ ಆಧಾರ ಸ್ತಂಭಗಳು. ಖಾಸಗಿ ಶಾಲೆಗಳಿಗೆ ಅವಕಾಶವಿರುವುದಿಲ್ಲ.

(2) **ರಷ್ಯದ ಸ್ಯಾಂಡ್‌ವಿಚ್ ವೃತ್ತಿ ಶಿಕ್ಷಣ ಕ್ರಮ :**

ಇದು ಮಕ್ಕಳ ಮನೋಭಾವನೆ ಹಾಗೂ ದೈಹಿಕ ಸಾಮರ್ಥ್ಯಗಳಿಗೆ ಸೂಕ್ತವಾಗುವ ವಿವಿಧ ವೃತ್ತಿಗಳನ್ನು ಕಲಿಸುವ ಶಿಕ್ಷಣ ಕ್ರಮವಾಗಿದೆ. ಸೆಕೆಂಡರಿ ಹಂತದ ಶಿಕ್ಷಣವನ್ನು ಮುಗಿಸುತ್ತಿದ್ದಂತೆಯೇ ಸ್ವಾವಲಂಬಿ ಜೀವನಕ್ಕೆ ಆ ವೃತ್ತಿ ಶಿಕ್ಷಣವು ನೆರವಿಗೆ ಬರುತ್ತದೆ. ವೃತ್ತಿಗಳ ಆಯ್ಕೆ ಪೂರ್ಣವಾಗಿ ವಿದ್ಯಾರ್ಥಿಗಳ ಆಸಕ್ತಿಗನುಗುಣವಾಗಿ ನಡೆಯುತ್ತದೆ.

(3) **ಮಹಾತ್ಮ ಗಾಂಧೀಜಿಯವರ ಮೂಲ ಶಿಕ್ಷಣ ಕ್ರಮ :**

ಇದು ಬಹುಪಾಲು ಸ್ಯಾಂಡ್‌ವಿಚ್ ವೃತ್ತಿ ಶಿಕ್ಷಣ ಕ್ರಮವನ್ನೇ ಹೋಲುತ್ತದೆ. ಆದರೆ ಈ ಮೂಲ ಶಿಕ್ಷಣವು (Basic Education) ಭಾರತೀಯ ಜೀವನದ ಪರಿಸರಕ್ಕೆ ತಕ್ಕದಾಗಿರುತ್ತದೆ. ಇದರ ವಿಶೇಷವೇನೆಂದರೆ ಒಂದು ವೃತ್ತಿಯನ್ನು ಕಲಿಯುವಾಗಲೆ ಅದಕ್ಕೆ ಸಂಬಂಧಿಸಿದ ಚರಿತ್ರೆ, ಭೂಗೋಳ, ಗಣಿತ, ವಿಜ್ಞಾನ, ನೀತಿ-ನಿಯಮಗಳ ಜ್ಞಾನವನ್ನು ಗಳಿಸಬಹುದಾಗಿದೆ.

ನೂತನ ಶಿಕ್ಷಣದ ಅವಧಿ, ಪಠ್ಯ ವಿಷಯಗಳು ಮತ್ತು ಪರೀಕ್ಷಾ ಕ್ರಮ

ಶಿಕ್ಷಣದ ಅವಧಿಯು ಹತ್ತು+ಎರಡು ಮತ್ತು ಐದು ವರ್ಷಗಳನ್ನು ಹೊಂದಿರುತ್ತದೆ. ಮೊದಲಿನ ಹತ್ತು ವರ್ಷಗಳ ಅವಧಿಯನ್ನು ಸೆಕೆಂಡರಿ ಶಿಕ್ಷಣವೆಂತಲೂ ನಂತರದ ಎರಡು ವರ್ಷಗಳನ್ನು ಪಾಲಿಟೆಕ್ನಿಕ್ ಶಿಕ್ಷಣವೆಂತಲೂ, ಮತ್ತು ಐದು ವರ್ಷದ ಅವಧಿಯನ್ನು ವಿಶ್ವವಿದ್ಯಾನಿಲಯದ ಶಿಕ್ಷಣವೆಂತಲೂ ಕರೆಯಬಹುದು. ಸೆಕೆಂಡರಿ ಶಿಕ್ಷಣದ ನಂತರ ಆಸಕ್ತಿ, ಪ್ರತಿಭೆ ಹಾಗೂ ಸಾಮರ್ಥ್ಯಗಳಿಗನುಸಾರವಾಗಿ ಎರಡು ವರ್ಷದ ಪಾಲಿಟೆಕ್ನಿಕ್ ವೃತ್ತಿ ಶಿಕ್ಷಣವನ್ನು ಅಥವಾ ಐದು ವರ್ಷದ ಉನ್ನತ ಶಿಕ್ಷಣವನ್ನು ಆಯ್ದುಕೊಳ್ಳಬಹುದು. ಈ ಉನ್ನತ ಶಿಕ್ಷಣವು ವಿಶೇಷವಾಗಿ ಸಂಶೋಧನಾ ಪ್ರಧಾನವಾಗಿರುತ್ತದೆ.

ಪಠ್ಯವಿಷಯ

ಸೆಕೆಂಡರಿ ಶಿಕ್ಷಣದ ಮೊದಲಿನ ನಾಲ್ಕು ವರ್ಷಗಳಲ್ಲಿ ಮಾತೃಭಾಷೆ, ಸಾಮಾನ್ಯ ಗಣಿತ ಮತ್ತು ಸ್ಥಳೀಯ ಚರಿತ್ರೆ, ಭೂಗೋಳ ವಿಷಯಗಳನ್ನು ನೈತಿಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕಲಿಸಲಾಗುತ್ತದೆ. ನಂತರದ ಮೂರು ವರ್ಷಗಳಲ್ಲಿ ಮಾತೃಭಾಷೆಯ ಜೊತೆಗೆ ರಾಷ್ಟ್ರ ಭಾಷೆ (ಮುಂದೆ ನಿರ್ಧಾರವಾಗಬಹುದಾದದ್ದು), ಮುಂದುವರಿದ ಗಣಿತ, ಮೂಲ ವಿಜ್ಞಾನ ಮತ್ತು ಮೂಲ ಮಾನಸಿಕ ಶಾಸ್ತ್ರಗಳ ಪರಿಚಯ ಮಾಡಿಸಲಾಗುತ್ತದೆ. ಎಂಟನೆಯ ತರಗತಿಯಲ್ಲಿ ಹಿಂದಿನ ಪಠ್ಯವಿಷಯಗಳ ಜೊತೆಗೆ ವೃತ್ತಿ ಶಿಕ್ಷಣದ ಪರಿಚಯ ಮಾಡಿಸುವುದರ ಮೂಲಕ ಮಕ್ಕಳಲ್ಲಿ ಕೈ ಕೆಲಸಗಳ ಬಗ್ಗೆ

ಆಸಕ್ತಿ ಕೆರಳಿಸಲಾಗುತ್ತದೆ. ಇದಕ್ಕಾಗಿ ವ್ಯವಸಾಯ ಹಾಗೂ ತೋಟಗಾರಿಕೆ; ಕುರಿ-ಕೋಳಿ-ಹಸು ಹಾಗೂ ಜೇನು ಸಾಕುವಿಕೆ; ಹೊಲಿಗೆ ಹಾಗೂ ಗೃಹಾಲಂಕಾರ; ಲಲಿತ ಕಲೆಗಳಾದ ಸಂಗೀತ, ನೃತ್ಯ, ನಾಟಕ, ಚಿತ್ರ, ಶಿಲ್ಪ ಮುಂತಾದವು; ಮರಗೆಲಸ; ಪಿಂಗಾಣಿ ಸಾಮಾನುಗಳ ತಯಾರಿಕೆ; ಚಿತ್ತಾರದ ಕೆಲಸ; ಗೃಹೋಪಯೋಗಿ ಎಲೆಕ್ಟ್ರಿಕಲ್ ಹಾಗೂ ರೇಡಿಯೋ ರಿಪೇರಿ; ಮೆಕಾನಿಕಲ್ ಹಾಗೂ ಆಟೋಮೋಬೈಲ್ ರಿಪೇರಿ; ಡ್ರೈವಿಂಗ್; ವಾಚ್ ರಿಪೇರಿ; ಟೈಪಿಂಗ್ ಹಾಗೂ ಮುದ್ರಣ ಸಂಬಂಧ ಕೆಲಸಗಳು; ಬ್ಯಾಂಕಿಂಗ್ ಹಾಗೂ ಮಾರ್ಕೆಟಿಂಗ್ ಮುಂತಾದ ಇನ್ನೂ ಅನೇಕ ವೃತ್ತಿ ಶಿಕ್ಷಣ ಸಂಬಂಧ ವಿಷಯಗಳನ್ನು ಹಣದ ವೆಚ್ಚವನ್ನು ಗಮನಿಸದೆ ಪರಿಚಯ ಮಾಡಿಸಬೇಕು. ಈ ಒಂದು ವರ್ಷದ ಪರಿಚಯದಲ್ಲಿ ವಿದ್ಯಾರ್ಥಿಯು ತನಗೆ ಸೂಕ್ತವಾದ ವೃತ್ತಿಯನ್ನು ಆಯ್ದುಕೊಳ್ಳಲು ಸಮರ್ಥನಾಗುತ್ತಾನೆ.

ಕೊನೆಯ ಎರಡು ವರ್ಷದ ಶಿಕ್ಷಣದ ಅವಧಿಯಲ್ಲಿ ವಿದ್ಯಾರ್ಥಿಯು ತಾನು ಆಯ್ದುಕೊಂಡ ವೃತ್ತಿಯಲ್ಲಿ ಸಾಕಷ್ಟು ಉತ್ತಮ ತರಬೇತಿಯನ್ನು ಹೊಂದುತ್ತಾನೆ. ಈ ಎರಡು ವರ್ಷದ ವೃತ್ತಿ ಶಿಕ್ಷಣವು ಅವನ ಭವಿಷ್ಯದ ಸ್ವಾವಲಂಬನ ಜೀವನಕ್ಕೆ ಭದ್ರ ಬುನಾದಿಯಾಗಿರುತ್ತದೆ.

ಹೀಗೆ ಸೆಕೆಂಡರಿ ಶಿಕ್ಷಣವನ್ನು ಮುಗಿಸಿ ಹೊರಬರುವ ಎಲ್ಲ ವಿದ್ಯಾರ್ಥಿಗಳು ಮಾತೃಭಾಷೆ ಮತ್ತು ರಾಷ್ಟ್ರಭಾಷೆಯಲ್ಲಿ ಮಾತಾಡಲು, ಓದಲು ಹಾಗೂ ಬರೆಯಲು ಸಮರ್ಥರಾಗಿರುತ್ತಾರೆ. ಜೊತೆಗೆ ಮೂಲ ಮಾನವಿಕಶಾಸ್ತ್ರ, ಗಣಿತ ಹಾಗೂ ಮೂಲ ವಿಜ್ಞಾನದ ಸಾಕಷ್ಟು ಪರಿಚಯವನ್ನು ಹೊಂದಿರುತ್ತಾರೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಯಾವುದಾದರೂ ಒಂದು ವೃತ್ತಿಯಲ್ಲಿ ಸಾಕಷ್ಟು ಪ್ರಾವಿಣ್ಯತೆಯನ್ನು ಹೊಂದಿದ್ದು ಸ್ವತಂತ್ರವಾಗಿ ಬದುಕಲು ಸಮರ್ಥರಾಗಿರುತ್ತಾರೆ. ಈ ಸ್ವಾವಲಂಬನ ಜೀವನವನ್ನು ನಡೆಸುವ ಸಾಮರ್ಥ್ಯವು ನಿರುದ್ಯೋಗ ಸಮಸ್ಯೆಯನ್ನು ನಿರ್ಮೂಲ ಮಾಡುವಲ್ಲಿ ನೆರವಾಗುತ್ತದೆ. ಇದಕ್ಕೆ ಇಂದಿನ ರಷ್ಯಾ ದೇಶದ ಶಿಕ್ಷಣ ಕ್ರಮವು ಜೀವಂತ ಸಾಕ್ಷಿ.

ನಿಜವಾದ ಆಸಕ್ತಿ ಇರುವವರಿಗೆ ಮಾತ್ರ ಐದು ವರ್ಷದ ಕಾಲೇಜಿನ ಉನ್ನತ ಶಿಕ್ಷಣದ ಅವಕಾಶವಿರುತ್ತದೆ. ಇದಕ್ಕೆ ಅರ್ಹತೆ ಇಲ್ಲದವರು ಎರಡು ವರ್ಷದ ಪಾಲಿಟೆಕ್ನಿಕ್ ಶಿಕ್ಷಣವನ್ನು ಪಡೆಯಬಹುದು. ಇಲ್ಲಿನ ಪಠ್ಯ ವಿಷಯವು ಸೆಕೆಂಡರಿ ಮಟ್ಟದ ವೃತ್ತಿ ಶಿಕ್ಷಣದ ಮುಂದುವರಿಕೆಯೇ ಆಗಿದ್ದು, ಇನ್ನೂ ಜಟಿಲವಾದ ಮತ್ತು ಮುಂದುವರಿದ (Advanced) ತರಬೇತಿಯನ್ನು ಕೊಡುವಂತಹುದಾಗಿರುತ್ತದೆ. ಸೂಕ್ತ ಅರ್ಹತೆಗಳೊಡನೆ ಪಾಲಿಟೆಕ್ನಿಕ್ ಶಿಕ್ಷಣ ಮುಗಿಸಿದವರು ಕಾಲೇಜು ಶಿಕ್ಷಣವನ್ನು ಹೊಂದಬಹುದು. ಪಾಲಿಟೆಕ್ನಿಕ್ ಮಟ್ಟದಲ್ಲಿ ಎರಡು ವರ್ಷದ ಪ್ರಾಥಮಿಕ ಶಿಕ್ಷಕ ವೃತ್ತಿಗೆ ಸಂಬಂಧಿಸಿದ ಶಿಕ್ಷಣವೂ ಇರುತ್ತದೆ. ಇಲ್ಲಿಂದ ಮುಂದೆ ಆಸಕ್ತಿ ಇರುವವರಿಗೆ ಆಂಗ್ಲ ಭಾಷೆಯನ್ನು ಕಲಿಸಲಾಗುತ್ತದೆ.

ಪರೀಕ್ಷಾ ಪದ್ಧತಿ

ಅಂಕಗಳ ಆಧಾರದ ಪರೀಕ್ಷಾ ಪದ್ಧತಿ ಇರುವುದಿಲ್ಲ. ವೃತ್ತಿ ಪ್ರಾವೀಣ್ಯತೆಯ ಬಗ್ಗೆ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸುವುದರ ಮೂಲಕ ವಿದ್ಯಾರ್ಥಿಯ ಜ್ಞಾನ ವನ್ನು ನಿರ್ಧರಿಸುವರು. ಸೆಕೆಂಡರಿ, ಪಾಲಿಟೆಕ್ನಿಕ್ ಮತ್ತು ಕಾಲೇಜಿನ ಶಿಕ್ಷಣವು ಮುಗಿ ಯುವುದಕ್ಕೆ ಕೇವಲ ಸರ್ಟಿಫಿಕೇಟುಗಳನ್ನು ಮಾತ್ರ ಕೊಡಲಾಗುತ್ತದೆ. ಸೆಕೆಂಡರಿ ಶಿಕ್ಷಣದ ನಂತರದ ಮುಂದಿನ ಉನ್ನತ ಶಿಕ್ಷಣಗಳಿಗೆ ಸೇರುವವರು ಕ್ಲಿಷ್ಟವಾದ ಪ್ರಾಯೋಗಿಕ ಪರೀಕ್ಷೆಗಳಿಗೆ ಒಳಗಾಗಬೇಕಾಗುತ್ತದೆ. ಪ್ರತಿಭೆ, ಆಸಕ್ತಿ, ಸಾಮರ್ಥ್ಯ ಗಳಿರುವುದು ಕಂಡು ಬಂದರೆ ಮುಂದಿನ ಶಿಕ್ಷಣಕ್ಕೆ ಅವಕಾಶ. ಇಲ್ಲಿ ಅನುತ್ತೀರ್ಣರಾದ ವರಿಗೆ ಜೀವನಕ್ಕೇನೂ ತೊಂದರೆಯಾಗುವುದಿಲ್ಲ. ಮನಸ್ಸಿದ್ದರೆ ಸಾಮರ್ಥ್ಯವನ್ನು ಗಳಿಸಿ ಉನ್ನತ ವಿದ್ಯಾಭ್ಯಾಸವನ್ನು ಹೊಂದಬಹುದು.

ಅನಂತರದ ಐದು ವರ್ಷಗಳ ಕಾಲೇಜಿನ ಉನ್ನತ ಶಿಕ್ಷಣವು ಸಮಕಾಲೀನ ಮಾನವ ಸಂಬಂಧಗಳು ಹಾಗೂ ಜೀವನಾವಶ್ಯಕ ವಸ್ತುಗಳ ಸಮಸ್ಯೆಗಳು—ಮಾನವಿಕ, ವೈಜ್ಞಾನಿಕ ಹಾಗೂ ತಾಂತ್ರಿಕ ಅಂಗಗಳಾಗಿ ವಿಂಗಡಿಸಲ್ಪಟ್ಟಿರುತ್ತವೆ. ಈ ಶಿಕ್ಷಣವು ಸಂಶೋಧನಾತ್ಮಕ ಅಧ್ಯಯನವನ್ನು ನಡೆಸುವುದರ ಮೂಲಕ ಬದುಕಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಮಾರ್ಗದಲ್ಲಿ ಮುನ್ನಡೆಯುತ್ತದೆ. ಸಾಮಾನ್ಯವಾಗಿ ಈ ಉನ್ನತ ಶಿಕ್ಷಣಕ್ಕೆ ಬರುವವರು ಕಡಿಮೆ ಜನರಾದರೂ ಪ್ರತಿಭಾಸಂಪನ್ನರೂ, ನಿಷ್ಠೆ ಯಿಂದ ದುಡಿಯುವವರೂ, ಸೃಜನಾತ್ಮಕ ಬುದ್ಧಿಶಾಲಿಗಳೂ, ಸಮಾಜದ ಸುಖ-ಶಾಂತಿಯ ಬಗ್ಗೆ ಕಳಕಳಿ ಇರುವವರೂ ಆಗಿರುತ್ತಾರೆ. (ಈ ಗುಣ ಲಕ್ಷಣಗಳನ್ನು ಪ್ರವೇಶ ಪರೀಕ್ಷೆಗಳಲ್ಲಿಯೇ ಗುರುತಿಸಿರುತ್ತಾರೆ.) ಇವರು ರಾಷ್ಟ್ರದ ಸರ್ವತೋಮುಖ ಏಳ್ಗೆಗೆ ಸ್ವತಃ ದುಡಿಯುವವರಾಗಿಯೂ, ಕಿರಿಯರಿಗೆ ಸಮರ್ಥ ಮಾರ್ಗದರ್ಶಕ ರಾಗಿಯೂ ಇದ್ದುಕೊಂಡು ರಾಷ್ಟ್ರದ ಭಾವೈಕ್ಯತೆ ಹಾಗೂ ಸುಖಸಾಧನೆಗೆ ಒಗ್ಗಟ್ಟಾಗಿ ಶ್ರಮಿಸುತ್ತಾರೆ.

ಕೊನೆಯ ಮಾತು

ಸಾಮಾಜಿಕ ನ್ಯಾಯ, ಸರ್ವರ ಸುಖಸಾಧನೆ, ಮಾನವೀಯ ಮೌಲ್ಯಗಳಾದ—ದಯೆ, ಕ್ಷಮೆ, ಪ್ರೇಮ, ತ್ಯಾಗ—ಮುಂತಾದುವುಗಳನ್ನು ಉಳಿಸಿ, ಬೆಳೆಸಬೇಕೆಂಬ ಹಂಬಲವುಳ್ಳ ಯಾವುದೇ ರಾಷ್ಟ್ರವು ಪ್ರಜಾಪ್ರಭುತ್ವ ತತ್ತ್ವಗಳಿಗೆ ಬದ್ಧವಾದ ಏಕರೂಪ ಶಿಕ್ಷಣ ವ್ಯವಸ್ಥೆಯನ್ನು ಹೊಂದಿರಬೇಕು. ವ್ಯಕ್ತಿಯ ಪ್ರತಿಭೆ, ಆಸಕ್ತಿ ಮತ್ತು ಸಾಮರ್ಥ್ಯಗಳಿಗನುಸಾರವಾಗಿ ಕಲಿಯುವ ಮತ್ತು ಸಂಪಾದಿಸುವ ಅವಕಾಶಗಳನ್ನು ಕೊಡಬೇಕು. ಎಲ್ಲ ಹಂತದಲ್ಲಿಯೂ ಶಿಕ್ಷಣವು ಪುಕ್ಕಟೆಯಾಗಿ ದೊರೆಯಬೇಕು. ಮಾನವೀಯತೆಯನ್ನೇ ನಿರ್ಮೂಲನಮಾಡುವ ಯುದ್ಧ ಸಂಬಂಧಿ ಮಾರಕಾಸ್ತ್ರ

ಗಳಿಗ ಚಲ್ಲುವ ಅಪಾರ ಹಣವನ್ನು ಮಾನವೀಯತೆಯನ್ನು ಉಳಿಸಿ ಬೆಳೆಸುವ ಶಿಕ್ಷಣಕ್ಕೆ ವಿನಿಯೋಗಿಸಬೇಕು. "ಯುದ್ಧ ಮಾನವೀಯತೆಯನ್ನು ಅಳಿಸುತ್ತದೆ: ಶಿಕ್ಷಣ ಮಾನವೀಯತೆಯನ್ನು ಉಳಿಸುತ್ತದೆ". ಧನ ಪಿಶಾಚಿ ರೂಪದ ಖಾಸಗಿ ಶಿಕ್ಷಣ ಸಂಸ್ಥೆಗಳು ಇರಬಾರದು. ಸ್ವಾರ್ಥತೆ, ಜಾತೀಯತೆ, ಹೊಲಸು ರಾಜಕೀಯ, ಪಕ್ಷಪಾತದ ಶಿಕ್ಷಣದ ಪರಿಸರದಲ್ಲಿ ಇರಬಾರದು. ಶಿಕ್ಷಣದ ಪ್ರಪಂಚದ ನೀತಿ-ನಿಯಮಗಳು ಮಾನವೀಯತೆಯ ರಕ್ಷಣೆಗಾಗಿ ಇರಬೇಕು. ಶಿಕ್ಷಣ ಹಾಗೂ ಶಿಕ್ಷಣದ ಫಲ ಜೀವನದ ಸಮಸ್ಯೆಗಳಿಗೆ ಪರಿಹಾರವಾಗಬೇಕು. ಈ ಪರಿಹಾರಗಳು ಮೊದಲು ಶ್ರೀ ಸಾಮಾನ್ಯನನ್ನು ಮುಟ್ಟಬೇಕು. ರಸ್ಕಿನರ 'Unto The Last' (ಸರ್ವೋದಯ) ಎಂಬ ತತ್ತ್ವ ಶಿಕ್ಷಣದ ಮುಖ್ಯ ಗುರಿಗಳಲ್ಲಿ ಒಂದಾಗಿರಬೇಕು. ಮಹಾತ್ಮ ಗಾಂಧೀಜಿಯವರ ಮೂಲಭೂತ ಶಿಕ್ಷಣ ತತ್ತ್ವ ಹಾಗೂ ಉಪನಿಷತ್ತುಗಳ ನೀತಿ ತತ್ತ್ವಗಳು ಶಿಕ್ಷಣದ ಹಾಸುಹೊಕ್ಕಾಗಬೇಕು.

ಮಾನವತೆಯ ಆಧಾರವಾದ ಶ್ರಮಜೀವಿ ರೈತನ ಜೀವನವನ್ನು ಆರ್ಥಿಕವಾಗಿ ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಸುಧಾರಿಸಲು ಶಿಕ್ಷಣ ವ್ಯವಸ್ಥೆಯು ಸೋತಾಗ ಸಮಾಜದ ನಾಶ ಹತ್ತಿರವಾಗುತ್ತದೆ. ರೈತ, ಕೂಲಿಗಾರ ಮುಂತಾದ ಶ್ರಮಜೀವಿಗಳು ಶಿಕ್ಷಣ ಹಾಗೂ ಅದರ ಫಲಗಳಿಂದ ವಂಚಿತರಾಗಿ, ಸ್ವಾರ್ಥಿಗಳ ಶೋಷಣೆಗೆ ಒಳಗಾಗಿ ನರಳುತ್ತಲೇ ಇರುವುದು ಯಾರಿಗೂ ಒಳ್ಳೆಯದಲ್ಲ, ಆ ಶ್ರಮಜೀವಿಗಳೆಲ್ಲರೂ ಎಚ್ಚೆತ್ತು ಒಂದಾದಾಗ ಸರ್ವನಾಶವಾಗುತ್ತದೆ. ಇಂತಹ 'ಅಳಿವು-ಉಳಿವಿನ' ಸಂದಿಗ್ಧ ಸಮಯದಲ್ಲಿ ಮುಖ್ಯವಾಗಿ ಶಿಕ್ಷಣದ ಸೂತ್ರವನ್ನು ಹಿಡಿದಿರುವವರ ಜವಾಬ್ದಾರಿ ಬೇರೆಲ್ಲರಿಗಿಂತಲೂ ಗುರುತ್ತರವಾದದ್ದು. ಅವರು ತಮ್ಮ ಸ್ವಾರ್ಥವನ್ನು ಮರೆತು "ಲೋಕಹಿತದಲ್ಲಿ ತಮ್ಮ ಹಿತವೂ ಇದೆ"—ಎಂಬ ಸತ್ಯವನ್ನು ಬಹಳ ಬೇಗನೆ ಅರಿತುಕೊಳ್ಳಬೇಕಾಗಿದೆ. ಇವರು ಬಡವ-ಬಲ್ಲಿದ, ಜ್ಞಾನಿ-ಅಜ್ಞಾನಿ, ನಾಗರಿಕ-ಅನಾಗರಿಕ, ಎಂಬ ನೋವನ್ನುಂಟುಮಾಡುವ ಜೀವನ ದ್ವಂದ್ವಗಳನ್ನು ಅಳಿಸಿಹಾಕಲು ಶ್ರೀಸಾಮಾನ್ಯನನ್ನು ಸುಶಿಕ್ಷಣದ ಮೂಲಕ ಜಾಗೃತಗೊಳಿಸಬೇಕಾಗಿದೆ. ಈ ಜಾಗೃತಿ ಕಾರ್ಯವು ಪೂರ್ಣಗೊಳ್ಳುತ್ತಿದ್ದಂತೆಯೇ ಲಂಚಕೋರ ಅಧಿಕಾರಿಗಳ ದುರಾಶೆಕೋರ ವ್ಯಾಪಾರಿಗಳ ಮತ್ತು ಸ್ವಾರ್ಥರಾಜಕಾರಣಿಗಳ ನಾಶವು ಪೂರ್ಣವಾಗುತ್ತದೆ. ಸಮಾನತೆ, ಸಾಮರಸ್ಯ, ಮಾನವೀಯತೆಗಳೆಂಬ ನೈತಿಕ ಮೌಲ್ಯಗಳ ಆಧಾರದ ಮೇಲೆ ನ್ಯಾಯ, ನಿಷ್ಠೆ, ಧರ್ಮಗಳಿಂದ ಕೂಡಿದ ಮಾನವರ ಸಹಬಾಳ್ವೆ ಸಾಧ್ಯವಾಗುತ್ತದೆ.

ಆದ್ದರಿಂದ, ಇನ್ನು ಮುಂದಿನ ಶಿಕ್ಷಣವು ವಿಭಿನ್ನ ಮನೋಭಾವನೆಯ ಜನತೆಯನ್ನು ಒಂದುಗೂಡಿಸಿ, ಸುಖ-ಶಾಂತಿ-ಸಮಾಧಾನಗಳಿಂದ ಬದುಕುವ ಸಾಧನವಾಗಬೇಕು. ಒಂದು ವೇಳೆ ಶಿಕ್ಷಣವು ತನ್ನ ಪವಿತ್ರ ಕರ್ತವ್ಯವನ್ನು ಮರೆತರೆ ಮಾನವ ಜೀವನ ಸ್ವಾರ್ಥದ ಕಾಡ್ಗಿಚ್ಚಿಗೆ ಸಿಕ್ಕಿ ಭಸ್ಮವಾಗುತ್ತದೆ. ಹೀಗಾಗದಿರಲಿ—"ಎಲ್ಲರೂ ಎಲ್ಲರಿಗಾಗಿ ಬದುಕಲಿ, ಎಲ್ಲರೂ ನೆಮ್ಮದಿಯಿಂದಿರಲಿ" ಎಂದು ಎಲ್ಲರೂ ಹಾರೈಸೋಣ.


ಮೂಲ : ಎಸ್. ಎಸ್. ರಾಘವಾಚಾರ್
ಅನುವಾದ : ಪಿ. ಸೇತೂಬಾಯಿ

ದ್ವೈತ ವೇದಾಂತ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಸತ್ತಾ ಮೀಮಾಂಸೆ

ಪ್ರಮೇಯ ತತ್ತ್ವ ಸೋಪಾನ



ದ್ವೈತದ ಜ್ಞಾನಮೀಮಾಂಸೆಯು, ಅಂತರ್ಗತವಾಗಿರುವ ಸತ್ತಾಮೀಮಾಂಸೆಯನ್ನು ತಕ್ಕಮಟ್ಟಿಗೆ ಪರಿಚಯಮಾಡಿಕೊಟ್ಟಿವೆ. ಆದರೂ ಈ ಕೇಂದ್ರಿಯ ಸಾರಭೂತ ಭಾಗವನ್ನು ನೇರವಾಗಿಯೇ ಗಮನಿಸಬೇಕಾದುದು ಅವಶ್ಯಕ.

ತತ್ತ್ವಸೋಪಾನದಲ್ಲಿ ಎರಡು ರೀತಿಯ ಗಣನೆ ಇವೆ. ಮುಂದೆ ಬಂದ ಸಂಪ್ರದಾಯದಲ್ಲಿ ಹತ್ತು ಪದಾರ್ಥಗಳನ್ನು ಪಟ್ಟಿಮಾಡಲಾಗಿದೆ. ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಾದೃಶ್ಯ, ಶಕ್ತಿ, ಅಂಶಿ, ವಿಶಿಷ್ಟ, ಅಭಾವ ಎಂಬುವೇ ಅವು : ಶ್ರೀಮನ್ಮಧ್ವರು ತಮ್ಮ 'ತತ್ತ್ವ ಸಂಖ್ಯಾನ' ಮತ್ತು 'ತತ್ತ್ವವಿವೇಕ' ಎಂಬ ಗ್ರಂಥಗಳಲ್ಲಿ ಒಂದು ವೃಕ್ಷವನ್ನು ಮೇಲೆ ತೋರಿಸಿರುವಂತೆ, ಕೊಟ್ಟಿದ್ದಾರೆ.

ಎರಡು ಪಟ್ಟಿಗಳೂ ಸೇರಿ ದ್ವೈತ ಸತ್ತ್ವಮೀಮಾಂಸೆಯನ್ನು ಪೂರ್ಣವಾಗಿ ನಿರೂಪಿಸುತ್ತವೆ. ಮೊದಲನೆಯ ಪಟ್ಟಿ ನ್ಯಾಯವೈಶೇಷಿಕ ಸಿದ್ಧಾಂತಕ್ಕೆ ಅನುರೂಪವಾದುದು. ಎರಡನೆಯದು ದ್ವೈತ ಸಿದ್ಧಾಂತದ ಅಧ್ಯಾತ್ಮಿಕ ನಿಲುವನ್ನು ವಿಶದಪಡಿಸುತ್ತದೆ. ಈ ಪಟ್ಟಿಯಲ್ಲಿ ಕೊಟ್ಟಿರುವುದನ್ನು ಪ್ರಕೃತಿ, ಜೀವ, ಬ್ರಹ್ಮ ಎಂಬ ಮೂರು ತತ್ತ್ವಗಳ ಕೆಳಗೆ ಫಲಪ್ರದವಾಗಿ ಪ್ರತಿಪಾದಿಸಬಹುದೆಂದು ವೇದ್ಯವಾಗಿರುತ್ತದೆ. ಮೊದಲನೆಯ ಪಟ್ಟಿಯ ದ್ರವ್ಯ ಪದಾರ್ಥಗಳನ್ನು ಆವಶ್ಯಕವಾದಾಗ ಸೂಕ್ತವಾಗಿ ತಂದುಕೊಳ್ಳಬಹುದು.

A ಪ್ರಕೃತಿಯನ್ನು ಪರಿಶೀಲಿಸುವಾಗ, ಎರಡು ಮೂಲಭೂತ ಹೇಳಿಕೆಗಳನ್ನು ಅದರ ತಾತ್ವಿಕ ಸ್ಥಾನಮಾನಗಳನ್ನು ನಿರ್ದಿಷ್ಟಪಡಿಸುವುದಕ್ಕಾಗಿ ಪರಿಗಣಿಸಬೇಕು. ಭೌತಿಕ ಪ್ರಪಂಚವು ಸತ್ಯವಾದುದು ಮತ್ತು ಅದು ಜ್ಞಾತೃವಿನ ಕಲ್ಪನಾರೂಪ ಸೃಷ್ಟಿಯಲ್ಲ ಅಥವಾ ಭ್ರಾಂತಿಯಲ್ಲ. ಭ್ರಾಂತಿಯಾದುದೆಲ್ಲವೂ ಒಂದು ಅಧಿಷ್ಠಾನ ಮತ್ತು ಅದಕ್ಕೆ ಸದೃಶವಾದ ಮತ್ತೊಂದು ಸತ್ಯವಸ್ತುವನ್ನು ಪೂರ್ವ ಕಲ್ಪನೆಯಾಗಿಟ್ಟುಕೊಳ್ಳಬೇಕು. ಈ ಸಾದೃಶ್ಯದ ಆಧಾರದಮೇಲೆ ಯಾವುದು ಅಸ್ತಿತ್ವ ರಹಿತವಾದುದೋ ಅದನ್ನು ಅಧಿಷ್ಠಾನದ ಮೇಲೆ ಇಡಲಾಗುತ್ತದೆ. ನಮ್ಮ ಜಗತ್ತು ಅಸತ್ಯವಾಗಿರಬೇಕಾದರೆ ಮತ್ತೊಂದು ಸತ್ಯವಾದ ಜಗತ್ತಿರಬೇಕು. ಅಧಿಷ್ಠಾನದ ಸ್ಥಾನದಲ್ಲಿ, ಸಾದೃಶ್ಯದ ಪ್ರಕಾರ, ಅಸತ್ಯ ಜಗತ್ತನ್ನು ಇರುವಂತೆ ಕಲ್ಪಿಸಿಕೊಳ್ಳಬೇಕು. ಅಂತೂ ಜಗತ್ತು ಭ್ರಾಂತಿಯಾಗಿರುವ ಪಕ್ಷದಲ್ಲಿ ಸತ್ಯಜಗತ್ತಿನ ಪೂರ್ವ ಕಲ್ಪನೆ ಇದ್ದೇ ತೀರಬೇಕು. ಕೇವಲ ಭ್ರಾಂತಿಮಾತ್ರವೇ ಇರಲು ಸಾಧ್ಯವೇ ಇಲ್ಲ. ಬಾಹ್ಯ ಪ್ರಪಂಚವನ್ನು ಅಸತ್ಯಮಾಡುವ ತರ್ಕಕ್ಕೆ ಎಷ್ಟೋ ಆಕ್ಷೇಪಣೆಗಳಿವೆ. ಮಿಥ್ಯಾವಭಾಸವು ಮತ್ತೊಂದರಿಂದ ಉಂಟಾದುದು, ಮತ್ತು ಅದರ ಮೋಹಕಸಾಮರ್ಥ್ಯವು ಸತ್ಯ ಪ್ರತಿಕೃತಿಯಂತೆ ಇರುವುದನ್ನು ಅವಲಂಬಿಸಿವೆ. ಸ್ವಪ್ನವು ಜಾಗೃತಾನುಭವವೆಂದು ತೋರುವುದರಿಂದಲೇ ಮೋಹವನ್ನುಂಟುಮಾಡುತ್ತದೆ. ಜಾಗೃತಾನುಭವವಿರದೇ ಹೋಗಿದ್ದರೆ, ಸ್ವಪ್ನವೆಂಬ ಘಟನೆಯೇ ಅಸಾಧ್ಯವಾಗುತ್ತಿತ್ತು ಮತ್ತು ಅದು ವಂಚಿಸುವ ಶಕ್ತಿಯನ್ನು ಹೊಂದಿರುತ್ತಿರಲಿಲ್ಲ.

ಭೌತಿಕವಾದುದನ್ನು ತೊಡೆದು ಹಾಕುವುದಕ್ಕೆ ಮತ್ತೊಂದು ಮಾರ್ಗವಿದೆ. ಅದು ಅಚೇತನ ಪ್ರಕೃತಿಯು ಚೈತನ್ಯದ ಬೀಜಾವಸ್ಥೆ ಅಥವಾ ಭ್ರಷ್ಟಾವಸ್ಥೆ ಎಂದು ಭಾವಿಸಬಹುದು. ಅದು ವಿಶ್ವ ಚೈತನ್ಯವಾದವಾಗುತ್ತದೆ. ಈ ದಾರ್ಶನಿಕ ಪದ್ಧತಿಯ ಸಾಧ್ಯತೆಯು ಭಾರತೀಯ ದರ್ಶನದಲ್ಲಿ ಹೆಚ್ಚು ಪ್ರಯೋಗಿಸಲ್ಪಡದೆ ಇರುವುದರಿಂದ ಅದರ ವಿವರಗಳಿಗೆ ಹೋಗಬೇಕಾಗಿಲ್ಲ. ಶ್ರೀಮನ್ಮಧ್ವರು ಇದನ್ನು ಅವರ ತತ್ವಾಧಾರದ ಮೇಲೆ ಜಡ ಮತ್ತು ಚೇತನಗಳು ಪರಸ್ಪರ ಭಿನ್ನವೇ ಹೊರತು ಒಂದು ಇನ್ನೊಂದರ ಪ್ರಕಾರವೆನ್ನುವ ವಾದವನ್ನು ವರ್ಜಿಸುತ್ತಾರೆ.

ಭೌತಿಕ ಪ್ರಪಂಚವು ಮೂಲತಃ ಸತ್ಯವೆಂದು ಪ್ರಥಮತಃ ಸಾಧಿತವಾಗಿದೆ. ಕೂಡಲೇ ಎರಡನೆಯದಾಗಿ ಹೇಳಬೇಕಾದುದು ಏನೆಂದರೆ ಇದೊಂದೇ ಏಕೈಕಸತ್ಯವಲ್ಲ. ಮೊದಲನೆಯದಾಗಿ ಚೇತನ ತತ್ವವನ್ನು ಅದು ಹುಟ್ಟಿಸುವುದಿಲ್ಲ. ಮತ್ತು ಅದರ ದಾರ್ಶನಿಕ ವಿವರಣೆಗೆ, ಭೌತವಾದಿಗಳು ನಿರರ್ಥಕವಾಗಿ ಭಾವಿಸುವಂತೆ, ಅದು ಕೀಲಿಕೈ ಆಗಿಲ್ಲ. ಮತ್ತು ತನ್ನ ಅಸ್ತಿತ್ವ ಕ್ರಿಯೆಗಳು, ಜ್ಞಾನ ಗಮ್ಯತೆ ಇವುಗಳಿಗೆ ತಾನೇ ಪರಮಾತ್ಮನನ್ನು ಅವಲಂಬಿಸಿರುತ್ತದೆ. ಅದರ ಸ್ಥಿತಿಯು, ತಟಸ್ಥ ಮತ್ತು ಕ್ರಿಯಾತ್ಮಕ ಎರಡು ಅವಸ್ಥೆಗಳಲ್ಲಿಯೂ ಬ್ರಹ್ಮನ ಶಕ್ತಿಯಿಂದಲೇ ಆಗಿದ್ದು ಅದರ ಜ್ಞೇಯತ್ವವೂ ಬ್ರಹ್ಮನ ಅಧೀನವಾಗಿದೆ. ಅದರ ಸತ್ತಾಪ್ರವೃತ್ತಿ ಪ್ರಮಿತಿಯು ಪರಮಾತ್ಮನ ಅಧೀನವೆಂಬುದು ಅಂತಿಮ ಸತ್ಯ. ಭೌತಿಕಜಗತ್ತಿನ ಸ್ಥಾನಮಾನವನ್ನು ಹೀಗೆ ದ್ವಿಮುಖವಾಗಿ ನಿರ್ಣಯಿಸುವುದರಿಂದ ದ್ವೈತದ ಪ್ರಕೃತಿಮೀಮಾಂಸೆಗೆ ಹಿನ್ನೆಲೆ ಸಿಕ್ಕಿದಂತಾಗುತ್ತದೆ. ಕಾಲದೇಶಗಳು ಭೌತಿಕವಾದುದೆಲ್ಲದರ ಗರ್ಭವಾಗಿದೆ ಮತ್ತು ಇವುಗಳಿಂದ ನಿರ್ದೇಶಿತವಾಗುವುದರಿಂದಲೇ ಅದರ ಸತ್ಯವನ್ನು ಗುರುತಿಸಿದಂತಾಗುತ್ತದೆ. ಆಗಲೇ ನಾವು ಗ್ರಹಿಸಿರುವಂತೆ, ಕಾಲ ದೇಶಗಳೇ ಸಾಕ್ಷಿ ಅನುಭವದಿಂದ ನಿಸ್ಸಂಶಯವಾದ ಸತ್ಯಗಳೆಂದು ಪ್ರಮಾಣೀಕೃತವಾಗಿವೆ. ಕಾಲದೇಶಗಳಲ್ಲಿ ನಡೆಯುವುದೆಲ್ಲದರ ಸತ್ಯವು ಕಾಲದೇಶಗಳ ಸತ್ಯದೊಂದಿಗೆ ಸೇರಿಕೊಂಡಿದೆ ಮತ್ತು ಕಾಲದೇಶಗಳ ಸತ್ಯವು ಸಾಕ್ಷಿಯ ಮೂಲ ಅನುಭವದಿಂದ ಸಿದ್ಧಪಡಿಸಲ್ಪಟ್ಟಿದೆ. ಬೌದ್ಧರು ಆತ್ಮವನ್ನು ಒಪ್ಪಿಕೊಳ್ಳದೆ ಪ್ರಪಂಚವು ಗೋಚರವಾಗಿಯೂ ಮತ್ತು ಅಗೋಚರವಾಗಿಯೂ ನಿತ್ಯಪರಿವರ್ತನೆಗೊಳಗಾಗಿದೆ ಎಂದು ವಾದಿಸಿದರು. ದ್ವೈತವು ಉಪಾಧಿರಹಿತ ಅನಿತ್ಯತೆ ಅಥವಾ ಕ್ಷಣಿಕವಾದವನ್ನು ಖಂಡಿಸುತ್ತದೆ. ಪ್ರಕೃತಿಯಲ್ಲಿ ಮೂಲವಸ್ತುವಿಗೆ ಒಂದು ಪ್ರಮಾಣದ ಶಾಶ್ವತತೆ ಇದ್ದು ಅದು ಉತ್ಪತ್ತಿ ಮತ್ತು ನಾಶಕ್ಕೆ ಸಿಕ್ಕುವುದಿಲ್ಲ ಎಂದು ದ್ವೈತವು ಸ್ಥಾಪಿಸುತ್ತದೆ. ಪ್ರಕೃತಿಯಲ್ಲಿ ಆಗುವ ಬದಲಾವಣೆಗೆ ಕಾರ್ಯಕಾರಣ ನಿಯಮದ ಆಡಳಿತವಿದೆ. ಕಾರ್ಯಕಾರಣನಿಯಮವನ್ನು ಭಾರತೀಯ ದರ್ಶನಗಳಲ್ಲಿ ಬೇರೆ ರೀತಿಯಲ್ಲಿ ಗ್ರಹಿಸಲಾಗಿದೆ. ಪ್ರಾಚೀನ ಬೌದ್ಧರ ಪ್ರತೀತ್ಯ ಸಮುತ್ಪಾದವಾದ, ನ್ಯಾಯ ವೈಶೇಷಿಕರ ಆರಂಭವಾದ, ಸಾಂಖ್ಯಯೋಗಗಳ ಸತ್ಕಾರ್ಯವಾದ, ಅದ್ವೈತದ ವಿವರ್ತವಾದ ಇವುಗಳಿವೆ. ದ್ವೈತವು ಈ ವಿವಾದದಲ್ಲಿ ಮಧ್ಯಮಪಕ್ಷವನ್ನು ಅವಲಂಬಿಸಿ ಸದಸತ್ಕಾರ್ಯವೆಂಬ ಸಿದ್ಧಾಂತವನ್ನು

ಮುಂದಿಡುತ್ತದೆ. ಪ್ರತೀತ್ಯ ಸಮುತ್ಪಾದವಾದ ಮತ್ತು ವಿತರ್ಕವಾದ ಅತಿವಾದಗಳನ್ನು ನಿರಾಕರಿಸುತ್ತದೆ. ಕಾರ್ಯಕಾರಣ ಸಂಬಂಧದಲ್ಲಿ ಕಾರಣದ ಅನುವೃತ್ತಿ ಕಾರ್ಯದ ನವೀನತೆಗಳನ್ನು ಪರಿಗಣಿಸುವ ನ್ಯಾಯವನ್ನು ಅನುಮೋದಿಸಿ ಆರಂಭವಾದ ಮತ್ತು ಸತ್ಕಾರ್ಯವಾದಗಳ ಸಮ್ಮೇಳನವನ್ನು ಪ್ರತಿಪಾದಿಸುತ್ತದೆ.

ಈ ಘಟ್ಟದಲ್ಲಿ ದಾರ್ಶನಿಕ ಪ್ರಕೃತಿ ಮೀಮಾಂಸೆಯ ವಲಯಕ್ಕೂ ವೈಜ್ಞಾನಿಕ ಅವಲೋಕನ ಪ್ರಯೋಗಗಳಿಂದ ಮಾಡುವ ಪ್ರಕೃತಿ ಸಂಶೋಧನೆಯ ವಲಯಕ್ಕೂ ಇರುವ ವಿಭಜನೆಯ ರೇಖೆಯನ್ನು ಸೂಚಿಸುವುದು ಮತ್ತು ಅದರಿಂದ ಬರುವ ತಾರ್ಕಿಕ ವಿಚಾರವನ್ನು ನೋಡುವುದು ಅಗತ್ಯ. ದಾರ್ಶನಿಕ ಪ್ರಕೃತಿ ಮೀಮಾಂಸೆಯು ವಿವರಗಳಲ್ಲಿ ವೈಜ್ಞಾನಿಕ ವಲಯಕ್ಕೆ ಪ್ರವೇಶಿಸಿ ವಿಜ್ಞಾನದ ಮುನ್ನಡೆಯಿಂದ ನಿರರ್ಥಕವಾಗಕೂಡದು. ಹೀಗೆಯೇ ವಿಜ್ಞಾನವೂ ಕೂಡ ತನ್ನ ಮೂಲಭೂತ ಕಲ್ಪನೆಗಳ ವಿಶಾಲವೂ ತಾತ್ವಿಕವೂ ಆದ ವ್ಯಾಖ್ಯಾನಗಳ ತನ್ನ ಪ್ರಕ್ರಿಯೆಗಳ ಮೂಲದಲ್ಲಿರುವ ಪೂರ್ವಗ್ರಹೀತ ತತ್ವಗಳ, ತನ್ನ ಸಂಶೋಧನೆಗಳ ಆಧ್ಯಾತ್ಮಿಕ ಪರಿಣಾಮಗಳ ಮೇಲೆ ತಾನೇ ನಿಬಂಧನೆ ಮಾಡಕೂಡದು. ವಿಜ್ಞಾನಿ ಹೀಗೆ ಪ್ರವರ್ತಿಸಿದರೆ ಅವನಿಗೆ ವಿಶೇಷ ಅಧಿಕಾರವಿರುವುದಿಲ್ಲ. ಏಕೆಂದರೆ ಅವನು ಭೌತಿಕ ಸಂಶೋಧನೆಯಲ್ಲಿ ತೊಡಗದೆ ಆಧ್ಯಾತ್ಮಿಕ ಮತ್ತು ವ್ಯಾಖ್ಯಾನರೂಪವಾದ ಸಮಾಲೋಚನೆಯಲ್ಲಿ ದಾರ್ಶನಿಕನ ಪಾತ್ರವನ್ನು ತೆಗೆದುಕೊಂಡಿರುತ್ತಾನೆ. ಈ ಎರಡು ವಲಯಗಳ ವಿಭಜನೆಯನ್ನು ದ್ವೈತಸಿದ್ಧಾಂತದ ನಿಲುವಿನಿಂದ ಚೆನ್ನಾಗಿ ಅನುಮೋದಿಸಬಹುದು. ಏಕೆಂದರೆ ಅದು ಪ್ರತ್ಯಕ್ಷದ ಪಾರಮಾರ್ಥ್ಯವನ್ನು ಅದರ ಸ್ವಕ್ಷೇತ್ರದಲ್ಲಿ ಒಪ್ಪಿಕೊಳ್ಳುತ್ತದೆ. ವೇದಾಂತಿಯು ಪ್ರತ್ಯಕ್ಷದಿಂದ ಸಿದ್ಧವಾದುದನ್ನು ತನ್ನ ಅಂತಿಮ ಪ್ರಮೇಯವಾದ ಪರಬ್ರಹ್ಮನೊಡನೆ ಸಂಯೋಜನೆ ಮಾಡಬೇಕಾದ ಹೊಣೆಗಾರಿಕೆ ಹೊತ್ತಿದ್ದಾನೆ. ವಿಜ್ಞಾನವು ಭೌತಿಕ ವಸ್ತುವಿನ 'ಹೇಗೆ' 'ಏನು' ಎಂಬುದನ್ನು ನಿರ್ಣಯಿಸುತ್ತದೆ. ವೇದಾಂತವು ಇದಕ್ಕೆ ಮೂಲಭೂತ ದೈವಿಕ ತತ್ವವನ್ನು ಸಮೀಕ್ಷಿಸುತ್ತದೆ.

ಭೌತವಸ್ತುವಾಗಿರುವುದರ ಪರಿಮಿತಿಯನ್ನು ಚೆನ್ನಾಗಿ ಅರಿಯಬೇಕು. ಇದರಲ್ಲಿ ಬಾಹ್ಯಪ್ರಪಂಚದ ಪದಾರ್ಥಗಳು ಮತ್ತು ಪ್ರಾಣಿಯ ಜೀವಂತ ಶರೀರವನ್ನುಂಟು ಮಾಡಿರುವ ಪ್ರಕೃತಿಯ ಅಂಶಗಳು ಸೇರಿವೆ. ಎರಡನೆಯದರಲ್ಲಿ ಬಾಹ್ಯಪ್ರಪಂಚದ ಪದಾರ್ಥಗಳಷ್ಟೇ ಅಲ್ಲದೆ ಪ್ರಾಣ, ಇಂದ್ರಿಯಗಳು ಮತ್ತು ಅಂತರಿಂದ್ರಿಯವಾದ ಮನಸ್ಸು ಎಂಬ ಅಂಶಗಳೂ ಜೊತೆಗೆ ಸೇರಿವೆ. ಪ್ರಾಚೀನ ದರ್ಶನವು ಇವುಗಳೆಲ್ಲವನ್ನು ಪಂಚೇಂದ್ರಿಯಗಳ ಸಂವಾದಿಗಳಾದ ಪಂಚಭೂತಗಳನ್ನಾಗಿ ವಿಂಗಡಿಸಿತು. ಜೈನರು, ಬೌದ್ಧರು, ನ್ಯಾಯವೈಶೇಷಿಕರು ಜಡಜಗತ್ತನ್ನು ಅಣುಗಳ ಸಂಘಾತವೆಂದು ಪ್ರತಿಪಾದಿಸಿದರು. ಅಂದರೆ, ನಾವು ಅನುಭವದಲ್ಲಿ ಕಾಣುವ ಪ್ರಕೃತಿಯು ಈ ಅಣುಗಳ ಸಮುದಾಯ ಅಥವಾ ಸಂಯೋಜನೆ. ಭೌತಪ್ರಪಂಚವು ಇನ್ನುಮುಂದೆ ಅವಿಭಾಜ್ಯವಾದ ಕಣಗಳಿಂದ ಸಂಯೋಜಿಸಲ್ಪಟ್ಟಿದೆ ಎಂಬುವ ವಿವರಣೆಯಾಗಿದೆ. ಈ ಪರಮಾಣು

ವಾದಿಗಳ ಪರಸ್ಪರ ಭೇದಗಳನ್ನು ನಾವು ನಿರ್ಲಕ್ಷಿಸೋಣ. ಇಲ್ಲಿ ಮುಖ್ಯವಾದ ಅಂಶವು
ಅವರೆಲ್ಲರೂ ಪ್ರಕೃತಿಯನ್ನು ಸಂಘಾತದಿಂದಾದುದು ಎಂದು ಭಾವಿಸಿದುದು. ಸಾಂಖ್ಯ
ಯೋಗ, ದಾರ್ಶನಿಕರು ಇನ್ನೂ ಮುಂದೆ ಹೋಗಿ, ಪಂಚಭೂತಗಳನ್ನು ಮತ್ತು
ಪ್ರಾಕೃತಿಕ ವಸ್ತುಗಳೆಲ್ಲವನ್ನು ಏಕೈಕ ಭೌತತತ್ವದ ಅತ್ಯಂತಿಕ ವಿಭಜನೆ ಎಂದು ಹೇಳಿ ಪ್ರಕೃತಿ,
ಅವ್ಯಕ್ತ, ಅವ್ಯಾಕೃತ ಎಂಬ ನಾಮಗಳನ್ನು ಅದಕ್ಕೆ ಕೊಟ್ಟರು. ಈ ವಿಭಜನೆಯ
ಆಧಾರವನ್ನು ಮೂಲವಾಗಿಯೂ ಸರ್ವವ್ಯಾಪಕವಾಗಿಯೂ ಇರುವ ಸತ್ವ, ರಜಸ್ಸು,
ತಮಸ್ಸು ಎಂಬ ಗುಣಗಳಲ್ಲಿ ಕಾಣಬಹುದು. ಈ ಮೂಲದ ವಿಭಜನೆಯ ಪ್ರಕ್ರಿಯೆಯ
ಮೂಲಕ ಇಡೀ ಜಗತ್ತು ಬ್ರಹ್ಮಾಂಡ ಮತ್ತು ಪಿಂಡಾಂಡಗಳಾಗಿ ವಿಕಾಸವಾಗುತ್ತದೆ.
ಈ ವಿವರಣೆಯಲ್ಲಿಯೂ ಪರಮಾಣುವಾದವು ವಿವರಿಸಿದ ಅಂಶಗಳನ್ನು ತನ್ಮಾತ್ರ ಮತ್ತು
ಮಹಾಭೂತಗಳು ಎಂಬ ವಿಭಜನೆಯಲ್ಲಿ ಅಳವಡಿಸಿಕೊಂಡು ಪಂಚೀಕರಣ ವಿಧಾನದಲ್ಲಿ
ಸೇರಿಸಲಾಗಿದೆ. ಈ ವಿಷಯದಲ್ಲಿ ಹೆಚ್ಚು ಪ್ರವೇಶ ಪ್ರಕೃತಕ್ಕೆ ಬೇಕಾಗಿಲ್ಲ.

ದ್ವೈತವೂ ಸೇರಿದಂತೆ ವೇದಾಂತದ ಎಲ್ಲಾ ಶಾಖೆಗಳೂ ಭೌತಿಕ ಪ್ರಪಂಚವು
ಒಂದೇ ಒಂದು ಮೂಲದಿಂದ ಉದ್ಭವಿಸಿದೆ ಎಂಬುವ ಸಿದ್ಧಾಂತಕ್ಕೆ ಒಂದಿವೆ. ಈ ಮೂಲ
ಪ್ರಕೃತಿ ಒಂದೇ. ಈ ವಿಸ್ತಾರವಾದ ಜಗತ್ ಪ್ರವೃತ್ತಿಯ ವಿವರಣೆಗೆ ಸಾಕೆಂದು
ಸಾಂಖ್ಯರು ಅಭಿಪ್ರಾಯಪಟ್ಟಿದ್ದರು. ಆದರೆ ವೇದಾಂತದ ಎಲ್ಲಾ ಶಾಖೆಗಳೂ
ಇದನ್ನು ತೀವ್ರವಾಗಿ ವಿರೋಧಿಸುತ್ತವೆ. ದ್ವೈತವು ತನ್ನದೇ ಆದ ವಿಶೇಷವಾದಗಳನ್ನು
ಒದಗಿಸುತ್ತದೆ. ಪರಮಾತ್ಮ ಅಥವಾ ಬ್ರಹ್ಮನನ್ನೇ ಒಪ್ಪಿಕೊಂಡ ಹೊರತು ಸೃಷ್ಟಿ ಕ್ರಮ
ವನ್ನು ಪೂರ್ತಿಯಾಗಿಯೂ ಸಮರ್ಪಕವಾಗಿಯೂ ಉಪಪಾದನೆ ಮಾಡುವುದಕ್ಕಾಗುವು
ದಿಲ್ಲವೆಂದು ದ್ವೈತವು ಸಾಧಿಸುತ್ತದೆ. ಪ್ರಕೃತಿಯು ವ್ಯಕ್ತಾವಸ್ಥೆಗೆ ಪರಿಣಾಮ ಹೊಂದು
ವುದಕ್ಕೆ ಈಶ್ವರ ಅಥವಾ ಬ್ರಹ್ಮನು ಆದಿಮೂಲ, ಈಶ್ವರನು ಪ್ರಪಂಚವನ್ನು ಸೃಷ್ಟಿಸಿ
ಸ್ಥಿತಿಯನ್ನು ಪ್ರಚೋದಿಸಿ, ಅದರ ಪರಿಜ್ಞಾನವನ್ನುಂಟುಮಾಡುತ್ತಾನೆ. ಅದರ 'ಸತ್ತಾ'
'ಪ್ರವೃತ್ತಿ' ಮತ್ತು ಪ್ರಮಿತಿಗಳಿಗೆ ಹೇತುವಾಗಿದ್ದಾನೆ.

ಈಶ್ವರನು ಯಾವ ವಿಧವಾಗಿ ಕಾರಣನಾಗಿದ್ದಾನೆ? ಕೆಲವು ದರ್ಶನಗಳು ಆತನು
ಉಪಾದಾನ ಮತ್ತು ನಿಮಿತ್ತ ಕಾರಣಗಳೆರಡೂ ಆಗಿದ್ದಾನೆ ಎಂದು ಹೇಳುತ್ತವೆ.
ಶ್ರೀಮನ್ಮಧ್ವರು ಈ ವಿಧದಲ್ಲಿ ಈಶ್ವರನು ಉಪಾದಾನ ಕಾರಣನಾಗಿರುವುದರಿಂದ ಅವನು
ವಿಕಾರಾರ್ಹನಾಗುತ್ತಾನೆ ಎಂದು ಇದನ್ನು ವಿರೋಧಿಸಿದರು. ಅವನು ಕೇವಲ ನಿಮಿತ್ತ
ಕಾರಣನು, ಉಪಾದಾನ ಕಾರಣನಲ್ಲ. ಇದನ್ನು ಮೇಲ್ನೋಟದಲ್ಲಿ ಮಾತ್ರ ನೋಡಿ
ದರೆ ಇದು ಭಗವಂತನ ಕಾರಣತ್ವದ ಪರಿಮಿತಿಯಂತೆ ಕಾಣುತ್ತದೆ. ಈ ಪರಿಮಿತಿಯ
ಉದ್ದೇಶವು ವಾಸ್ತವವಾಗಿ, ಈಶ್ವರನ ನಿರ್ವಿಕಾರತ್ವವನ್ನು ಯಾವ ಕುಂದೂ ಬರದಂತೆ
ರಕ್ಷಿಸಬೇಕೆಂಬುದು. ಏಕೆಂದರೆ ಉಪಾದಾನ ಕಾರಣವು ಕಾರ್ಯೋತ್ಪತ್ತಿ ಕ್ರಿಯೆಯಲ್ಲಿ
ಬದಲಾವಣೆ ಹೊಂದುತ್ತದೆ. ಆದರೆ ಬೇರೊಂದು ಉಪಾದಾನವನ್ನು ಅವಲಂಬಿಸು
ವುದರಿಂದ ಸೃಷ್ಟಿಕರ್ತನ ಪರಿಪೂರ್ಣತೆಗೆ ಧಕ್ಕೆ ಬಂದಂತಾಗುತ್ತದೆ. ಈ ಆಕ್ಷೇಪವನ್ನು

ಉತ್ತರಿಸುವುದಕ್ಕಾಗಿ ಶ್ರೀಮನ್ಮಧ್ವರು ಉಪಾದಾನ ಕಾರಣವು ಅದರ ಕಾರಣಾವಸ್ಥೆಯಲ್ಲಿಯೂ ಕಾರ್ಯಾವಸ್ಥೆಯಲ್ಲಿ ಇರುವಷ್ಟೇ ಸಂಪೂರ್ಣವಾಗಿ ಈಶ್ವರಾಧೀನವೆಂದು ಹೇಳುತ್ತಾರೆ. ಅದರ 'ಸತ್ತಾ' 'ಪ್ರವೃತ್ತಿ' ಮತ್ತು 'ಪ್ರಮಿತಿ'ಗಳು ಅವುಗಳ ಏಕೈಕ ಆಧಾರವಾದ ಈಶ್ವರನಿಂದಲೇ ಬಂದಿವೆ. ಎರಡು ಸ್ವತಂತ್ರವಾದ ಕಾರಣಗಳ ದ್ವಂದ್ವವು ಇಲ್ಲಿ ಇರುವುದಿಲ್ಲ. ಈ ಕಾರಣದಿಂದಲೇ ಶ್ರೀಮನ್ಮಧ್ವರು ಸೇಶ್ವರಸಾಂಖ್ಯವನ್ನು ಮತ್ತು ಭಗವಂತನನ್ನು ಕೇವಲ ಯಂತ್ರ ನಿರ್ವಾಹಕನಾಗಿ ಮಾಡಿ ಮತ್ತೊಂದು ಉಪಾದಾನ ಕಾರಣದ ಅವಶ್ಯಕತೆ, ಅದರಿಂದ ಬರುವ ಪರಿಮಿತಿಯನ್ನು ಕಲ್ಪಿಸುವ ದರ್ಶನಗಳನ್ನು ಖಂಡಿಸಿದರು.

ಜಡ ಜಗತ್ತು ಸರ್ವವಿಧದಲ್ಲಿಯೂ 'ವಿಷ್ಣು'ವಿಗೆ ಅಧೀನವೆಂದು ಹೇಳುವುದೇ ಶ್ರೀಮನ್ಮಧ್ವರ ಪ್ರಕೃತಿ ಮೀಮಾಂಸೆಯ ಅಂತಿಮ ಸಂದೇಶವೆನ್ನಬಹುದು. ಬಾಹ್ಯ ಪ್ರಪಂಚವು ಕಾರಣ ಕಾರ್ಯ ಎರಡು ಪಕ್ಷಗಳಲ್ಲಿಯೂ ವಿಷ್ಣುವಿನಲ್ಲಿ ಅಂತರ್ಗತವಾಗಿದ್ದು ಸರ್ವಾಂತರ್ಯಾಮಿಯಾದ ಅವನಿಂದ, ವ್ಯಾಪ್ತವಾಗಿ ಧರಿಸಲ್ಪಟ್ಟ ಸತ್ತಾಕ್ಷೇತ್ರವಾಗಿದೆ. ಜಡ ಜಗತ್ತು ಸತ್ಯವಾಗಿದ್ದರೂ ಅದರಲ್ಲಿ ಅವನದೇ ಸರ್ವಪ್ರಭುತ್ವವಿದ್ದು ಆತನ ಅನುಗ್ರಹದಿಂದಲೇ ಅದರ ಸತ್ಯತೆ ಬಂದಿದೆ.

B ದ್ವೈತದ ಪ್ರಕೃತಿ ಮೀಮಾಂಸೆಯಿಂದ ಜೀವಾತ್ಮನ ವಿಷಯಕ್ಕೆ ಬರುವುದು ಸೂಕ್ತವಾಗಿಯೂ ಸಹಜವಾಗಿಯೂ ಇದೆ. ಇದು ಅದಕ್ಕಿಂತಲೂ ಹೆಚ್ಚಿನ ತಾತ್ವಿಕ ಪ್ರಾಧಾನ್ಯ ಹೊಂದಿದೆ.

ಈ ಪರಾಮರ್ಶೆಯ ಹಿನ್ನೆಲೆ ಮತ್ತು ಆಧಾರವಾಗಿ ಎರಡು ಮುಖ್ಯ ವಿಷಯಗಳನ್ನು ಮುಂದಿಡಲಾಗಿದೆ. ಜೀವಾತ್ಮನು ಪ್ರಕೃತಿಜನ್ಯವಾದ ವಸ್ತುವಲ್ಲ. ಕೇವಲ ಭೌತವಾದವು ಬೇರೆ ಎಲ್ಲಾ ಭಾರತೀಯ ದರ್ಶನಗಳಲ್ಲಿ ಹೇಗೊ ಹಾಗೆಯೇ ದ್ವೈತ ದರ್ಶನದಲ್ಲಿಯೂ ಖಂಡಿತವಾಗಿ ಮತ್ತು ಖಚಿತವಾಗಿ ನಿರಾಕರಿಸಲ್ಪಟ್ಟಿದೆ.ಹಾಗೆಯೇ ಇದು ಪ್ರಾಚೀನ ಬೌದ್ಧ ದರ್ಶನದಲ್ಲಿ ಆತ್ಮನು ಕೆಲವು ಭೌತಿಕ ಮತ್ತು ಮಾನಸಿಕ ಅಂಶಗಳಿಂದ ಒಟ್ಟುಗೂಡಿದ ಸಂಘಾತದ್ರವ್ಯ ಮತ್ತು ಅದು ಲಯಕ್ಕೆ ವಶವಾದದು ಎಂದು ಹೇಳುವ ಅರ್ಧಭೌತಿಕವಾದಕ್ಕೂ ಅನುಮೋದನೆ ಕೊಡುವುದಿಲ್ಲ. ಜೀವಾತ್ಮನು ನಿತ್ಯನು ಮತ್ತು ಸಂಘಾತವಲ್ಲದ ವಸ್ತು. ಬಾಹ್ಯ ಅಂಶಗಳ ಹೊಡೆತಕ್ಕೆ ಸಿಕ್ಕಿ ಅವನು ಭಾಗಶಃ ವ್ಯತ್ಯಾಸಗಳನ್ನು ಹೊಂದಬಹುದು. ಆದರೆ ಅವನ ಸಾರಭೂತ ವ್ಯಕ್ತಿತ್ವವು ನಿತ್ಯವೂ ಅವಿಭಾಜ್ಯವೂ ಅವಿನಾಶಿಯೂ ಆಗಿದೆ. ಎರಡನೆಯ ವಿಷಯವು ಏನೆಂದರೆ, ಜೀವಾತ್ಮನು ಸ್ವತಂತ್ರ ತತ್ವವಾಗಿ ಅವನ ಆಗುಹೋಗುಗಳಲ್ಲಿ ಪ್ರಭುತ್ವ ಹೊಂದಿಲ್ಲ. ಅವನು ಪರತಂತ್ರನಾಗಿದ್ದು ಅವನ ಸತ್ತಾಪ್ರವೃತ್ತಿ ಪ್ರಮಿತಿಗಳಲ್ಲಿ ಪರಮೇಶ್ವರನ ಅಧೀನವಾಗಿದ್ದಾನೆ. ಸೃಷ್ಟಿ ಸ್ಥಿತಿ ಲಯಗಳ ವಿಶ್ವದ ಸಮಷ್ಟಿ ಚಕ್ರದಲ್ಲಿ ಜನನ, ಜೀವನ ಮರಣಗಳನ್ನು ಹೊಂದುತ್ತಾ ಅಂತೆಯೇ ಜಾಗ್ರತ್, ಸ್ವಪ್ನ, ಸುಷುಪ್ತಿಗಳಲ್ಲಿ ಭಗವಂತನ ಜಗದ್ವ್ಯಾಪಾರಕ್ಕೆ ವಶನಾಗಿ ಸ್ಥಿತಿಯಿಂದ ಸ್ಥಿತಿಗೆ ಹೋಗುತ್ತಾ ಇರುತ್ತಾನೆ. ಜೀವಾತ್ಮನ ಉತ್ಪತ್ತಿಯನ್ನು ಸಾಧಾ

ರಣವಾಗಿ ಹೇಳುವಾಗ ಈಶ್ವರ ಸಂಕಲ್ಪದಿಂದ ಒಂದು ಹೊಸ ಸ್ಥಿತಿಗೆ ಬಂದಿರುವುದನ್ನು ಹೇಳುವುದಾಗಿ ತಿಳಿಯಬೇಕು. ಆದುದರಿಂದ ವಿಶ್ವದ ಮೂಲದಿಂದ ಬರುವ ಪರಿಣಾಮ ವೃತ್ತಕ್ಕೆ ಸೇರಿದ್ದಾನೆ ಎಂದು ಅರ್ಥಮಾಡಿಕೊಳ್ಳಬೇಕು. ಅವನು ಪ್ರಕೃತಿಜನ್ಯನಲ್ಲ, ಪ್ರಕೃತಿಯಲ್ಲಿ ಲಯವಾಗುವುದಿಲ್ಲ ಎನ್ನುವಂತೆಯೇ ಈಶ್ವರನ ಅಧೀನನೆಂಬುದೂ ಒಂದು ಅಂತಿಮ ಸತ್ಯ.

ಜೀವನ ವಿಶೇಷ ಲಕ್ಷಣ ಅವನ ಆತ್ಮಪ್ರಜ್ಞೆ. ಈ ಆತ್ಮಪ್ರಜ್ಞೆಯು 'ಅಹಂ' ಎನ್ನುವುದರ ಸಾರ. ಈ 'ಅಹಂ' ಒಂದು ತಾತ್ವಿಕ ಪದಾರ್ಥ. ಇದನ್ನು ನೈತಿಕ ಅವನತಿಗೆ ಲಕ್ಷಣವಾದ ಅಹಂಕಾರವೆಂದು ಭ್ರಾಂತಿಗೊಳ್ಳಬಾರದು. ಆತ್ಮಪ್ರಜ್ಞೆಯಲ್ಲಿ ಯಾವ ವಿರೋಧವೂ ಇಲ್ಲ, ಅಂದರೆ, ಕರ್ತೃ ಕರ್ಮಗಳು ಒಂದಾಗಿರುವುದು ಕ್ರಿಯೆಯಲ್ಲಿ ವಿರುದ್ಧವಾಗಿದ್ದರೂ ಜ್ಞಾನದಲ್ಲಿ ಮತ್ತು ಜ್ಞಾತೃ ಜ್ಞೇಯಗಳು ಒಂದಾಗಿರುವುದು ವಿರುದ್ಧವಲ್ಲ ಇದು ಮೂಲಭೂತ ತತ್ವ – ಆದ್ದರಿಂದ ಜೀವಾತ್ಮನೆಂದರೆ ಸ್ವಾತ್ಮಪ್ರಜ್ಞೆಯುಳ್ಳ ವ್ಯಕ್ತಿ.

ಜೀವನು ಇದನ್ನನುಸರಿಸಿ, ಅಣುಸ್ವರೂಪನೆಂದೂ ಅವಿಭಾಜ್ಯನೆಂದೂ ಅಂತಿಮವಾಗಿ ಅಸ್ತಿತ್ವವುಳ್ಳವನೆಂದೂ ಪರಿಗಣಿಸಲ್ಪಟ್ಟಿದ್ದಾನೆ. ನ್ಯಾಯವೈಶೇಷಿಕರು ಹೇಳುವಂತೆ ಅಣುವಲ್ಲ. ದ್ವೈತವು ನ್ಯಾಯವೈಶೇಷಿಕರ ಅಣುವು ನಿಜವಾಗಿ ಅಣುವೆಂದು ಒಪ್ಪಿಕೊಳ್ಳುವುದಿಲ್ಲ. ನಿಜವಾಗಿಯೂ ಸಂಘಾತವಲ್ಲದ ಅಣುವು ಜೀವಾತ್ಮನು ಮಾತ್ರ. ಇದು ಪ್ರಜ್ಞೆಯ ಕೇಂದ್ರವಾಗಿದ್ದು ಭೌತಿಕ ಧರ್ಮವಾದ ದೇಶ ಹೊಂದಿರುವ ವಸ್ತುವಲ್ಲ. ಅದನ್ನು 'ವಿಭು' (ಸರ್ವವ್ಯಾಪಕ) ಎಂದು ಏಕೆ ನಿರ್ದೇಶಿಸಬಾರದು ? ಹಾಗೆ ಮಾಡದಿರುವುದಕ್ಕೆ ಮುಖ್ಯಕಾರಣ ಅದು ಪರಿಚ್ಛಿನ್ನವಾಗಿರುವುದು. ಪರಮಾತ್ಮನು ಮಾತ್ರವೇ ಸಂಘಾತರಹಿತನೂ, ಅನಂತನೂ ಆಗಿರಬಲ್ಲನು ; 'ಅಣು' ಎಂಬ ಶಬ್ದವು 'ಸಂಘಾತವಲ್ಲದ್ದು ಮತ್ತು ಪರಿಚ್ಛಿನ್ನ' ಎಂಬ ಎರಡು ಅರ್ಥಗಳನ್ನೂ ಒಳಗೊಂಡಿದೆ. ಈ ಭಾವನೆಯಲ್ಲಿ ಒಂದು ಕ್ಲೇಶವು ಭಾಸವಾಗುತ್ತದೆ. ಆತ್ಮನು, ಅಣುಮಾತ್ರವೇ ಆಗಿದ್ದಲ್ಲಿ ಪರಮಾತ್ಮ, ಇತರ ಜೀವರುಗಳು ಮತ್ತು ಪ್ರಕೃತಿ ಇವುಗಳನ್ನೆಲ್ಲಾ ಒಳಗೊಂಡ ವಿಶಾಲ ಪ್ರಪಂಚವನ್ನು ಹೇಗೆ ಅರಿಯಬಲ್ಲನು ? ಇದಕ್ಕೆ ಉತ್ತರವು, ಜೀವನು ಅಣುಮಾತ್ರನಾಗಿದ್ದರೂ ಆತನ ಜ್ಞಾನಶಕ್ತಿಯು ಕೇಂದ್ರದಿಂದ ಹರಡಿ ಇಡೀ ವಿಶ್ವವನ್ನು ಆವರಿಸಬಲ್ಲದು.

ಈ ಸ್ಪಷ್ಟೀಕರಣವು ಮುಂದಿನ ಸಮಸ್ಯೆಯನ್ನು ತಂದೊಡ್ಡುತ್ತದೆ. ಸಾಂಖ್ಯವು ಮತ್ತು ಅದ್ವೈತವು ಜೀವನು ಅವನ ಪಾರಮಾರ್ಥಿಕ ಸ್ವರೂಪದಲ್ಲಿ ಕೇವಲ ಚೈತನ್ಯ ಮತ್ತು ವ್ಯಾವಹಾರಿಕ ಜ್ಞಾತೃತ್ವ, ಕರ್ತೃತ್ವ ಮತ್ತು ಭೋಕ್ತೃತ್ವಗಳು ಅವನ ಲಕ್ಷಣಗಳಾಗಿಲ್ಲ ಎಂಬ ವಾದನನ್ನು ಮುಂದಿಡುತ್ತವೆ. ಸಾಂಖ್ಯದ ಪ್ರಕಾರ ಇವೆಲ್ಲವೂ ವಿಕಾರಾತ್ಮಕವಾದುವು. ಆದರೆ ಶುದ್ಧ ಪುರುಷನು ನಿರ್ವಿಕಾರಿ. ಅದ್ವೈತದ ಪ್ರಕಾರ ಮತ್ತೊಂದು ಆಕ್ಷೇಪಣೆ ಇದೆ – ಇದರಲ್ಲಿ ವಿಷಯ ವಿಷಯಿಗಳ ದ್ವೈತದ ಸಂಬಂಧವು ಸೇರಿದೆ, ದ್ವೈತವೆಲ್ಲವೂ ಮಿಥ್ಯವಾದುದು ಎಂಬುದು. ದ್ವೈತವು ಜೀವನ ಜೀವಿತದ

ಈ ಪರಿಮಿತಿಗಳನ್ನು ನಿರಾಕರಿಸುತ್ತವೆ. ಒಂದು ರೀತಿಯಲ್ಲಿ, ಜೀವನು ಅಷ್ಟು ತಟಸ್ಥನಾದ ಸಾಕ್ಷಿಯಲ್ಲ. ಅವನಲ್ಲಿ ಇಲ್ಲವೆಂದು ಹೇಳುವ ಈ ಅನುಭವಗಳು (ಜ್ಞಾತೃತ್ವ, ಕರ್ತೃತ್ವ ಮತ್ತು ಭೋಕ್ತೃತ್ವ) ಬೌದ್ಧದರ್ಶನದಲ್ಲಿ ಭಾವಿಸಿದಂತೆ ತೀರಾ ವಿಕಾರರೂಪಗಳಾಗಿಲ್ಲ. ಜ್ಞಾನ, ಕ್ರಿಯೆ, ಭೋಗ ಇವು ಸ್ಥಿರನಾದ ಆತ್ಮನಲ್ಲಿ ಮಾತ್ರ ಸಂಭವಿಸಬಲ್ಲವು. ಅವು ಅವಿಭಕ್ತನಾದ ಆತ್ಮನ ಜೀವಿತದ ವ್ಯಾಪಾರಗಳು. ಅದ್ವೈತದ ವಿಷಯ ವಿಷಯಿ ದ್ವೈತದ ನಿರಾಕರಣೆ ಸಾಧುವಲ್ಲ. ಜೀವನು ಎಷ್ಟೇ ಪಾರಮಾರ್ಥಿಕ ಸ್ವರೂಪಿ ಆಗಿದ್ದರೂ ಆತನ ಸತ್ವವು ಚೇತನ ಮತ್ತು ಅಚೇತನ ಪ್ರಪಂಚಗಳೊಂದಿಗೆ ಆತ್ಮಪ್ರಜ್ಞೆಯಿಂದ ಸಂಬಂಧವುಳ್ಳದ್ದು. ಹೀಗೆ ಜೀವಾತ್ಮ ತನ್ನ ನಿಜಸ್ವರೂಪದಲ್ಲಿ ಜ್ಞಾತೃ, ಕರ್ತೃ ಮತ್ತು ಭೋಕ್ತೃ ಆಗಿದ್ದಾನೆ. ಈ ಮೂರು ಮುಖಗಳೂ ಹೇಗೆ ಆತ್ಮನಲ್ಲಿ ಸಂಯೋಜನೆಯಾಗಿ ಅವನ್ನು ಒಡೆಯದೆ ಇರುತ್ತವೆ ಎಂಬುದನ್ನು 'ವಿಶೇಷ' ಎಂಬ ತಾತ್ವಿಕ ಪದಾರ್ಥವನ್ನು ವಿಶ್ಲೇಷಣೆ ಮಾಡುವಾಗ ಪರಿಶೀಲಿಸೋಣ.

ಮುಂದಿನ ಪ್ರಶ್ನೆ ಸಂಖ್ಯೆಗೆ ಸಂಬಂಧಪಟ್ಟದ್ದು, ಜೀವಾತ್ಮರು ಅನೇಕರೇ ಅಥವಾ ಒಂದೇ ಜೀವಾತ್ಮವಿದೆಯೆ ? ಅದ್ವೈತವು ಮೂಲವಾಗಿ ಆತ್ಮನು ಒಬ್ಬನೇ ಮತ್ತು ವ್ಯಾವಹಾರಿಕ ಜೀವಿಗಳು, ವಿಭಾಗಗೊಳಿಸುವ ಅನುಭವವುಳ್ಳ ಜೀವಿಗಳು ಅನೇಕವಾಗಿವೆ; ಆದರೆ ಇವು ಮಿಥ್ಯಾನುಭವ ಕೊಡುವ ಉಪಾಧಿಗಳಿಂದ ಕಂಡುಬರುವ ತೋರಿಕೆಗಳು ಎಂದು ಹೇಳುತ್ತದೆ. ದ್ವೈತದ ಪ್ರಕಾರ ಅನುಭವಗಳ ವೈವಿಧ್ಯವು ಆತ್ಮರುಗಳಿಗೆ ಸೇರಿದವು ಎಂದು ಹೇಳುತ್ತದೆ. ಆದ್ದರಿಂದ ಜೀವರು ಅನೇಕರೇ ಆಗಿದ್ದಾರೆಂದು ತಿಳಿಯಬೇಕು. ಆತ್ಮನನ್ನು ಶುದ್ಧ ಚೈತನ್ಯನಾಗಿಯೂ ಜ್ಞಾತೃತ್ವ, ಕರ್ತೃತ್ವ ಮತ್ತು ಭೋಕ್ತೃತ್ವಗಳ ವಲಯಗಳಲ್ಲಿ ಅನೇಕತ್ವ ಉಂಟುಮಾಡುವ ಅನುಭವಗಳಿಗೆ ಪಾತ್ರವಾಗಿರುವವರನ್ನು ವಿಂಗಡಿಸುವುದನ್ನು ದ್ವೈತವು ನಿರಾಕರಿಸುತ್ತದೆ. ವ್ಯಾವಹಾರಿಕ ಜೀವನು ನಿತ್ಯವಾದ ಜೀವಾತ್ಮನ ಬೆಳವಣಿಗೆ. ಉಪಾಧಿಗಳಿಂದ ಅನೇಕ ಜೀವರುಗಳು ಉತ್ಪತ್ತಿಯಾಗಿರುವಂತೆ ತೋರುವುದೆಂಬ ಕಲ್ಪನೆಯು ವಿರೋಧಗಳಿಗೆ ಸಿಕ್ಕಿರುವಂತಹುದಾಗಿದೆ. ಉಪಾಧಿಗಳನ್ನು ಸತ್ಯವೆಂದು ಪರಿಗಣಿಸಬೇಕೆ ? ಸತ್ಯವಾಗಿದ್ದಲ್ಲಿ ಆತ್ಮನು ಮತ್ತು ಉಪಾಧಿಗಳ ದ್ವೈತವು ತರ್ಕಬದ್ಧವಾಗಿಯೇ ಇರುತ್ತದೆ. ಅವುಗಳೂ ತೋರಿಕೆಗಳೇ, ಭ್ರಾಂತಿಯೇ ? ಅಸ್ತಿತ್ವವೇ ಇಲ್ಲದ ಉಪಾಧಿಯು ಮಿಥ್ಯೆಯಾದ ಜೀವಾತ್ಮನ ತೋರಿಕೆಯನ್ನು ಹೇಗೆ ನಿರ್ಮಿಸಬಲ್ಲದು ? ಮಿಥ್ಯೆಯಾದ ಉಪಾಧಿಯು ವಿಕೃತಿ ರೂಪವನ್ನು ನಿರ್ಮಿಸುವ ಉದಾಹರಣೆ ನಮಗೆ ಸಿಕ್ಕಿಲ್ಲ ಎಂದು ಶ್ರೀಮನ್ಮಧ್ವರು ತರ್ಕ ಮಾಡುತ್ತಾರೆ. ಈ ಉಪಾಧಿಯು ತೋರುವುದಕ್ಕೆ ಮತ್ತೊಂದು ಉಪಾಧಿಯ ಅವಶ್ಯಕತೆ ಇರುತ್ತದೆ. ಹೀಗೆ ಅಂತ್ಯವಿಲ್ಲದ ಕ್ಲಿಷ್ಟ ಸಮಸ್ಯೆಗಳು ಏಳುತ್ತವೆ. ಆದ್ದರಿಂದ ಜೀವಾತ್ಮರ ಅನೇಕತ್ವವನ್ನು ತಾತ್ವಿಕಸತ್ಯವೆಂದು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಸಂಖ್ಯೆಯ ವಿಷಯದಲ್ಲಿ ಇನ್ನೊಂದು ಮತ್ತೂ ಪ್ರಧಾನವಾದ ಸಮಸ್ಯೆ ಇದೆ ಪರಮಾತ್ಮನೊಂದಿಗೆ ಜೀವಾತ್ಮನು ಒಂದಾಗಿದ್ದಾನೆಯೆ? ಅಥವಾ ಅವನು ಪ್ರತ್ಯೇಕ ವಸ್ತುವೇ ? ನಾವು, ಶ್ರುತಿವಚನಗಳು ಪರಮಾತ್ಮ ಜೀವಾತ್ಮ

ರನ್ನು ಭಿನ್ನವಾಗಿ ಹೇಳುವುದನ್ನು ತಳ್ಳಿಹಾಕುವುದಕ್ಕಾಗುವುದಿಲ್ಲವೆಂದು ಆಗಲೇ ಕಂಡಿದ್ದೇವೆ. ದ್ವೈತವಲ್ಲದ್ದನ್ನು ಹೇಳುವ ವಚನಗಳು ಎನ್ನಿಸಿಕೊಂಡಿರುವುದರಲ್ಲಿಯೂ ಅದ್ವೈತವು ಪ್ರತಿಪಾದಿಸುವ ಯಾವ ಭಿನ್ನತೆಯೂ ಇಲ್ಲದ ಏಕೈಕ ಸತ್ಯವನ್ನು ನಿರ್ಣಯಿಸುವಂತಹ ಅಂತರಾರ್ಥವಿಲ್ಲ. ಜೀವಾತ್ಮನ ಇತಿಮಿತಿಯ ಅನುಭವಗಳು ಸತ್ಯವಾಗಿದ್ದರೆ ಮತ್ತು ಬ್ರಹ್ಮನಿಗಿರುವ ಕಲ್ಯಾಣಗುಣಗಳು ಬ್ರಹ್ಮನ ನೈಜ ಸ್ವಭಾವವಾಗಿದ್ದರೆ ಜೀವಾತ್ಮ ಪರಮಾತ್ಮರನ್ನು ಒಂದೇ ಎಂದು ಗಣಿಸಲಾಗುವುದಿಲ್ಲ. ಜೀವಾತ್ಮನ ಸಾರವು, ಜ್ಞಾನ ಮತ್ತು ಆನಂದಗಳಲ್ಲಿ ವ್ಯಕ್ತಿಗತವಾದ ಇತಿಮಿತಿಗಳ ಅನುಭವವನ್ನು ಬಿಟ್ಟ, ಶುದ್ಧ ಚೈತನ್ಯವಲ್ಲ : ಬ್ರಹ್ಮನು ಅವನಿಗೆ ಅಸಾಧಾರಣವಾಗಿ, ಅವನು ಅನಂತನಾದ ಪರಮಾತ್ಮ ಎಂಬ ಲಕ್ಷಣದಲ್ಲಿ ಸೇರಿಕೊಂಡಿರುವ ಗುಣಸಮೂಹವಿಲ್ಲದ, ಕೇವಲ ನಿರ್ಗುಣ ಚೈತನ್ಯನಲ್ಲ ; ಆದ್ದರಿಂದ ಜೀವಾತ್ಮನಿಗೆ ಸಹಜವಾದದ್ದನ್ನು ಒಂದು ಕಡೆ, ಮತ್ತೊಂದು ಕಡೆ ಬ್ರಹ್ಮನಿಗೆ ಸಹಜವಾದದ್ದನ್ನು ನಿಷೇಧಿಸಿ ಏಕತ್ವವನ್ನು ಹೇಳುವ ವಾದವು ಅತ್ಯಂತ ನಿರಾಧಾರವಾದುದಾಗಿದೆ. ಆತ್ಮ ಪ್ರಜ್ಞೆಯೂ ವಿಷಯ ಪ್ರಜ್ಞೆಯೂ ಇಲ್ಲದ ಚೈತನ್ಯವು ಸತ್ಯದ ವಲಯದಿಂದ ಮಾಧ್ಯಮಿಕರ 'ಶೂನ್ಯ' ವಲಯಕ್ಕೆ ಜಾರುತ್ತದೆ. ಆದ್ದರಿಂದ ಜೀವಾತ್ಮನು ಪರಮಾತ್ಮನಿಂದ ಮೂಲತಃ ಬೇರೆಯಾದವನು. ಈ ಭಿನ್ನತೆಯು 'ಸಂಸಾರ'ದಲ್ಲಿ ಉಪಾಧಿಕೃತವಾಗಿದ್ದುಕೊಂಡು ಮೋಕ್ಷದಲ್ಲಿ ಮುಕ್ತಸ್ಥಿತಿಯಲ್ಲಿ ಅತಿಕ್ರಮಿಸುವಂತಹ ತಾತ್ಕಾಲಿಕ ಮಃಸ್ಥಿತಿಯಲ್ಲ. ಶ್ರೀಮನ್ಮಧ್ವರು ಈ ಭಿನ್ನತೆಯು ಮೋಕ್ಷದಲ್ಲಿಯೂ ಮುಂದುವರಿಯುವುದೆಂದು ಹೇಳುತ್ತಾರೆ. ಇದನ್ನು ಸ್ಪಷ್ಟೀಕರಿಸುವ ಶ್ರುತಿವಚನಗಳನ್ನು ಉಲ್ಲೇಖಿಸುತ್ತಾರೆ. ತನ್ನದೇ ಆದ ವ್ಯಕ್ತಿತ್ವವು ಜೀವಾತ್ಮನ ಸತ್ವವಾಗಿದ್ದರೆ ಅದರ ನಿವಾರಣೆಯು ವಿನಾಶವೇ ಹೊರತು ಮೋಕ್ಷವಲ್ಲ. ಜೀವಗಳ ಅಳಿಸಲಾಗದ ಪರಸ್ಪರ ಭೇದ ಮತ್ತು ಅವುಗಳು ಪರಮಾತ್ಮನಿಂದ ಭಿನ್ನವಾಗಿರುವಿಕೆ ಅಷ್ಟೇ ಅಲ್ಲದೆ ಅವುಗಳ ವಿಷಯದಲ್ಲಿ ಮತ್ತೊಂದು ಅಂಶವಿದೆ. ಅವುಗಳ ಮೂಲಸ್ವರೂಪವನ್ನನುಸರಿಸಿ ಅವುಗಳ ಯೋಗ್ಯತೆಗಳಲ್ಲಿ ತಾರತಮ್ಯವಿದೆ. ಮೋಕ್ಷದಲ್ಲಿಯೂ ಈ ತಾರತಮ್ಯವು ಉಳಿದುಕೊಳ್ಳುತ್ತದೆ. ಅತ್ಯಂತ ಕೆಳಗಿನ ವರ್ಗದಲ್ಲಿ ನಿತ್ಯಸಂಸಾರಿಗಳು ಅಂದರೆ ಕರ್ಮಚಕ್ರದಲ್ಲಿಯೇ ನಿರಂತರವಾಗಿ ಸಿಕ್ಕಿಕೊಂಡಿರುವವರು, ಮತ್ತು ನಿತ್ಯಬದ್ಧರು ಅಂದರೆ ಅಂಧತಮಸ್ಸಿಗೆ ಹೋಗುವವರು ಎಂಬ ಎರಡು ಪಂಗಡಗಳಿವೆ. ಇದು ಬಹಳ ಕ್ರೂರವಾದ ವಾದ. ಆದರೆ ಶ್ರೀಮನ್ಮಧ್ವರು ಕೆಲವು ಶ್ರುತಿವಚನಗಳಲ್ಲಿ ಖಚಿತವಾಗಿ ಈ ಅರ್ಥವಿರುವುದನ್ನು ಕಾಣುತ್ತಾರೆ. ಈ ನಿತ್ಯಬದ್ಧರ ವಾದವು ಮಧ್ವರ ವಾದ ಮಾತ್ರವಲ್ಲ. ಮತಸಾಹಿತ್ಯದ ಇತಿಹಾಸದಲ್ಲಿ ಅಷ್ಟು ಪ್ರಚಲಿತವಾಗಿರದಿದ್ದರೂ ಇದು ಪರಿಚಯವಾಗಿರುವ ವಿಷಯ. ಕ್ರೈಸ್ತ ಮತದ ಕೆಲವು ಶಾಖೆಗಳಲ್ಲಿ ಇದನ್ನು ಒತ್ತಿ ಹೇಳಲಾಗಿದೆ. ಆಧುನಿಕ ಮತೀಯ ತತ್ವಶಾಸ್ತ್ರಜ್ಞರ ಪೈಕಿ ಟ್ಯಾಟೆನಸ್ ಎಂಬುವವನು ತೊಡೆಯಲಾರದಂತಹ ಅಸಿಷ್ಟಗಳು ಇವೆ ಎಂಬ ತೀರ್ಮಾನಕ್ಕೆ ಬಂದಿದ್ದಾನೆ. ಇದು ದ್ವೈತ ಅಭಿಪ್ರಾಯಕ್ಕೆ ಸಮೀಪವಾಗಿದೆ. ಜೈನ ದರ್ಶನದಲ್ಲಿ 'ಭವ್ಯ ಜೀವಿಗಳು' 'ಅಭವ್ಯ ಜೀವಿಗಳು' ಎಂಬ

ವರ್ಗೀಕರಣವನ್ನು ನಮಾಡಲಾಗಿದೆ. ಎರಡನೆಯ ವರ್ಗವು ಮೋಕ್ಷಕ್ಕೆ ಅರ್ಹವಲ್ಲ. ವೇದಾಂತ ದೇಶಿಕರು ವಿಶಿಷ್ಟಾದ್ವೈತಕ್ಕೆ ಸಮೀಪವಾದ ಒಂದು ಪಂಗಡದಲ್ಲಿ ಇಂತಹ ಭಾವವಿರುವುದನ್ನು ಸೂಚಿಸುತ್ತಾರೆ. ದ್ವೈತವಲ್ಲಿ ಇದನ್ನು ತಾರತಮ್ಯವಾದವೆಂದು ಕರೆಯಲಾಗಿದೆ.

ಈಗ ನಾವು ಜೀವಾತ್ಮ ತತ್ವದಲ್ಲಿ ಶಿಖರ ಪ್ರಾಯವಾದ ತತ್ವಾಂಶಕ್ಕೆ ಬರುತ್ತೇವೆ. ಜೀವಾತ್ಮನನ್ನು ಪರಮಾತ್ಮನಿಂದ ಭಿನ್ನವಾಗಿ ತಿಳಿದಿದ್ದಾಯಿತು. ಬ್ರಹ್ಮನೊಂದಿಗೆ ಸೇರಿದವನು ಎಂದು ಕೂಡ ಶಾಸ್ತ್ರಗಳಲ್ಲಿ ಹೇಳಲಾಗಿದೆ. ಭಗವಂತನ 'ಅಂಶ'ಗಳು ಎಂದು ಸಂಧಿಗೊಳಿಸುವ ವಾಕ್ಯವಿದೆ. 'ಅಂಶ'ದ ಭಾವನೆ ಜೀವನಿಗೆ ಖಚಿತವಾಗಿ ಅನ್ವಯಿಸಲಾಗಿದೆ ಎಂಬುವನ್ನು ಅನೇಕ ಶ್ರುತಿಗಳಲ್ಲಿ ಭಗವದ್ಗೀತೆಯಲ್ಲಿ, ಬ್ರಹ್ಮಸೂತ್ರಗಳಲ್ಲಿ ಕಾಣುತ್ತೇವೆ. ಶ್ರೀಮನ್ಮಧ್ವರು ಇದನ್ನು ಪೂರ್ಣವಾಗಿ ಒಪ್ಪಿಕೊಂಡು ಒಂದು ಅವಶ್ಯಕವಾದ ಸ್ಪಷ್ಟಗೊಳಿಸುವ ಅಂಶವನ್ನು ಸೇರಿಸಿದ್ದಾರೆ. ಅಂಶಗಳಲ್ಲಿ ಎರಡು ವಿಧವಿದೆ. (i) ದೈವತ್ವದೊಂದಿಗೆ ಸೇರಿಕೊಂಡಿರುವ ಸಾಕ್ಷಾತ್ ಅಂಶವಾಗಿರುತ್ತದೆ. 'ಅಂಶಿ' ಮತ್ತು 'ಅಂಶಗಳಿಗೆ' 'ವಿಶೇಷ' ಮಾತ್ರವಲ್ಲದೆ ಬೇರ್ಪಡಿಸುವಂತಹ ಭೇದವು ಇಲ್ಲ. ಭಾಗವತವು ಈ 'ವಿಶೇಷ' ತತ್ವವನ್ನು 'ಕೃಷ್ಣಸ್ತು ಭಗವಾನ್ ಸ್ವಯಂ' ಎಂಬ ವಾಕ್ಯದಲ್ಲಿ ಅರ್ಥಪೂರ್ಣವಾಗಿ ಹೇಳುವುದನ್ನು ಶ್ರೀಮನ್ಮಧ್ವರು ಉಲ್ಲೇಖಿಸುತ್ತಾರೆ. ಜೀವಬ್ರಹ್ಮರಿಗೆ ಭೇದವನ್ನು ಅಂತಿಮ ಸತ್ಯವಾಗಿ ಹೇಳಿರುವುದರಿಂದ ಪ್ರಕೃತ ಸಂದರ್ಭಕ್ಕೆ ಈ 'ಅಂಶ'ದ ವ್ಯಾಖ್ಯಾನವು ಹೊಂದುವುದಿಲ್ಲ. (ii) 'ಅಂಶ' ಶಬ್ದಕ್ಕೆ ಬೇರೊಂದು ಅರ್ಥವೂ ಇದೆ. ಕೇಂದ್ರ ತತ್ವದೊಂದಿಗೆ ಅವಿಭಾಜ್ಯವಾಗಿ ಸೇರಿಕೊಂಡು, ಅದಕ್ಕಿಂತ ಭಿನ್ನವಾಗಿದ್ದರೂ ಸಮಾನ ಧರ್ಮವನ್ನು ಹೊಂದಿರುವ 'ಅಂಶ'ವಾಗಿರಬಹುದು. ಇದು 'ವಿಭಿನ್ನಾಂಶ'ವೆನ್ನಿಸಿಕೊಂಡಿದೆ. ಹಿಂದೆ ಹೇಳಿದ ಸ್ವರೂಪಾಂಶವಲ್ಲ. ಜೀವನು ಬ್ರಹ್ಮನಿಂದ ಭಿನ್ನನು, ಆದರೆ ಪೂರ್ಣವಾಗಿ ಬ್ರಹ್ಮನ ಅಧೀನನಾಗಿದ್ದು ಸಹಸ್ರಾರು ರೀತಿಯಲ್ಲಿ ಅವನೊಡನೆ ಪಾರತಂತ್ರ್ಯ ಸಂಬಂಧವನ್ನು ಹೊಂದಿರುವವನು. ಬ್ರಹ್ಮನೊಡನಿದ್ದು ಜ್ಞಾನಾನಂದಗಳನ್ನು ತನ್ನ ಯೋಗ್ಯತಾನುಸಾರ ಅವನಿಂದ ಕೊಡಲ್ಪಟ್ಟ ಅಂದರೆ ಅಣುಪ್ರಮಾಣದಲ್ಲಿ ಹಂಚಿಕೊಳ್ಳುತ್ತಾನೆ. ಅತ್ಯಂತ ಭಿನ್ನತೆ, ಅತೀವ ಪಾರತಂತ್ರ್ಯ, ಭಾಗಶಃ ಸ್ವಭಾವ ಸಾದೃಶ್ಯ ಇವುಗಳು "ವಿಭಿನ್ನಾಂಶದ" ಗಮನಾರ್ಹ ಲಕ್ಷಣಗಳು. ಜೀವನು ಬ್ರಹ್ಮನ ಇಂತಹ 'ಅಂಶ'. ಈ ತ್ರಿವಿಧ ಲಕ್ಷಣಗಳನ್ನು ಒಂದು ರೂಪಕದಲ್ಲಿ ಹೇಳುವುದಾದರೆ ಜೀವನನ್ನು 'ಪ್ರತಿಬಿಂಬ'ವೆಂದು ಕರೆಯಬಹುದು. ಪ್ರತಿಬಿಂಬವು ಮೂಲದಿಂದ ಭಿನ್ನವಾದುದು. ಪೂರ್ತಿ ಅದನ್ನು ಅವಲಂಬಿಸಿದೆ ಮತ್ತು ಅನುರೂಪವಾದುದು. ಈ ರೂಪಕವು ತಪ್ಪುಕಲ್ಪನೆಯನ್ನು ಹುಟ್ಟಿಸಬಹುದು. ಏಕೆಂದರೆ ಅದ್ವೈತದರ್ಶನದಲ್ಲಿ ಅದರಲ್ಲಿಯೂ ವಿವರಣ ಸಂಪ್ರದಾಯದಲ್ಲಿ ಇದನ್ನು ಬೇರೆ ಅರ್ಥದಲ್ಲಿ ಪ್ರಯೋಗಿಸಲಾಗಿದೆ. ಪ್ರತಿಬಿಂಬವು ಅಸತ್ಯವೆಂದೂ ಒಂದು ಉಪಾಧಿಯಲ್ಲಿ ಪ್ರತಿಫಲಿತವಾಗಿದೆಯೆಂದೂ ಅದರಲ್ಲಿ ಹೇಳಲಾಗಿದೆ. ಶ್ರೀಮನ್ಮಧ್ವರ ಪ್ರಕಾರ 'ಪ್ರತಿಬಿಂಬ'ವು ಅಸತ್ಯತೆಯನ್ನು ಒಳಗೊಂಡಿಲ್ಲ

ಮತ್ತು ಉಪಾಧಿಯ ಮಾಧ್ಯಮವನ್ನು ಉಪಯೋಗಿಸಿಕೊಳ್ಳುವುದಿಲ್ಲ. ಜೀವನು ಅವರನು, ವಿಷ್ಣುವಿನ ಪಾರಮಾರ್ಥಿಕ ಪ್ರತಿಬಿಂಬ, ಅದರ ಪ್ರತಿಬಿಂಬತ್ವಕ್ಕೆ ಏಕೈಕ ಕಾರಣ ಅವರ ಸ್ವರೂಪವೆ. ಅದನ್ನು "ಸ್ವರೂಪೋಪಾಧಿಕ ಪ್ರತಿಬಿಂಬ" ಅಥವಾ "ನಿರುಪಾಧಿಕ ಪ್ರತಿಬಿಂಬ" ಎಂದು ಕರೆಯಲಾಗಿದೆ. ಅದ್ವೈತದ ಶಾಬ್ದಿಕ ಸಾಮ್ಯವನ್ನು ತಳ್ಳಿಹಾಕಿದರೆ ಈ ಭಾವನೆಯು ಸ್ಪಷ್ಟವಾಗುತ್ತದೆ. ಜೀವನ ಸ್ವರೂಪವನ್ನು ವಿಚಾರ ಮಾಡುವಾಗ ಅವನನ್ನು ಅಗಣಿತವಾಗಿ ಮೀರಿ, ಅವನನ್ನು ಇರುವಂತೆ ಮಾಡಿ, ಭಾಗಶಃ ಸದೃಶ ಲಕ್ಷಣಗಳನ್ನು ಕೊಟ್ಟು ಇರುವ ಈಶ್ವರನ ವಿಚಾರಕ್ಕೆ ಆಕರ್ಷಿತವಾಗುತ್ತೇವೆ. ಆಂಜನೇಯನು ಶ್ರೀರಾಮನ ಸಂದೇಶವನ್ನು ಹೊತ್ತು ತರುವಂತೆ 'ಪ್ರತಿಬಿಂಬ'ವು "ಬಿಂಬ"ದ ಚಿತ್ರವನ್ನು ಹೊತ್ತು ತರುತ್ತದೆ.

ಜೀವನ ಪಾರತಂತ್ರ್ಯವು ದ್ವೈತ ವೇದಾಂತದ ಎಂದೆಂದಿಗೂ ಘೋಷಿಸಲ್ಪಡುವ ಮಹಾಮಂತ್ರ. ಮೊದಲನೆಯದಾಗಿ ಅವನ ಸತ್ತಾ, ಪ್ರವೃತ್ತಿ, ಪ್ರಮಿತಿಗಳು ಭಗವಂತನಿಂದ ಹರಿದು ಬರುತ್ತದೆ. ಭಗವಂತನ ಜಗತ್ ವ್ಯಾಪಾರವು ಎಂಟು ಮುಖವುಳ್ಳದ್ದು. ಅದರಲ್ಲಿ ಸೃಷ್ಟಿ, ಸ್ಥಿತಿ, ಲಯ, ನಿಯಮನ, ಜ್ಞಾನದ ತಿರೋಧನ, ಜ್ಞಾನೋದಯ, ಬಂಧನ ಮತ್ತು ಮೋಕ್ಷ ಇವುಗಳು ಸೇರಿವೆ. ಇವುಗಳಲ್ಲಿ ಮೊದಲನೆಯ ನಾಲ್ಕನ್ನು ಜೀವಾತ್ಮನ ಸಂಬಂಧವಾಗಿ ಸಮಂಜಸವಾಗುವಂತೆ ಅರ್ಥಮಾಡಬೇಕು. ಏಕೆಂದರೆ ಅಚೇತನ ಪ್ರಕೃತಿಗೆ ಅನ್ವಯಿಸುವಂತೆ, ಇಲ್ಲಿ ಅನ್ವಯಿಸುವುದಿಲ್ಲ. ಉಳಿದ ನಾಲ್ಕು ವ್ಯಾಪಾರಗಳು ಜೀವಾತ್ಮನಿಗೆ ಮಾತ್ರ ಅನ್ವಯವಾಗುತ್ತವೆ. ಭಗವಂತನು ಆತ್ಮಗಳನ್ನು ಅವರ ಯೋಗ್ಯತಾನುಸಾರ ಸಾಂಸಾರಿಕ ಅಜ್ಞಾನಕ್ಕೆ ಹಾಕಿ ಅವರಿಗೆ ಮೋಚಕವಾದ ಜ್ಞಾನೋದಯವನ್ನುಂಟುಮಾಡುತ್ತಾನೆ. ಅದರ ಅಪರಾಧಗಳಿಗನುಸಾರವಾಗಿ ಬಂಧನವಾಗುವುದಕ್ಕೆ ಅವನೇ ಕಾರಣಾತ್ಮಕ ಶಕ್ತಿ. ಅವರು ವಿಮೋಚನೆಗೆ ಸತತ ಪ್ರಯತ್ನ ಮಾಡಿದಾಗ ಓಗೊಟ್ಟು ಔದಾರ್ಯದಿಂದ ಮುಕ್ತರಾಗುವಂತೆ ಮಾಡುತ್ತಾನೆ. ಈ ನಾಲ್ಕರಲ್ಲಿ, ಅಂದರೆ ಅಜ್ಞಾನ, ಜ್ಞಾನೋದಯ, ಬಂಧ, ಮೋಕ್ಷಗಳಲ್ಲಿ ಭಗವಂತನ ನ್ಯಾಯಪರ ಶಕ್ತಿ ಮತ್ತು ಕೃಪೆ ಎರಡೂ ಕಾರ್ಯಗತವಾಗಿವೆ. ಕಲ್ಯಾಣ ಪ್ರದ, ಮತ್ತು ಉತ್ತಾರಕವಾದುದೆಲ್ಲವೂ, ಮತ್ತು ಆತ್ಮೋದ್ಧಾರದಿಂದ ಬರುವ ಆನಂದದಾಯಕವಾದುದೆಲ್ಲವೂ ಭಗವಂತನ ಕೃಪೆಯಿಂದಲೇ ವರ್ಷಿಸುತ್ತವೆ, ಸರ್ವ ಕಲ್ಯಾಣಕ್ಕೂ ಆತನ ಕೃಪೆಯೇ ಉತ್ತಮೋತ್ತಮ ಉಗಮ ಸ್ಥಾನ. ಈ ಶ್ರೇಷ್ಠ ಶ್ಲೋಕದಲ್ಲಿ ಈ ಸತ್ಯವು ಅಡಕವಾಗಿದೆ. "ಅಜ್ಞಾನಾಂ ಜ್ಞಾನದೋ ವಿಷ್ಣುಃ, ಜ್ಞಾನಿನಾಂ ಮೋಕ್ಷದಸ್ತ್ವಸಃ" "ಆನಂದದಶ್ಚ ಮುಕ್ತಾನಾಂ ಸ ಏವ ಏಕೋ ಜನಾರ್ದನಃ" ಅಜ್ಞಾನಿಗಳಿಗೆ ವಿಷ್ಣು ಜ್ಞಾನದಾಯಕನು. ಜ್ಞಾನಿಗಳಿಗೆ ಮೋಕ್ಷಪ್ರದನು. ಅವನೇ ಅದೇ ಜನಾರ್ದನನು ಮುಕ್ತರಿಗೆ ಆನಂದದಾಯಕನು, ಮೋಕ್ಷಕ್ಕೆ ಸಾಧಕವಾದ ಜ್ಞಾನವು ಮತ್ತು ಪರಮಗತಿಯಾದ ಮೋಕ್ಷವು ಆತನ ವರಗಳು. ಮುಕ್ತಿಯಲ್ಲಿಯೂ ಆತ್ಮನನ್ನು ಅಪಾರವಾದ ಆನಂದದಿಂದ ತುಂಬುವುದೂ ಅವನ ಕೃಪೆಯೇ. ಜೀವಾತ್ಮ ತತ್ವವನ್ನು, ಯಾವ

ಭಗವತ್ಕೃಪೆಯಲ್ಲಿ ಅವನ ಜಾಡು ಬೀಡುಗಳಿವೆಯೋ ಅವಕ್ಕೆ ಸ್ತೋತ್ರಾಂಜಲಿಯನ್ನರ್ಪಿಸಿ ಉಪಸಂಹಾರ ಮಾಡೋಣ.

C ಎಲ್ಲಾ ತಾತ್ವಿಕ ಸಮಾಲೋಚನೆಗಳೂ ಜ್ಞಾನಮೀಮಾಂಸೆಯಾಗಲೀ ಪ್ರಕೃತಿ ಮತ್ತು ಆತ್ಮನ ಜಿಜ್ಞಾಸೆಗಳಾಗಲೀ ದ್ವೈತ ಸಿದ್ಧಾಂತದ ಹೃದಯಪ್ರಾಯವಾದ ಪರಮ ಸತ್ಯವಾದ ಬ್ರಹ್ಮ ಅಥವಾ ವಿಷ್ಣುವಿನ ಕಡೆಗೆ ಅಂತಿಮವಾಗಿ ಸಾಗುತ್ತವೆ. ದಾರ್ಶನಿಕ ಭೂಮಿಕೆಯಲ್ಲಿ ಅವನು ಸ್ವತಂತ್ರ ಕೇಂದ್ರವಾಗಿದ್ದಾನೆ. ಆತನು ಆತ್ಮಪ್ರಜ್ಞೆಯುಳ್ಳ ಪರಮಾತ್ಮನಾಗಿರುವದರಿಂದ ಅವನು ಉನ್ನತೋನ್ನತ ವ್ಯಕ್ತಿತ್ವವುಳ್ಳವನು. ಗೀತೆಯು ಆತನನ್ನು ಔಚಿತ್ಯಪೂರ್ಣವಾಗಿ "ಪುರುಷೋತ್ತಮ"ನೆಂದು ವರ್ಣಿಸುತ್ತದೆ. ವೇದಗಳ ಪರಮ ತಾತ್ಪರ್ಯವು ಆತನು ಮತ್ತು ಅನಂತಮಹಿಮೆ ಎಂಬುವನ್ನು ಆಗಲೇ ನೋಡಿದ್ದೇವೆ. ಅಲ್ಲದೆ ಆತನನ್ನು ಇತರ ಯಾವ ಪ್ರಮಾಣಗಳಿಂದಲೂ ಅರಿಯಲಾಗುವುದಿಲ್ಲ. ಇಂದ್ರಿಯಗಳು ಭೌತಿಕ ವಸ್ತುಗಳಿಗೆ ಸೀಮಿತವಾದುವು. ಬ್ರಹ್ಮಜ್ಞಾನದ ಔನ್ನತ್ಯಕ್ಕೆ ಏರಲಾರವು. ಅನುಮಾನವು ಪ್ರತ್ಯಕ್ಷ ಮತ್ತು ಶಬ್ದಗಳು ಪ್ರಸ್ತುತ ಮಾಡುವುದನ್ನು ಸ್ಪಷ್ಟೀಕರಿಸುತ್ತದೆ ಮತ್ತು ಕ್ರೋಢೀಕರಿಸುತ್ತದೆ. ತನ್ನಿಂದಲೇ ಏನನ್ನೂ ತಿಳಿಸಲಾರದು. ಇತರ ಎರಡು ಪ್ರಮಾಣಗಳು ಒದಗಿಸುವುದನ್ನು ಅತಿಕ್ರಮಿಸಿದಾಗ ಅದು ಅನಿಶ್ಚಿತ ಕಲ್ಪನೆಗಳಲ್ಲಿ ಮತ್ತು ಅನಿವಾರ್ಯ ವಿರೋಧಗಳಲ್ಲಿ ನಿಲ್ಲಬೇಕಾಗುತ್ತದೆ. ಆದ್ದರಿಂದ ವೇದಗಳು ಮಾತ್ರವೇ ಬ್ರಹ್ಮಜ್ಞಾನಕ್ಕೆ ಮಾರ್ಗವು. ನಾವು ಖಂಡಿತ ಮಾಡಿಕೊಳ್ಳಬೇಕಾಗಿರುವುದೇನೆಂದರೆ, ಈ ಮಾರ್ಗದ ಅವ್ಯಕ್ತತೆಯು ದೋಷತ್ವದಲ್ಲಿ ಸಂದೇಹಾಸ್ಪದವಾಗಿ ಇರುವದರಿಂದಲ್ಲ. ವಿಚಾರವು ಒದಗಿಸುವ ನಿರ್ಣಯಗಳಲ್ಲಿ ಮಿತಿ ಇರುವುದರಿಂದ. ವಿಚಾರವು ಇತರ ಪ್ರಮಾಣಗಳಿಗೆ ಉಪಕರಣವಾಗಿ ಅತಿ ಚಾತುರ್ಯದಿಂದ ಕೆಲಸ ಮಾಡಬಲ್ಲದು. ಅವುಗಳ ಹೇಳಿಕೆಗಳನ್ನು ಸ್ಪಷ್ಟಪಡಿಸಬಲ್ಲದು, ಕ್ರೋಢೀಕರಿಸಬಲ್ಲದು, ಸಮರ್ಥಿಸಬಲ್ಲದು. ಆದರೆ ಅವುಗಳನ್ನು ಬಿಟ್ಟು ಸ್ವಾತಂತ್ರ್ಯವನ್ನವಲಂಬಿಸಿದರೆ ಅದು ಅಸಾಧ್ಯವಾದ ಕಲ್ಪನೆಗಳನ್ನು ಹೆಣೆಯುತ್ತದೆ. ಈ ಪ್ರಸಂಗದಲ್ಲಿ ಅಪರೋಕ್ಷ ಜ್ಞಾನವೂ ಸಹಾಯಕವಾಗಲಾರದು, ಏಕೆಂದರೆ ಅದು ಆಧ್ಯಾತ್ಮ ಸಾಧನೆಯ ಪರಿಣಾಮವಾಗಿ ಬಂದಿರುವುದಾದ್ದರಿಂದ ಜ್ಞಾನಕ್ಕೆ ಆಧಾರವನ್ನು ಒದಗಿಸಲಾರದು. ಆದ್ದರಿಂದ ವೇದಾಂತ ಶಾಸ್ತ್ರಗಳು ಮಾತ್ರವೇ ಪರಮ ಸತ್ಯವನ್ನರಿಯುವುದಕ್ಕೆ ಮಾರ್ಗದರ್ಶಿಗಳು. ಉಪನಿಷತ್ತುಗಳು ಬ್ರಹ್ಮನನ್ನು "ಅದ್ವೈತಂ ಪರಮಾರ್ಥತಃ" ಎಂದು ವರ್ಣಿಸುತ್ತವೆ. ಶ್ರೀಮನ್ಮಧ್ವರು ಈ ಶ್ರುತಿ ವಾಕ್ಯಕ್ಕೆ, ಮಹತೋ ಮಹೀಯಾನ್ ಅವನು ಮತ್ತು ಸಾದೃಶ್ಯರಹಿತವಾದುದು ಎಂಬ ಅರ್ಥವನ್ನು ಕೊಡುತ್ತಾರೆ.

ಈ ಪರಮೋತ್ಕೃಷ್ಟತೆಯು ವೈಶಿಷ್ಟ್ಯವು ಬ್ರಹ್ಮನ ಆದರೆ ಯಥೋಚಿತವಾಗಿ ವಿಷ್ಣುವಿನ, ಗುಣಾತ್ಮಕ ವೈಭವದಿಂದ, ಬಂದಿರುವುದು. ಪರಮಾತ್ಮನಾದವನು ನಿರ್ಗುಣನಾಗಿರುವನೆಂಬ ಪ್ರಸಕ್ತಿಯೇ ಬರುವುದಿಲ್ಲ. ಪ್ರಕೃತಿ ಮತ್ತು ಜೀವರ ಗುಣಗಳಿಗೆ ಅಥವಾ ಗುಣದೋಷಗಳಿಗೆ ಅವನು ದೂರನಾಗಿರುವನು ಎಂಬ ನ್ಯಾಯವಾದ ಅರ್ಥದಲ್ಲಿ ಮಾತ್ರ

ನಿರ್ಗುಣನೆನ್ನಬಹುದು. ಪರಬ್ರಹ್ಮನನ್ನು ಉತ್ಕೃಷ್ಟ ಗುಣಗಳಿಂದ ಪೂರ್ಣ ವೈಭವದಲ್ಲಿರುವವನು ಎಂದು ವಿವರಿಸುವುದಕ್ಕಾಗಿಯೇ 'ಅನಂತ'ನೆಂದು ನಿರ್ದೇಶಿಸಿರುವುದು. "ಮುಖ್ಯಾನಂತಗುಣೇ ಅನಂತ ಗುಣತಃ ಅನಂತವಗ್ರಹೇ" "ಮಹದ್ ಗುಣತ್ವಾತ್ ಅನಂತಂ ಆಹುಃ" "ಭಗವಾನ್ ಅನಂತಃ ಅನಂತ ಗುಣಾರ್ಣವಃ"

ಈ ಘಟ್ಟದಲ್ಲಿ ನಾವು ಇದುವರೆಗೂ ಮುಂದಕ್ಕೆ ಹಾಕಿದ್ದ 'ವಿಶೇಷ' ಎಂಬ ಪ್ರಮುಖ ಪದಾರ್ಥದ ಚರ್ಚೆಯನ್ನು ತೆಗೆದುಕೊಳ್ಳಬೇಕು. ಭಗವಂತನ ಗುಣಸಂಪತ್ತನ್ನು ಹೇಳುವಾಗ ನಾವು ದುರ್ಗಮ ಕ್ಷೇತ್ರವನ್ನು ಪ್ರವೇಶಿಸುತ್ತಿದ್ದೇವೆ. ಭಗವಂತನ ಸ್ವರೂಪವನ್ನೂ ಆತನ ಗುಣಸಂಪತ್ತನ್ನೂ ನಿರ್ದೇಶಿಸಿ ಅವುಗಳ ಸಂಬಂಧವನ್ನು ನಿಷ್ಕೃಷ್ಟವಾಗಿ ನಿರ್ಣಯಿಸಬೇಕು. ದ್ವೈತವು ಈ ವಿಷಯದಲ್ಲಿ ನಾಲ್ಕು ತಪ್ಪು ಕಲ್ಪನೆಗಳನ್ನು ತೋರಿಸಿಕೊಡುತ್ತದೆ. ಮೊದಲನೆಯದು ಬ್ರಹ್ಮನು ನಿರ್ಗುಣನೆನ್ನುತ್ತದೆ. ಎರಡನೆಯದು ಬ್ರಹ್ಮನಿಗೆ ಗುಣಗಳಿವೆ ಆದರೆ ಸ್ವರೂಪದಿಂದ ಅವು ಪೂರ್ತಿ ಭಿನ್ನವಾಗಿವೆ ಎಂದು ಹೇಳುತ್ತದೆ. ಮೂರನೆಯದು ಎರಡರ ಸಂಬಂಧವು 'ಭೇದಾ ಭೇದ'ವೆಂದು ಹೇಳುತ್ತದೆ. ನಾಲ್ಕನೆಯದು ಎರಡು ವಿಧವಾದ ಗುಣಗಳು, ಬಾಹ್ಯವಾದುವು ಅಂತರಿಕವಾದವು ಇವೆ. ಅಂತರಿಕ ಗುಣಗಳು ಬ್ರಹ್ಮನ ಸ್ವರೂಪವೇ ಆಗಿವೆ. ಬಾಹ್ಯವಾದುವು ಸ್ವರೂಪದಿಂದ ಭಿನ್ನವಾಗಿವೆ ಎಂದು ಹೇಳುತ್ತದೆ. ದ್ವೈತವು ಈ ನಾಲ್ಕು ಕಲ್ಪನೆಗಳನ್ನು ಖಂಡಿಸುತ್ತದೆ. ಅದರ ವಿವರಣೆ ಏನೆಂದರೆ ಗುಣಗಳಿವೆ, ಸ್ವರೂಪದೊಂದಿಗೆ ಸೇರಿಕೊಂಡಿವೆ ಆದರೂ 'ವಿಶೇಷ' ಎಂಬ ತತ್ವದಿಂದ ಅವುಗಳನ್ನು ಭಾವನೆ ಮತ್ತು ಶಬ್ದಗಳಲ್ಲಿ ಬಿಡಿಸಿ ನೋಡಲು ಸಾಧ್ಯವಾಗುತ್ತದೆ. 'ವಿಶೇಷ' ಎಂಬ ಪದಾರ್ಥವು ಸ್ವರೂಪವನ್ನೂ ಗುಣಗಳನ್ನೂ ವ್ಯಾಖ್ಯಾನದಲ್ಲಿ ಬಿಡಿಸಿ ನೋಡುವಂತೆ ಮಾಡುವುದಾದರೂ ಈ ಭಿನ್ನತೆಯಿಂದ ಸ್ವರೂಪಕ್ಕೂ ಗುಣಗಳಿಗೂ ಇರುವ ಮೂಲ ಐಕ್ಯಕ್ಕೆ ಧಕ್ಕೆ ಬರದಂತೆ, ಗುಣಗಳಲ್ಲಿ ಇರುವ ಐಕ್ಯಕ್ಕೆ ಧಕ್ಕೆ ಬರದಂತೆ ನಿರ್ವಹಿಸುತ್ತದೆ.

ಅಪ್ಪಯ್ಯ ದೀಕ್ಷಿತರು, 'ವಿಶೇಷ' ತತ್ವವನ್ನು ಬ್ರಹ್ಮಜೀವರಿಗಿರುವ ಸಂಬಂಧಕ್ಕೂ ವಿಸ್ತರಿಸಿ ಜೀವಬ್ರಹ್ಮರ ದ್ವೈತವನ್ನು ಕೈ ಬಿಡಬಹುದಾಗಿತ್ತು ಎಂದು ವಾದಿಸುತ್ತಾರೆ. ಆದರೆ ಸ್ವಭಾವತಃ ವಿರೋಧವಾಗಿರುವ, ಪರಿಪೂರ್ಣತೆಗಳಿಂದ ಕೂಡಿರುವ ಬ್ರಹ್ಮನಿಗೆ ನಿಷೇಧಿಸಲಾಗದಂತಹ ಪರಿಮಿತಿಗಳಿಂದ ಕೂಡಿರುವ ಜೀವನಿಗೆ, 'ವಿಶೇಷ' ತತ್ವವನ್ನು ಅನ್ವಯಿಸಿ ಒಂದುಗೂಡಿಸಲಾಗುವುದಿಲ್ಲ. ಈ 'ವಿಶೇಷ' ತತ್ವವು ಬ್ರಹ್ಮ ಮತ್ತು ಅದರ ಗುಣಸಂಪತ್ತುಗಳಿಗೆ ಮಾತ್ರ ವಿವರಣಾತ್ಮಕವಾಗಿರದೆ ಬೇರ್ಪಡಿಸಲಾರದ ಧರ್ಮಗಳನ್ನುಳ್ಳ ವಸ್ತುಗಳೆಲ್ಲಕ್ಕೂ ವಿವರಣೆ ಕೊಡುತ್ತದೆ. ಅದು ವಿಶ್ವವ್ಯಾಪಕವಾದ ದಾರ್ಶನಿಕ ತತ್ವವಾಗಿದೆ. ಅದ್ವೈತ ಪರವಾಗಿ ಕಾಣುವ ಅನೇಕ ಉಪನಿಷದ್ವಾಕ್ಯಗಳು ಬ್ರಹ್ಮನಂತರ್ಗತವಾದ ಈ ಐಕ್ಯವನ್ನೇ 'ಅದ್ವೈತ' ಎಂಬುದಾಗಿ ಬೋಧಿಸುತ್ತವೆ. ಬ್ರಹ್ಮನ ಮೂಲ ಸ್ವರೂಪಕ್ಕೂ ಅವನ ಅವತಾರಗಳಿಗೂ ಇರುವ ಸಂಬಂಧವನ್ನೂ, ಅದರ ಸ್ವರೂಪ ಮತ್ತು ವೈಷ್ಣವ ಧರ್ಮದಲ್ಲಿ ಸ್ತುತಿಸಲ್ಪಟ್ಟ ಆಕಾರಗಳಿಗೂ ಇರುವ ಸಂಬಂಧವನ್ನೂ ಪ್ರಕಾಶಪಡಿಸುತ್ತದೆ.

ಬ್ರಹ್ಮನ ಗುಣಗಳು ವಸ್ತುತಃ ಅನಂತವಾಗಿವೆ. ಜೀವರಲ್ಲಿ ಅತ್ಯಂತ ಉತ್ತಮವಾದ ಜೀವನೂ ಕೂಡ ಅವನ್ನು ಗ್ರಹಿಸಬಲ್ಲವನಾದರೂ ಪೂರ್ಣವಾಗಿ ಅಳೆಯಲಾರನು. ಗುಣಗಳು ಅಗಣಿತವಾಗಿರುವುದರಿಂದಲೇ ಉಪನಿಷತ್ತುಗಳು ವಾಙ್ಮನಗಳಿಗೆ ಸಿಗಲಾರದವನು ಎಂದು ಹೇಳುತ್ತವೆ. ಆದರೂ ಗುಣಗಳ ವರ್ಗೀಕರಣವನ್ನು ಮಾಡಬಹುದು. ಅನಂತ ಶಕ್ತಿ, ಅನಂತಜ್ಞಾನ, ದೇಶ ಕಾಲ ಸಂಬಂಧವಾದ ಅನಂತತ್ವ ಇದು ಪರತ್ವ ಸೂಚಕವಾದ ಗುಣಗಳು. ಈಶ್ವರನ ದಯಾಮಯತ್ವ, ಪ್ರಸಾದ ಇನ್ನಿತರಗಳಿವೆ; ಸೃಷ್ಟಿಯನ್ನು ಸಹ ಇವುಗಳಿಂದಾದುದೆನ್ನಲಾಗಿದೆ. ಇವು ಸತ್ಯ ಮತ್ತು ಮಹತ್ತಾದುವು. ಈ ಸಂಬಂಧದಲ್ಲಿಯೇ ಪ್ರೇಮವೂ ಬರುವುದು. ಶ್ರೀಮನ್ಮಧ್ವರು ತಮ್ಮ ಕೃತಿಗಳನ್ನು ತಮ್ಮ ಭಗವತ್ಪ್ರೇಮದ ಆನಂದಾನುಭವವನ್ನು ಪ್ರಶಂಸಿಸಿ ಮುಗಿಸುತ್ತಾರೆ. ಅವರ ಕೃತಿಗಳಲ್ಲಿ ಇದು ಸಾಮಾನ್ಯವಾಗಿದೆ. ಪ್ರೇಮವು ಭಗವಂತನನ್ನು ಮನುಷ್ಯತ್ವಕ್ಕೆ ಇಳಿಸುವುದಿಲ್ಲ. ಅತ್ಯಂತ ಶ್ರೇಷ್ಠ ದೇವಮಾನವನಲ್ಲಿಯೂ ನಿಜವಾಗಿ ಅತ್ಯಲ್ಪ ಪ್ರಮಾಣದಲ್ಲಿ ಮಾತ್ರ ನಮಗೆ ಕಾಣುವ ಪ್ರೇಮವೆಂಬ ಅಪೂರ್ವ ಗುಣದ ಉಗಮ ಸ್ಥಾನವನ್ನು ಮನವರಿಕೆ ಮಾಡುವಂತಹುದು. ಈ ಭಗವತ್ಪ್ರೇಮವನ್ನು ಶ್ರೀಮನ್ಮಧ್ವರು ಆರಾಧಿಸುವುದು ಆಶ್ಚರ್ಯವೇನಲ್ಲ. ಏಕೆಂದರೆ ಅವರು ಲೋಕಾತೀತ ಪ್ರೇಮದ ಮಹಾಗಾಥೆಯಾದ ಭಾಗವತದ ಪರಮ ಭಕ್ತರಾಗಿದ್ದರು. ಅವರು ತಮ್ಮ ಗೀತಾಭಾಷ್ಯದಲ್ಲಿ ಭಗವಂತನ ಪ್ರೇಮವನ್ನು ಕುರಿತು ಭಗವಂತನು ಭಕ್ತನಿಗಾಗಿ ತನ್ನ ಸ್ವಾತಂತ್ರ್ಯ ಮತ್ತು ಮಹಾತ್ಮ್ಯವನ್ನು ಕೊಡ ಬದಿಗಿಟ್ಟು ಭಕ್ತನ ವಶನಾಗುತ್ತಾನೆ ಎಂದು ಹೇಳುತ್ತಾರೆ. ನಾವು ಶ್ರೀಮನ್ಮಧ್ವರ ವಾದ ಸಾಮರ್ಥ್ಯಕ್ಕೆ ಮರುಳಾಗಿ – ಅದು ಅದ್ಭುತವಾಗಿದ್ದರೂ – ಅವರು ಪ್ರೇಮ ಪ್ರಸಾದಮಯ ಭಗವಂತನಲ್ಲಿಟ್ಟಿದ್ದ ಅನುರಾಗೋಪ್ರೇಕವನ್ನು ಉದಾಸೀನ ಮಾಡಬಾರದು.

ಶ್ರೀಮನ್ಮಧ್ವರಿಗೆ ಭಗವಂತನು ಅನಂತ ಸೌಂದರ್ಯವೂ ಆಗಿದ್ದಾನೆ. ಅತನ ಆಕಾರವೆಂದು ನಾವು ಕರೆಯುವಂತಹುದು ವರ್ಣನಾತೀತ ಆನಂದಪ್ರದವಾದದು. ಆ ಸೌಂದರ್ಯವು ಭೌತಿಕ ಉಪಾಧಿಯುಳ್ಳ, ಅಂಶ ಅಂಶದಲ್ಲಿಯೂ ಚೈತನ್ಯಮಯ. ಅದರಲ್ಲಿ ಪರಮ ಸೌಂದರ್ಯವು ಘನೀಭೂತವಾಗಿದೆ. ಶ್ರೀ ಆಚಾರ್ಯರು ತಮ್ಮ ದ್ವಾದಶ ಸ್ತೋತ್ರವೆಂಬ ಮಹಾಸ್ತೋತ್ರ ಕಾವ್ಯದಲ್ಲಿ ನಿರರ್ಗಳವಾಗಿ ಹಾಡುತ್ತಾ ಮೈಮರೆತು ಈ ಸೌಂದರ್ಯದಲ್ಲಿ ಮಗ್ನರಾಗುತ್ತಾರೆ. ಮದೋನ್ಮತ್ತರಾಗಿ ಅದರಲ್ಲಿಯೇ ತಲ್ಲೀನರಾಗಿ ಆನಂದಪರವಶರಾಗುವಂತೆ ಅದು ಮಾಡುತ್ತದೆ. ಇಲ್ಲಿ ಪುನಃ ನಾವು ಶ್ರೀಮದ್ಭಾಗವತವನ್ನು ಸ್ಮರಿಸಬಹುದು.

ವಿಷ್ಣುವಿನ ಮುಖ್ಯ ಗುಣಗಳ ವಿವರಣೆ ಹೀಗಿರುವಾಗ ಆಚಾರ್ಯರು ಅಲ್ಪಮತಿಯಾದ ಮಾನವನು ಅವುಗಳನ್ನು ಪೂರ್ಣವಾಗಿ ಅರಿಯುವುದು ಅಸಾಧ್ಯವೆಂದು ಒತ್ತಿ ಹೇಳುತ್ತಾರೆ. ಆದರೆ ಧ್ಯಾನಕ್ಕೋಸ್ಕರವಾಗಿಯಾದರೂ ಅತ್ಯಂತ ಸ್ಪಷ್ಟವಾಗಿರುವ ಗುಣಗಳನ್ನಾದರೂ ಗ್ರಹಿಸಿ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಆಚಾರ್ಯರು ಪರಿಣಾಮಕಾರಿಯಾದ ಧ್ಯಾನದಲ್ಲಿ ಅಳವಡಿಸಬೇಕಾದ ಭಗವಂತನ ನಾಲ್ಕು ಲಕ್ಷಣ ವಿಶೇಷಗಳನ್ನು ಸತ್–ಚಿತ್–

ಆನಂದ–ಆತ್ಮತತ್ವವೆಂದು ಹೇಳುತ್ತಾರೆ. ಬ್ರಹ್ಮನು ಶುದ್ಧ ಸತ್ಯ, ಶುದ್ಧ ಚೈತನ್ಯ ಶುದ್ಧ ಆನಂದ ಮತ್ತು ಎಲ್ಲದರ ಪರಮಾತ್ಮ, ಇವು ಕನಿಷ್ಟವಾದ ಅವಶ್ಯಕತೆಯಾಗಿದ್ದು ಇವುಗಳನ್ನು ಬಿಟ್ಟು ಯಾರೂ ಬ್ರಹ್ಮಧ್ಯಾನವನ್ನಭ್ಯಾಸ ಮಾಡಲಾಗುವುದಿಲ್ಲ. ಈ ಕನಿಷ್ಟವನ್ನು ದಾಟ ಜೀವಾತ್ಮರು ತಮ್ಮ ಯೋಗ್ಯತಾನುಸಾರ ಮತ್ತು ತಮ್ಮ ಆಧ್ಯಾತ್ಮಿಕ ಪ್ರಗತಿಗನುಸಾರವಾಗಿ ಹೋಗಬಹುದು. ಅದರ ಸಾಕ್ಷಾತ್ಕಾರದ ಎಲ್ಲೆಯು ಜೀವಾತ್ಮರ ತಾರತಮ್ಯದಿಂದ ನಿರ್ಣಯವಾಗುತ್ತದೆ.

ಇದುವರೆಗೆ ಭಗವಂತನ ಗುಣೋತ್ಕರ್ಷವನ್ನು ನೋಡಿದೆವು. ಇದರಿಂದಲೇ ಆತನು ಜಡ, ಚೇತನಗಳನ್ನು ಬಂಧಮೋಕ್ಷಗಳಲ್ಲಿ ಮೀರಿದವನು, 'ಅಕ್ಷರ' ಎಂದು ಕರೆಸಿಕೊಳ್ಳುವ 'ಲಕ್ಷ್ಮಿ'ಯನ್ನು ಸಹ ಮೀರಿದವನು. ಆದರೆ ಆತನು 'ಪರಾತ್ಪರ' ಮಾತ್ರನಲ್ಲ ಸಾಂಖ್ಯ ದರ್ಶನದ 'ನಿಷ್ಕ್ರಿಯ ಪುರುಷ'ನಲ್ಲ ಅದ್ವೈತದ 'ನಿಷ್ಪ್ರಪಂಚ ಬ್ರಹ್ಮನಲ್ಲ'. ಚರಾಚರ ಜಗತ್ತಿನಲ್ಲಿ ಜಗದ್ವ್ಯಾಪಾರದಿಂದ ಅನಂತರ್ಯಾಮಿಯಾಗಿರುವನು. ಆತನಿಗೆ, ಪರಮಾತ್ಮನಾದವನಿಗೆ ಈ ವ್ಯಾಪಾರವೇಕೆ ? ಪರಿಪೂರ್ಣನೂ ಆತ್ಮತೃಪ್ತನೂ ಆಗಿರುವಾಗ ಆತನು ಬಯಸುವುದೇನಿದೆ ? ಯಾವ ಉದ್ದೇಶ ಸಾಧನೆ ಇದೆ ? ಇದಕ್ಕೆ ಆಚಾರ್ಯರ ಅಸಾಧಾರಣ ಉತ್ತರವಿದೆ. ನಮಗೆ ತಿಳಿದಮಟ್ಟಿಗೆ ಮತ್ತಾವ ವೇದಾಂತಿಗಳೂ ಈ ಕಲ್ಪನೆಯವರೆಗೆ ಬಂದಿಲ್ಲ. ಶ್ರೀಮನ್ಮಧ್ವರು ತಮ್ಮ ಅನೇಕ ಬೃಹತ್ಕೃತಿಗಳಲ್ಲಿ ಇದನ್ನು ಪದೇ ಪದೇ ಹೇಳಿದ್ದಾರೆ. ಛಾಂದೋಗ್ಯ ಉಪನಿಷತ್ತಿನ ಏಳನೆಯ ಅಧ್ಯಾಯದ ವ್ಯಾಖ್ಯಾನದಲ್ಲಿ ಬ್ರಹ್ಮನನ್ನು ಭೂಮನ್ ಎಂದು ಪರಿಚಯ ಮಾಡಿಕೊಡುವಾಗ ಈ ವಿಷಯವನ್ನು ಸೇರಿಸಿದ್ದಾರೆ. ಎಲ್ಲಾ ಕ್ರಿಯೆಗಳೂ ಅನಿಷ್ಟ ನಿವಾರಣೆಯ ಅಪೇಕ್ಷೆಯಿಂದ ಪ್ರಚೋದಿತವಾಗುವುದಿಲ್ಲ ಅಥವಾ ದೊರಕದೆ ಇರುವ ಇಷ್ಟಗಳ ಪೂರ್ತಿಗಾಗಿ ಮಾಡುವುದಲ್ಲ, ಕಲಾತ್ಮಕ ಸ್ವಕ್ರಿಯೆಗಳ ಸಾದೃಶ್ಯದ ಮೇಲೆ, ಪರಿಪೂರ್ಣತೆಯನ್ನು ಸಾಧಿಸಿದಾಗ ಅದರಿಂದ ದೊರಕುವ ಆನಂದಾತಿರೇಕವೇ ತಡೆಯಲಾರದ ಕ್ರಿಯಾಕಾರಕವಾಗಬಹುದು. ಇದು ಇಷ್ಟಪೂರ್ತಿಗಾಗಿ ಮಾಡುವ ಕಾರ್ಯವಲ್ಲ. ಇಷ್ಟಪೂರ್ತಿಯಿಂದಲೇ ತೊಡಗುವ ಕಾರ್ಯಕಲಾಪ. ಪರಿಪೂರ್ಣತೆಯು ತುಂಬಿ ತುಳುಕಿ ಕ್ರಿಯಾಶಕ್ತಿಯಾಗಿ ಪ್ರವಹಿಸುತ್ತದೆ. ಈ ಅಭಿಪ್ರಾಯದ ಅಂತರಾರ್ಥವು ಬಹುದೂರಗಾಮಿ. ಅಪಾರ ಸಮೃದ್ಧಿಯ ಶಕ್ತಿಯ ಮೂಲ ಸೃಷ್ಟ್ಯಾತ್ಮಕ ಕ್ರಿಯಾಶೀಲನಾದ ಪರಮಾತ್ಮನನ್ನು ನಮ್ಮ ಮುಂದೆ ಇಡುತ್ತದೆ. ಇನ್ನೊಂದು ದೃಷ್ಟಿಯಿಂದ, ಅಲ್ಪಮಾನವರು ತಮ್ಮ ಕುಂದುಕೊರತೆಗಳ ನಿವಾರಣೆಗೆ ಶ್ರಮ ಪಡುತ್ತಾ ಉಪಯೋಗಿಸುವ ಕ್ರಿಯಾಶಕ್ತಿಯೂ ಕೂಡ ಯೋಗ್ಯತೆಗನುಸಾರವಾಗಿ ಅಲ್ಪವಾಗಿಯೇ ಇರುತ್ತದೆ. ಪರಿಮಿತಿಗೊಳಗಾಗಿರುವವನು ನಿರ್ಮಿಸುವುವರಲ್ಲಿ ಪರಿಮಿತಿ ಇದ್ದೇ ಇರುತ್ತದೆ. ಪೂರ್ಣ ಚೇತನನು ತಾನಿರುವಂತೆಯೇ ಕ್ರಿಯಾಶಕ್ತಿಯಲ್ಲಿಯೂ ಸೀಮಾತೀತನಾಗಿರುತ್ತಾನೆ.

ಭಗವಂತನ ಜಗದ್ವ್ಯಾಪಾರವು ಎಂಟು ಶಾಖೆಗಳುಳ್ಳದ್ದು. ಮೊದಲನೆಯದಾಗಿ ಜಗತ್ತನ್ನು ಸೃಷ್ಟಿ ಮಾಡುವುದು. ಸೃಷ್ಟಿ ಎಂದರೆ ಶುದ್ಧ ಶೂನ್ಯದಿಂದ ಏನನ್ನಾದರೂ

ಅಸ್ತಿತ್ವಕ್ಕೆ ತರುವುದು ಎಂದಲ್ಲ. ಹಿಂದೆ ಇದ್ದುದನ್ನೇ ಒಂದು ಹೊಸ ಆಕೃತಿಗೆ ತರುವುದು ಎಂದರ್ಥ. ಜಗತ್ತಿನ ವಿಷಯದಲ್ಲಿ ನಾನಾ ನಾಮರೂಪಗಳನ್ನು ಪ್ರಕಟ ಮಾಡಿ ಬಹಿರಂಗಕ್ಕೆ ತರುವುದು. ಶ್ರೀ ಮಧ್ವಾಚಾರ್ಯರು ಸೃಷ್ಟಿಯು ಬ್ರಹ್ಮನ ಆತ್ಮ ಪರಿವರ್ತನೆಯ ಸ್ವಭಾವ ಹೊಂದಿರುವುದಲ್ಲ; ಹಾಗೆಯೇ ಯಾವ ಉಪಾದಾನ ಕಾರಣವನ್ನು ಬ್ರಹ್ಮನು ಪರಿಣಾಮರೂಪಕ್ಕೆ ತರುವನೋ ಅದು ತನ್ನದೇ ಆದ ಸ್ವಾತಂತ್ರ್ಯವನ್ನು ಕಾರಣ ಸ್ಥಿತಿಯಲ್ಲಿಯೂ ಹೊಂದಿರುವ ಪದಾರ್ಥವಲ್ಲ ಎಂದು ಸ್ಪಷ್ಟಪಡಿಸುತ್ತಾರೆ. ಬ್ರಹ್ಮನು ಕಾರಣ ನಿಯಮವನ್ನು ಕಾರ್ಯರೂಪಕ್ಕೆ ತರುವಾಗ ಯಾವುದನ್ನು ಉಪಯೋಗಿಸಿಕೊಳ್ಳುವನೋ ಅದು ಅವನದಾಗಿರದೆ ಬೇರೆ ಏನೂ ಅಲ್ಲ ಮತ್ತು ಆತನ ಶಕ್ತಿಗಧೀನವಾಗಿಯೇ ಅದು ಏನಾಗಿದೆಯೋ ಅದಾಗಿದೆ. ಆತನು ಸೃಷ್ಟಿಯಲ್ಲಿ ಸರ್ವ ನಿರ್ವಾಹಕನಾಗಿರುವುದಕ್ಕೆ ಯಾವ ರೀತಿಯಲ್ಲಿಯೂ ಕುಂದು ಬರುವುದಿಲ್ಲ.

ಮುಂದಿನ ಭಗವತ್ಕಾರ್ಯವು ಹಾಗೆ ನಿರ್ಮಿಸಲ್ಪಟ್ಟ ಪ್ರಪಂಚವನ್ನು ಸ್ಥಿತಿಗೊಳಿಸುವುದು – ವಿಶ್ವಾತೀತ ಈಶ್ವರ ವಾದವು ಹೇಳುವಂತೆ ಸೃಷ್ಟಿಯನ್ನು ಮಾಡಿ ತನ್ನಿಂದ ಅದು ಬೇರೆಯಾಗಿ ಸ್ವತಂತ್ರವಾಗಿರುವಂತೆ ಬಿಡುವ ಪರಮಾತ್ಮನಲ್ಲ. ಅದು ಸೃಷ್ಟಿಯಾದ ಮೇಲೆಯೂ ಅವನಿಗೆ ಸೇರಿರುವುದೇ. ಆದ್ದರಿಂದ ಅದನ್ನು ನಡೆಸುವವನೂ ಅವನೇ ಆಗಿದ್ದಾನೆ. ಅದರ ಮೇಲೆ ಅವನ ಪ್ರಭುತ್ವವು ಅದರ ಸತ್ತಾವಧಿಯಾಗಿರುತ್ತದೆ. ಅವನು ಕೈಬಿಟ್ಟರೆ ಅದು ಕೂಡಲೆ ಶೂನ್ಯಕ್ಕೆ ಕುಸಿದು ಬೀಳುತ್ತದೆ. ಮೂರನೆಯ ಕ್ರಿಯಾ ವಿಶೇಷವು ಪ್ರಪಂಚವನ್ನು ಅವ್ಯಕ್ತಾವಸ್ಥೆಗೆ ಮತ್ತು ಬೀಜರೂಪಕ್ಕೆ ಎಳೆದುಕೊಂಡು, ಅದು ಪುನಃ ವ್ಯಕ್ತವಾಗುವುದಕ್ಕೆ ಅವನ ಕಾರಕ ಸ್ಪರ್ಶಕ್ಕೆ ಕಾದಿರುವ ಅವಸ್ಥೆಯಲ್ಲಿಟ್ಟಿರುವುದು. ನಾಲ್ಕನೆಯ ಈಶ್ವರನ ಜಗದ್ವ್ಯಾಪಾರವು ಅದರ ಆಡಳಿತ. ಇದನ್ನು ಹೊರಗಿನಿಂದ ನಡೆಸುವ ನಿಯಂತ್ರಣವೆಂದು ಭಾವಿಸಬಾರದು. ಅಂತರ್ಯಾಮಿಯಾಗಿದ್ದು ನಡೆಸುವ ನಿಯಂತ್ರಣ. ಬೃಹದಾರಣ್ಯಕವು ಅಂತರ್ಯಾಮಿತ್ವವನ್ನು ಹೇಗೆ ಖಚಿತಗೊಳಿಸಿತೋ ಅದೆಲ್ಲಾ ಇಲ್ಲಿ ಅಭಿಪ್ರೇತವಾಗಿದೆ. ಐದನೆಯ ವ್ಯಾಪಾರವು ಸಚೇತನರಾದ ಜೀವರುಗಳಿಗೆ ಸಂಬಂಧಪಟ್ಟದ್ದು. ಅವನನ್ನು ಅದು ಅವಿದ್ಯೆಯಿಂದ ಆವರಿಸುವುದು. ಅವಿದ್ಯೆಯು ಭಾವಾತ್ಮಕ ಶಕ್ತಿ, ಕೇವಲ ಜ್ಞಾನಾಭಾವವಲ್ಲ. ಅದಕ್ಕೆ ಎರಡು ಮುಖಗಳಿವೆ. ಅದು ಜೀವನು ತನ್ನ ಸ್ವರೂಪವನ್ನು ತಿಳಿಯದಂತೆ ಮಾಡುವುದು, ಹಾಗೆಯೇ ಪರಮಾತ್ಮನನ್ನೂ ತಿಳಿಯದಂತೆ ಮಾಡುವುದು. ಭಗವಂತನು ಈ ವಿದ್ಯೆಯನ್ನು ಜೀವನ ಮೇಲೆ ಹೊರಿಸುವುದು ಸ್ವೇಚ್ಛೆಯಿಂದಲ್ಲ, ಜೀವರುಗಳ ಹಿಂದಿನ ಅಜ್ಞಾನ ಮತ್ತು ದುಷ್ಕರ್ಮ ದೋಷಗಳ ಪ್ರತಿಫಲವಾಗಿ ಇದು ಅವನಿಂದ ಬಂದ ದುಃಸ್ಥಿತಿ. ಇದು ಜೀವನ ಪೂರ್ವ ಕರ್ಮದ ನ್ಯಾಯಬದ್ಧವಾದ ಪರಿಣಾಮ. ಆರನೆಯ ಭಗವತ್ಕ್ರಿಯೆಯು ಜ್ಞಾನೋದಯವನ್ನು ದಯಪಾಲಿಸುವುದು. ಜ್ಞಾನವು ಪರಮಾತ್ಮನ ಅನುಗ್ರಹವಿಲ್ಲದೆ ಬರುವುದಿಲ್ಲ. ಈ ಅನುಗ್ರಹವನ್ನೂ ಆಧ್ಯಾತ್ಮಿಕ ಆಕಾಂಕ್ಷೆ ಮತ್ತು ಪ್ರಯತ್ನದಿಂದ ಗಳಿಸಬೇಕು. ಜ್ಞಾನವು ಎರಡು ಮಟ್ಟದ್ದು. ಅದು ಭಕ್ತಿಪೂರ್ವಕ ಶಾಸ್ತ್ರಾಧ್ಯಯನ

ಫಲವಾಗಿ ಜೀವನನ್ನೂ ಮತ್ತು ಪರಮಾತ್ಮನನ್ನೂ ಕುರಿತ ಪರೋಕ್ಷ ಜ್ಞಾನ. ಇದಕ್ಕಿಂತ ಉತ್ತಮ ಮಟ್ಟದ್ದು ಪರಮಾರ್ಥದ ಅಪರೋಕ್ಷ ಜ್ಞಾನ. ಇವೆರಡೂ ಉತ್ಸಾಹದಿಂದ ಪಟ್ಟು ಹಿಡಿದು ಮಾಡಿದ ಸಾಧನೆಗೆ ಭಗವತ್ಪ್ರಸಾದವಾಗಿ ಬರುವುವು. ಈ ದ್ವಿವಿಧ ಜ್ಞಾನಕ್ಕೆ ಕಾರಣವಾದ ಪ್ರಸಾದವು ಭಗವಂತನ ಆರನೆಯ ವ್ಯಾಪಾರ. ಏಳನೆಯದು ಬಂಧಕ್ಕೆ ಹೇತುವಾಗಿರುವಿಕೆ. ಬಂಧನೆಂದರೆ ಆತ್ಮನು ಪ್ರಕೃತಿಯಲ್ಲಿ ಸಿಕ್ಕಿಬೀಳುವುದು ಮತ್ತು ಆತ್ಮನ ಮೂಲ ಆನಂದ ಸ್ವರೂಪವೂ ಅಡಗಿ ಹೋಗಿರುವುದು. ಮತ್ತು ಭಗವದನುಭವದ ಪ್ರಾಪ್ತಿ ಇಲ್ಲದಿರುವಿಕೆ. ಈ ಸ್ಥಿತಿಯು ಜೀವನ ಹಿಂದಿನ ಅಧ್ಯಾತ್ಮಿಕ ಪತನದ ಪರಿಣಾಮವಾಗಿ ಭಗವಂತನಿಂದ ಬಂದುದು. ಭಗವಂತನ ಆಗ್ರಹವು ಆಹ್ವಾನದಂದಲೇ ಬಂದಂತೆ ಕಾಣುತ್ತದೆ. ಭಗವಂತನು ಸಮದರ್ಶಿಯೇ. ಆ ಸಮತ್ವವು ಜೀವರ ಯೋಗ್ಯತಾನುಸಾರವಾಗಿರುವ ಸಮತ್ವ. ತಾರತಮ್ಯವಿರುವ ಜೀವರಿಗೆ ಸಮನಾದ ಸನ್ಮಾನಗಳನ್ನೇ ಕೊಡುವುದು, ಕೇವಲ ಅಸಮತ್ವವೇ ಆಗುತ್ತದೆ. ಜೀವಾತ್ಮನು ಜೀವಿಯ ಮೂಲಕ ಮಾಡುವ ಪ್ರಾರ್ಥನೆಗೆ ಅನುಸಾರವಾಗಿ ಪ್ರಸಾದವು ತಪ್ಪದೆ ಬಂದೇ ಬರುತ್ತದೆ. ಕೊನೆಯದಾಗಿ, ಮುಕ್ತ್ಯರ್ಹರಿಗೆ ಮೋಕ್ಷಪ್ರಧಾನವು ಭಗವಂತನ ಎಂಟನೆಯ ಜಗದ್ವ್ಯಾಪಾರ. ಮೋಕ್ಷವು ಒಂದು ವರನೆ. ಪರತತ್ವದ ಮಹಾತ್ಮ್ಯದ ನಿಷ್ಪೃಷ್ಟ ಜ್ಞಾನವನ್ನಾಧರಿಸಿದ ಪರಾಭಕ್ತಿಯಿಂದ ಅರ್ಹತೆಯನ್ನು ಈ ವರಕ್ಕೆ ಪಡೆದಿರಬೇಕು. 'ಪರಮಭಕ್ತ'ನಾದವನಿಗೆ ಈ ಪರಮ ಪ್ರಸಾದವು ಕಿರೀಟಪ್ರಾಯ. ಮೋಕ್ಷವು ಭಕ್ತನನ್ನು ಪ್ರಕೃತಿ ಬಂಧದಿಂದ ವಿಮೋಚನೆ ಮಾಡಿ ಆತನಲ್ಲಿ ಅಡಗಿದ್ದ ಜ್ಞಾನಾನಂದಗಳನ್ನು ಪ್ರಕಾಶಗೊಳಿಸಿ, ಆನಂದಮಯ ಬ್ರಹ್ಮನು ಆತನ ಜಾಗೃತ ಪ್ರಜ್ಞೆಗೆ ಸದಾ ಸಮ್ಮುಖನಾಗಿರುವಂತೆ ಮಾಡುತ್ತದೆ.

ಶ್ರೀ ಮಧ್ವಾಚಾರ್ಯರು ಭಗವಂತನ ವೈಭವಕ್ಕೆ ತಕ್ಕಷ್ಟು ಶ್ಲಾಘನೆ ಮಾಡುವುದು ಅಸಾಧ್ಯವೆಂಬುದನ್ನು ಮನಗಂಡಿದ್ದರು. ಆದ್ದರಿಂದ ತಮ್ಮ ಅರ್ಥಗರ್ಭಿತ ಶೈಲಿಯಲ್ಲಿ 'ಸಂಯಗ್ವಿನಿರ್ಣಯ' ಅಂದರೆ ದೋಷ ಸ್ಪರ್ಶವಿಲ್ಲದ ಮತ್ತು ನಿರ್ಣಯಕವಾದ ವಾಕ್ಯಗಳಲ್ಲಿ ಮುಖ್ಯವಾದ ತತ್ವಗಳನ್ನು ಕ್ರೋಢೀಕರಿಸಿ ಹೀಗೆ ಹೇಳುತ್ತಾರೆ :—

1) ವಿಷ್ಣುವು ಅಶೇಷಗುಣ ಸಂಪದ್ಭರಿತನು.
2) ಸರ್ವ ದೋಷರಹಿತನು.
3) ಎಲ್ಲವೂ ಅವನಿಗೆ ಅಧೀನ, ಆತನು ಮಾತ್ರ ಸರ್ವ ಸ್ವತಂತ್ರ.
4) ಅವನು ಮತ್ತೆಲ್ಲದರಿಂದ ಭಿನ್ನನು, ಹಾಗಿಲ್ಲದಿದ್ದರೆ ಅವನು ದೋಷರಹಿತನಾಗಿರುತ್ತಿರಲಿಲ್ಲ.

ಹೀಗೆ ಅವರ ಭಗವತ್ ತತ್ವ ಸಮೀಕ್ಷೆಯನ್ನು ಉಪಸಂಹರಿಸಬೇಕೆಂದು ಆಚಾರ್ಯರು ನಿರೀಕ್ಷಿಸುತ್ತಾರೆ.

(ಮುಂದುವರಿಯುತ್ತದೆ)

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

—o—

- ಮಾನವಿಕ ಕರ್ನಾಟಕ
- ವಿಜ್ಞಾನ ಕರ್ನಾಟಕ
- ಪ್ರಬುದ್ಧ ಕರ್ನಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
' ಪ್ರಸಾರಾಂಗ '
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬